

TENNECO

# ನೀತಿ ಸಂಹಿತೆ

## Tenneco ದ ನೀಲಿನಕ್ಷೆ

ನಮ್ಮ ಮೂಲ ಮೌಲ್ಯಗಳು ಮುನ್ನಡೆಸುತ್ತವೆ

# ಪರಿವಿಡಿ


## ಪ್ರಾರಂಭಿಸೋಣ ....... 3

## ನಮ್ಮ ಚಾಲಕ ಶಕ್ತಿ ಯಾವುದು ? ....... 4

ನಮ್ಮ ಉದ್ದೇಶ 4
ನಮ್ಮ ಮೂಲ ಮೌಲ್ಯಗಳು 4
ನಮ್ಮ ಜನರ ಮಾದರಿ 4
ನಮ್ಮ ಸಂಹಿತೆ 5

## ನಿರ್ದೇಶನಗಳನ್ನು ಕೇಳುವುದು ....... 7

ಮುಕ್ತವಾಗಿ ಮಾತನಾಡುವುದು 7
ಪ್ರತೀಕಾರ ರಹಿತತೆ 7

## ಒಟ್ಟಿಗೆ ಗೆಲ್ಲುವುದು ....... 8

ಪರಸ್ಪರ ಗೌರವಿಸುವುದು 9
ಒಳಗೊಳ್ಳುವಿಕೆ 11
ಸುರಕ್ಷತೆಗೆ ಮೊದಲ ಆದ್ಯತೆ 13
ಮೂರನೇ ಪಕ್ಷದವರೊಂದಿಗೆ ಕೆಲಸ ಮಾಡುವುದು 15

## ನಮ್ಮ ಹೂಡಿಕೆಯನ್ನು ರಕ್ಷಿಸುವುದು ....... 17

ನಿಖರ ದಾಖಲೆಗಳು ಮತ್ತು ಹಣಕಾಸಿನ ವರದಿಗಳನ್ನು ಇರಿಸಿಕೊಳ್ಳುವುದು 18
ದಾಖಲೆಗಳ ನಿರ್ವಹಣೆ 20
ನಮ್ಮ ಆಸ್ತಿಗಳ ಬಗ್ಗೆ ಕಾಳಜಿ 22
ಗೌಪ್ಯ ಮಾಹಿತಿ ರಕ್ಷಣೆ 24
ಖಾಸಗೀತನವನ್ನು ರಕ್ಷಿಸಿಕೊಳ್ಳುವುದು 26
ಸರಕಾರಗಳೊಂದಿಗೆ ಸಂವಹನ 28
ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು 30

## ನಮ್ಮ ಉದ್ಯಮದ ಮುಖಾಂತರ ಮುನ್ನಡೆಯುವುದು ....... 31

ಭ್ರಷ್ಟಾಚಾರ ನಿಗ್ರಹ 32
ಅಪರಾಧದ ವಿರುದ್ಧ ಹೋರಾಟ 34
ನ್ಯಾಯಯುತ ಪೈಪೋಟಿ 36
ಹಿತಾಸಕ್ತಿ ಸಂಘರ್ಷಗಳನ್ನು ತಪ್ಪಿಸುವುದು 38
ಉಡುಗೊರೆಗಳು, ಮನರಂಜನೆ, ಮತ್ತು ಆತಿಥ್ಯವನ್ನು ವಿನಿಮಯ ಮಾಡಿಕೊಳ್ಳುವುದು 40
ಅಂತಾರಾಷ್ಟ್ರೀಯವಾಗಿ ವ್ಯವಹಾರ ನಡೆಸುವುದು 42

## ನಮ್ಮ ಗ್ರಾಹಕರು ಮತ್ತು ಸಮುದಾಯಗಳ ಬಗ್ಗೆ ಕಾಳಜಿ ....... 44

ಸುರಕ್ಷಿತ, ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವುದು 45
ಪ್ರಾಮಾಣಿಕವಾಗಿ ಮಾರಾಟ ಮಾಡುವುದು 47
ಜವಾಬ್ದಾರಿಯುತ ಸಂವಹನ 49
ಮಾನವ ಹಕ್ಕುಗಳ ರಕ್ಷಣೆ 51
ಪರಿಸರ ರಕ್ಷಣೆ ಮಾಡುವುದು 53
ಸಮುದಾಯಕ್ಕೆ ಮರಳಿ ನೀಡುವುದು 55

## ನಿಮ್ಮ ಪರವಾನಗಿಯನ್ನು ಪಡೆಯುವುದು ....... 57

# ಪ್ರಾರಂಭಿಸೋಣ



## Tenneco ತಂಡ:

ವಾಹನೋದ್ಯಮಕ್ಕೆ ಇದೊಂದು ರೋಚಕ ಸಮಯ ಎಂಬುದರಲ್ಲಿ ಸಂದೇಹವಿಲ್ಲ. ಬದಲಾವಣೆಯು ಕ್ಷಣಮಾತ್ರದಲ್ಲಿ ನಡೆಯುತ್ತಿರುವುದು ಮಾತ್ರವಲ್ಲದೇ, ಸ್ಪರ್ಧಾತ್ಮಕ ಜಗತ್ತು ಕೂಡ ನಾವು ವ್ಯಾಪಾರ ಮಾಡುವ ವಿಧಾನವನ್ನು ನಾಟಕೀಯವಾಗಿ ಬದಲಾಯಿಸಿದೆ.

Tenneco ದಲ್ಲಿ, ನಮ್ಮ ಮಾರ್ಗದರ್ಶಿಯಾಗಿ ಮೂಲ ಮೌಲ್ಯಗಳಾದ- ರಾಡಿಕಲ್ ಕ್ಯಾಂಡರ್, ಸರಳಗೊಳಿಸುವಿಕೆ, ಸಾಂಸ್ಥಿಕ ವೇಗ, ದೃಢವಾದ ಕಾರ್ಯಗತಗೊಳಿಸುವಿಕೆ ಮತ್ತು ಗೆಲುವು ಇವುಗಳ ಗುಂಪಿನ ಆಧಾರದಲ್ಲಿ ನಿರ್ಮಿಸಲಾದ ಅಸಾಂಪ್ರದಾಯಿಕ ಬದಲಾವಣೆಯ ಮನಸ್ಥಿತಿಗೆ ಬದಲಾಗಿ ನಾವು ಸಾಂಪ್ರದಾಯಿಕ ಮತ್ತು ಊಹಿಸಬಹುದಾದ ಚಿಂತನೆಯ ವಿಧಾನಗಳಿಂದ ದೂರ ಹೋಗುತ್ತಿದ್ದೇವೆ. ನಾವು ಬದಲಾವಣೆಯ ಮನಸ್ಥಿತಿಯನ್ನು ಅಳವಡಿಸಿಕೊಳ್ಳುವುದನ್ನು ಮುಂದುವರಿಸಿದರೆ ಮತ್ತು ನಮ್ಮ ಮೂಲ ಮೌಲ್ಯಗಳಿಗೆ ಒಲವು ತೋರಿದರೆ, ವಿಶ್ವದ ಅತ್ಯಂತ ವಿಶ್ವಾಸಾರ್ಹ ಪಾಲುದಾರ ಮತ್ತು ವಾಹನ ಉದ್ಯಮದಲ್ಲಿ ಅತ್ಯುತ್ತಮ ತಯಾರಕರಾಗುವ ಮಾರ್ಗವು ವಾಸ್ತವವಾಗುತ್ತದೆ.

ನಾವು ಹೆಚ್ಚಿನ ಪಟ್ಟಿಯನ್ನು ಹೊಂದಿದ್ದೇವೆ, ಆದರೆ ನಾವು ಮಾಡಲು ಹೊರಟಿದ್ದನ್ನು ಸಾಧಿಸಲು ನಮ್ಮ ಸಾಮೂಹಿಕ ಸಾಮರ್ಥ್ಯಗಳಲ್ಲಿ ನನಗೆ ವಿಶ್ವಾಸವಿದೆ. ಆದಾಗ್ಯೂ, ನಾವು ಹೇಗೆ ಯಶಸ್ಸನ್ನು ಸಾಧಿಸುತ್ತೇವೆ ಎಂಬುದು ಮುಖ್ಯವಾದುದು ಮತ್ತು ಅದು ಸಮಗ್ರತೆಯಿಂದ ಪ್ರಾರಂಭವಾಗುತ್ತದೆ ಮತ್ತು ಕೊನೆಗೊಳ್ಳುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳುವುದು ನಮಗೆ ಮುಖ್ಯವಾಗಿದೆ - ಇದು ನಾವು ಮಾಡುವ ಎಲ್ಲದರ ಅಡಿಪಾಯವಾಗಿದೆ. ನಾವು ಯಾವಾಗಲೂ ಸರಿಯಾದ ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಲು ಬದ್ಧರಾಗಿರಬೇಕು ಮತ್ತು ನಮ್ಮ ವ್ಯವಹಾರಕ್ಕೆ ಅನ್ವಯವಾಗುವ ಎಲ್ಲಾ ಕಾನೂನುಗಳು, ನಿಬಂಧನೆಗಳು ಮತ್ತು ನೀತಿಗಳನ್ನು ಅನುಸರಿಸಬೇಕು.

ಸರಿಯಾದ ಕೆಲಸವನ್ನು ಮಾಡುವುದು ಸ್ಪಷ್ಟವಾಗಿಲ್ಲದ ಪರಿಸ್ಥಿತಿಯನ್ನು ನೀವು ಎದುರಿಸಬಹುದು, ಈ ಕಾರಣಕ್ಕಾಗಿಯೇ ನಾವು ನೀತಿ ಸಂಹಿತೆಯನ್ನು ಹೊಂದಿದ್ದೇವೆ. ಇದು ನಮ್ಮ ಗ್ರಾಹಕರು, ಪಾಲುದಾರರು ಮತ್ತು ಪರಸ್ಪರರ ನಂಬಿಕೆ ಮತ್ತು ವಿಶ್ವಾಸವನ್ನು ಗಳಿಸಲು ನಮಗೆ ಸಹಾಯ ಮಾಡುವ ರೀತಿಯಲ್ಲಿ ನಾವು ಕಾರ್ಯನಿರ್ವಹಿಸುತ್ತೇವೆ ಮತ್ತು ವರ್ತಿಸುತ್ತೇವೆ ಎಂದು ಖಚಿತಪಡಿಸಿಕೊಳ್ಳಲು ಉದ್ದೇಶಿಸಿರುವ ಪ್ರಮುಖ ತತ್ವಗಳ ಗುಂಪಿನೊಂದಿಗೆ ನಮಗೆ ಮಾರ್ಗದರ್ಶನ ನೀಡುತ್ತದೆ. ಇದು ಪ್ರಶ್ನೆಗಳು ಅಥವಾ ಕಳವಳಗಳ ಕುರಿತಾಗಿ ಹೇಗೆ ಮಾತನಾಡಬೇಕು ಎಂಬುದಕ್ಕೆ ಮಾರ್ಗಸೂಚಿಗಳು ಮತ್ತು ಉದಾಹರಣೆಗಳೊಂದಿಗೆ ಕಠಿಣ ಸಂದರ್ಭಗಳಲ್ಲಿಯೂ ಸಹ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ನಿಮಗೆ ಅಧಿಕಾರ ನೀಡುವ ಸಾಧನವಾಗಿದೆ.

ಯಶಸ್ಸಿಗೆ ಪ್ರತಿಯೊಬ್ಬರ ವೈಯಕ್ತಿಕ ಬದ್ಧತೆಯ ಅಗತ್ಯವಿರುತ್ತದೆ. ದಯವಿಟ್ಟು ನಮ್ಮ ನೀತಿ ಸಂಹಿತೆಯನ್ನು ಪರಿಚಯ ಮಾಡಿಕೊಳ್ಳುವ ಮೂಲಕ ನಿಮ್ಮ ಕರ್ತವ್ಯವನ್ನು ನಿಭಾಯಿಸಿ ಮತ್ತು ಅದನ್ನು ಆಗಾಗ್ಗೆ ಉಲ್ಲೇಖಿಸಿ.

ಧನ್ಯವಾದಗಳು,

Jim Voss

*ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ*



# ನಮ್ಮ ಚಾಲಕ ಶಕ್ತಿ ಯಾವುದು

ನಮ್ಮ ಜನರೇ ನಮ್ಮ ಚಾಲಕ ಶಕ್ತಿ. ಪ್ರತಿದಿನವೂ ನಾವು ಇವುಗಳನ್ನು ನಮ್ಮೊಂದಿಗೆ ಕೆಲಸಕ್ಕೆ ತರುತ್ತೇವೆ:

- ಅತ್ಯುತ್ತಮವಾಗಿರಬೇಕೆಂಬ ತುಡಿತ
- ಪ್ರತಿಯೊಂದನ್ನೂ ಕೂಲಂಕುಷವಾಗಿ ಗಮನಿಸುವ ಶಿಸ್ತು
- ಸ್ಪರ್ಧಾತ್ಮಕ ಛಲ
- ಬದ್ಧತೆಗಳನ್ನು ಪೂರೈಸುವ ಒಂದು ಕಠಿಣ ಸಂಕಲ್ಪ

# ನಮ್ಮ ಜನರ ಮಾದರಿ

Tenneco ಜನರ ಮಾದರಿಯನ್ನು ನಮ್ಮ ಮೌಲ್ಯಗಳ ಆಧಾರದ ಮೇಲೆ ರಚಿಸಲಾಗಿದೆ. ವ್ಯಕ್ತಿಗಳಾಗಿ ನಾವು ಹೇಗೆ ಕಾರ್ಯನಿರ್ವಹಿಸುತ್ತೇವೆ ಎಂಬುದು ಒಂದು ಕಂಪನಿಯಾಗಿ ನಾವು ಹೇಗೆ ಕಾರ್ಯನಿರ್ವಹಿಸುತ್ತೇವೆ ಎಂಬುದನ್ನು ಅವಲಂಬಿಸಿರುತ್ತದೆ. ಪ್ರಾಮಾಣಿಕತೆ ಯಿಂದ ನಮ್ಮ ವ್ಯಾಪಾರ ಗುರಿಗಳನ್ನು ಸಾಧಿಸುವುದಕ್ಕಾಗಿ ಸಿದ್ಧವಾಗಲು ನಮ್ಮ ಸಂಹಿತೆಯು ನಿಮಗೆ ಸಹಾಯ ಮಾಡುತ್ತದೆ.




**Tenneco ದ ಶಕ್ತಿಯನ್ನು ಪರೀಕ್ಷಿಸಲು ನಮ್ಮ ಜನರ ಸಾಮರ್ಥ್ಯವನ್ನು ಹೊರಗೆಳೆದು ಅತ್ಯುತ್ತಮವಾದದ್ದನ್ನು ಆರಿಸುವುದು**

- **ಅತ್ಯುತ್ತಮವಾದದನ್ನು ಆರಿಸುವುದು** — ಉತ್ತಮ ಫಲಿತಾಂಶಗಳನ್ನು ನೀಡುವ ಉನ್ನತ ಪ್ರತಿಭೆಗಳು
- **ಉತ್ತಮ ಪರಿಸರ ಸೃಷ್ಟಿಸಿ** — ಅಂತರ್ಗತ, ಮುಕ್ತ, ಸಹಕಾರಿ
- **ನಿರ್ಮಾಣ ಮತ್ತು ಅಭಿವೃದ್ಧಿ** — ಭವಿಷ್ಯದ ಕೇಂದ್ರೀಕೃತ ಸಾಮರ್ಥ್ಯಗಳು ಮತ್ತು ನಾಯಕತ್ವ
- **ಮನ್ನಣೆ ಮತ್ತು ಬಹುಮಾನ** — ಕಾರ್ಯಕ್ಷಮತೆ, ಮೌಲ್ಯಗಳು ಮತ್ತು ತಂಡದ ಕೆಲಸ

# ನಮ್ಮ ಉದ್ದೇಶ

ವಿಶ್ವದ ಹೆಚ್ಚು ವಿಶ್ವಾಸಾರ್ಹ ಪಾಲುದಾರ ಮತ್ತು ಆಟೋಮೋಟಿವ್ ಉದ್ಯಮದಲ್ಲಿನ ಅತ್ಯುತ್ತಮ ತಯಾರಕರು.

# ನಮ್ಮ ಮೂಲ ಮೌಲ್ಯಗಳು

## ರಾಡಿಕಲ್ ಕ್ಯಾಂಡರ್

ನಾವು ಫಲಪ್ರದವಾದ ಚರ್ಚೆಯಲ್ಲಿ ತೊಡಗಿಕೊಳ್ಳಬೇಕು ಮತ್ತು ರಚನಾತ್ಮಕ ವ್ಯಾಪ್ತಿಯನ್ನು ನಿರ್ಮಿಸಬೇಕು. ಧನಾತ್ಮಕ ಉದ್ದೇಶದೊಂದಿಗೆ, ಮುಕ್ತರಾಗಿರಿ ಮತ್ತು ಕಟ್ಟುನಿಟ್ಟಿನ ಪ್ರಾಮಾಣಿಕತೆ ಇರಲಿ. ಸತ್ಯವೇ ಸಾಮರಸ್ಯವಾಗಿದೆ.

## ಸರಳವಾಗಿರುವಿಕೆ

ನಾವು ಅಧಿಕಾರಶಾಹಿಯನ್ನು ತಿರಸ್ಕರಿಸಬೇಕು, ಪದರಗಳನ್ನು ಕಡಿಮೆಗೊಳಿಸಬೇಕು ಮತ್ತು ಪ್ರತ್ಯೇಕತೆಗಳನ್ನು ತೊಡೆದುಹಾಕಬೇಕು. ಸ್ಪಷ್ಟವಾಗಿರಿ, ಅಡೆತಡೆಗಳನ್ನು ತೊಡೆದುಹಾಕಿ, ಯೋಜನೆಯನ್ನು ಕ್ರೋಢೀಕರಿಸಿ ಮತ್ತು ಕಾರ್ಯಗತಗೊಳಿಸುವತ್ತ ಗಮನಹರಿಸಿ.

## ಸಾಂಸ್ಥಿಕ ವೇಗ

ವೇಗದ ನಿರ್ಧಾರ ತೆಗೆದುಕೊಳ್ಳುವಿಕೆ, ಕಾರ್ಯಗತಗೊಳಿಸುವ ವೇಗವನ್ನು ಸುಗಮಗೊಳಿಸುವ ಜಾಗತಿಕ ತಂಡ ಮತ್ತು ಸಾಂಸ್ಥಿಕ ರಚನೆಯನ್ನು ನಾವು ನಿರ್ಮಿಸಬೇಕು.

## ದೃಢವಾದ ಕಾರ್ಯಗತಗೊಳಿಸುವಿಕೆ

ನಮ್ಮ ಸಂಸ್ಕೃತಿಯ ತಳಹದಿ ಮತ್ತು ನಾವು ಮಾಡುವ ಎಲ್ಲದಕ್ಕೂ ಅಡಿಪಾಯವಾಗಿರುವ ಹೊಣೆಗಾರಿಕೆ ಮತ್ತು ಮಾಲೀಕತ್ವದ ಮನಸ್ಥಿತಿಯನ್ನು ನಾವು ಮುಂದುವರಿಸಿಕೊಂಡು ಹೋಗಬೇಕು.

## ಗೆಲುವು

ನಾವು ನಮ್ಮ ನೌಕರರು ಮತ್ತು ಗ್ರಾಹಕರ ನಂಬಿಕೆ ಮತ್ತು ವಿಶ್ವಾಸವನ್ನು ಗೆಲ್ಲಬೇಕು.

# ನಮ್ಮ ಸಂಹಿತೆ

## ನಮ್ಮ ಮೂಲ ಮೌಲ್ಯಗಳನ್ನು ಹೇಗೆ ಅನುಷ್ಠಾನಗೊಳಿಸುತ್ತೇವೆ ಎಂಬುದನ್ನು ನಮ್ಮ ಸಂಹಿತೆಯು ತೋರಿಸುತ್ತದೆ.

Tenneco ದಲ್ಲಿ ತಂಡದ ಪ್ರತಿಯೊಬ್ಬ ಸದಸ್ಯನ ಬಳಿಯೂ ಕೊಡುಗೆ ನೀಡಲು ಒಂದೊಂದು ವಿಶೇಷತೆಯಿದೆ. ಅದೊಂದು ಅನನ್ಯ ಕೌಶಲವಾಗಿರಬಹುದು, ಉತ್ತಮವಾಗಿ ಅಭಿವೃದ್ಧಿಹೊಂದಿದ ಪ್ರತಿಭೆಯಾಗಿರಬಹುದು ಅಥವಾ ಸುಲಭವಾಗಿ ಕೆಲಸ ಮಾಡಿಸಬಲ್ಲ ಚತುರತೆ ಇರಬಹುದು. ನಮ್ಮ ಸಾಮರ್ಥ್ಯಗಳ ನಡುವೆ ಎಷ್ಟೇ ವ್ಯತ್ಯಾಸವಿದ್ದರೂ ನಮ್ಮ ಮೂಲ ಮೌಲ್ಯಗಳಿಗೆ ಸಮಾನ ಬದ್ಧತೆಯನ್ನು ನಾವೆಲ್ಲರೂ ಹಂಚಿಕೊಂಡಿದ್ದೇವೆ.

ಈ ಮೂಲ ಮೌಲ್ಯಗಳನ್ನು ಪ್ರತಿಯೊಬ್ಬರೂ ಹೇಗೆ ಕಾರ್ಯರೂಪಕ್ಕೆ ತರಬಹುದು ಎಂಬುದನ್ನು ನಮ್ಮ ಸಂಹಿತೆಯು ತೋರಿಸುತ್ತದೆ. ನೀವು ಮಾರ್ಗದ ನಿಯಮಗಳನ್ನು ಕಲಿಯಲು, ಅಸ್ಪಷ್ಟ ಕ್ಷೇತ್ರಗಳ ಮೂಲಕ ಹಾದುಹೋಗಲು ಮತ್ತು ಇತರರ ಮೇಲೆ ಹೇಗೆ ನಿಗಾ ಇಡಬೇಕೆಂಬುದರ ಬಗ್ಗೆ ಸ್ಪಷ್ಟತೆಯನ್ನು ಪಡೆಯಲು ಇದನ್ನು ಬಳಸಬಹುದು. ಈ ರೀತಿಯಾಗಿ ನಾವು ಪರಸ್ಪರ ರಕ್ಷಣೆ ಮಾಡಿಕೊಳ್ಳುತ್ತೇವೆ ಮತ್ತು ಕಂಪನಿಯನ್ನು ರಕ್ಷಿಸುತ್ತೇವೆ.

ಸಂಹಿತೆಯು ನಿಮ್ಮ ಮಾರ್ಗದರ್ಶಿಯೇ ಆಗಿದ್ದರೂ, Tenneco ದಲ್ಲಿ ಕಾರ್ಯ ನಿರ್ವಹಣೆ ಮಾಡುವಾಗ ನಿಮ್ಮಲ್ಲಿ ಏಳುವ ಪ್ರತಿಯೊಂದು ಪ್ರಶ್ನೆಗೆ ಅದು ಉತ್ತರಿಸುವುದಿಲ್ಲ ಎಂಬುದನ್ನು ನೆನಪಿನಲ್ಲಿಡಿ. ಹಾಗೆ ನೋಡಿದರೆ, ಯಾವ ದಾಖಲೆಯಿಂದಲೂ ಇದು ಅಸಾಧ್ಯ. ಆದರೆ ಸರಿಯಾದುದನ್ನೇ ಮಾಡಲು ಬೇಕಾದ ತತ್ವಗಳು ಮತ್ತು ಸಂಪನ್ಮೂಲಗಳ ಕಡೆಗೆ ಅದು ನಿಮಗೆ ದಾರಿ ತೋರುತ್ತದೆ. ಆದ್ದರಿಂದ, ಉತ್ತಮ ವಿವೇಚನೆಯನ್ನು ಬಳಸಿ ಮತ್ತು ನಿಮಗೆ ಸಹಾಯ ಬೇಕಾದಾಗ ಅದನ್ನು ಪಡೆಯಿರಿ.

ಸಂಹಿತೆಯನ್ನು ಅರ್ಥಮಾಡಿಕೊಳ್ಳುವುದರಿಂದ ಒಟ್ಟಿಗೆ ಪ್ರಯಾಣಿಸಲು ಅದು ನಿಮ್ಮನ್ನು ಸಿದ್ಧಗೊಳಿಸುತ್ತದೆ. ಯಾವುದು ಮುಖ್ಯ ಎಂಬುದನ್ನು ಕಲಿಯಲು ಇದು ನಿಮಗೆ ಸಹಾಯ ಮಾಡುತ್ತದೆ ಜತೆಗೆ ನೀವು ಸದಾ ಖಂಡಿತ ಸರಿಯಾದುದನ್ನೇ ಮಾಡಲು ಮುಂದಾಗುವಂತೆ ಮಾಡುತ್ತದೆ.

## ನಮ್ಮ ಸಂಹಿತೆಯನ್ನು ಯಾರು ಪಾಲಿಸಬೇಕು?

ನೀವು. ನಮ್ಮ ಅಧಿಕಾರಿಗಳು ಮತ್ತು ಆಡಳಿತ ಮಂಡಳಿ ನಿರ್ದೇಶಕರು ಸೇರಿದಂತೆ ನಮ್ಮ ಕಂಪನಿಯಲ್ಲಿ ಪ್ರತಿಯೊಂದು ಹಂತದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಮತ್ತು ನಮ್ಮ ಪರವಾಗಿ ವ್ಯವಹಾರ ಮಾಡುವ ಪ್ರತಿಯೊಬ್ಬ ವ್ಯಕ್ತಿ ಹಾಗೂ ಸಂಸ್ಥೆಗೂ ಈ ಸಂಹಿತೆಯು ಅನ್ವಯವಾಗುತ್ತದೆ.



ಈ ಸಂಹಿತೆಯ ಜೊತೆಗೆ, ಲೆಕ್ಕಪತ್ರ ಮತ್ತು ಹಣಕಾಸು ವರದಿಗೆ ಜವಾಬ್ದಾರರಾಗಿರುವ ನಮ್ಮ CEO, CFO ಮತ್ತು ಇತರ ಕೆಲವು ವ್ಯಕ್ತಿಗಳು ಹಣಕಾಸು ವ್ಯವಸ್ಥಾಪಕರಿಗಾಗಿ ಇರುವ ನಮ್ಮ ನೀತಿ ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ಸಾರ್ವಜನಿಕವಾಗಿ ನಮ್ಮೊಂದಿಗೆ ವ್ಯವಹರಿಸುವ ಅಂಗಸಂಸ್ಥೆಗಳು ಇತರ ಸ್ಥಳೀಯ ಅಗತ್ಯತೆಗಳನ್ನು ಸಹ ಹೊಂದಿರಬಹುದು.

## ನಮ್ಮ ಸಂಹಿತೆಯನ್ನು ನಾವು ಪಾಲಿಸದಿದ್ದರೆ ಏನಾಗುತ್ತದೆ?

ನಮ್ಮ ಮೂಲ ಮೌಲ್ಯಗಳು ಅಥವಾ ನಮ್ಮ ಸಂಹಿತೆಯನ್ನು ನಾವು ಪಾಲಿಸದೇ ಇದ್ದಾಗ, ನಮ್ಮ ಹೂಡಿಕೆದಾರರು, ಗ್ರಾಹಕರು ಮತ್ತು ಇತರರ ವಿಶ್ವಾಸವನ್ನು ನಾವು ಕಳೆದುಕೊಳ್ಳಬಹುದು. ಇದು ನಮ್ಮ ಬ್ರ್ಯಾಂಡ್‌ಗಳಿಗೂ ಹಾನಿ ಉಂಟು ಮಾಡಬಹುದು. ಈ ಕಾರಣಕ್ಕಾಗಿ ಸಂಹಿತೆಯ ಉಲ್ಲಂಘನೆಯು ನಿಮ್ಮ ಪರವಾನಗಿ ಅಥವಾ ನಿಮ್ಮ ಕೆಲಸವನ್ನು ಕಳೆದುಕೊಳ್ಳುವಂತಹ ಗಂಭೀರ ಪರಿಣಾಮಗಳಿಗೆ ಕಾರಣವಾಗಬಹುದು, ನಿಮ್ಮ ಕಾರ್ಯಕ್ಷಮತೆಯ ವಿಮರ್ಶೆಯ ಮೇಲೆ ಪರಿಣಾಮ ಬೀರಬಹುದು, ಅಥವಾ ದಂಡ ಮತ್ತು ಜೈಲು ಶಿಕ್ಷೆಗೂ ದಾರಿ ಮಾಡಬಹುದು. ಇದನ್ನು ತಪ್ಪಿಸಲು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ. ನಮ್ಮ ಆಡಳಿತ ಮಂಡಳಿ ನಿರ್ದೇಶಕರು ಮಾತ್ರ ನಮ್ಮ ಸಂಹಿತೆಯಲ್ಲಿ ಬದಲಾವಣೆಗಳನ್ನು ಅನುಮೋದಿಸಬಹುದು ಅಥವಾ ಅದರ ಅನುಸರಣೆಗೆ ವಿನಾಯಿತಿ ನೀಡಬಹುದು.


## ನಮ್ಮ ಸಂಹಿತೆಯಲ್ಲಿ ಏನನ್ನು ಸೇರಿಸಲಾಗಿದೆ?

ನಮ್ಮೊಂದಿಗೆ, ನಮಗಾಗಿ ಮತ್ತು ನಮ್ಮ ಪರವಾಗಿ ಕೆಲಸ ಮಾಡುವವರು ಸೇರಿದಂತೆ- ತಂಡದ ಸದಸ್ಯರು ಮತ್ತು ಇತರ ಭಾಗಿದಾರರಿಗಾಗಿ ನೀವು ಸಂಹಿತೆಯಲ್ಲಿ ಇವುಗಳನ್ನು ಕಾಣಬಹುದು:

- ನಮ್ಮ ಸಂಹಿತೆ, ನಮ್ಮ ನೀತಿಗಳು ಮತ್ತು ಕಾನೂನನ್ನು ಅನುಸರಿಸುವುದು ಹೇಗೆ.
- ಉತ್ತಮ ನಿರ್ಣಯ ಮತ್ತು ಸಾಮಾನ್ಯ ಜ್ಞಾನವನ್ನು ಬಳಸುವುದು ಹೇಗೆ.
- ಅಸ್ಪಷ್ಟ ಮತ್ತು ಕಠಿಣ ಮಾರ್ಗಗಳಲ್ಲಿ ಮುನ್ನಡೆಯುವುದು.
- ದುರ್ನಡತೆಯನ್ನು ನೋಡಿದಾಗ ಅಥವಾ ಅಂತಹ ನಡೆಯ ಬಗ್ಗೆ ಅನುಮಾನ ಮೂಡಿದಾಗ ಮಾತನಾಡಬೇಕು.
- ತನಿಖೆಗೆ ಹೇಗೆ ಸಹಕರಿಸಬೇಕು.
- ಏನು ಮಾಡಬೇಕೆಂದು ನಿಮಗೆ ಗೊತ್ತಿಲ್ಲದಿದ್ದರೆ ಪ್ರಶ್ನೆಗಳನ್ನು ಕೇಳಬೇಕು.

ನೀವು ವ್ಯವಸ್ಥಾಪಕರಾಗಿದ್ದರೆ, ನೀವು ಈ ಕೆಳಗಿನವುಗಳ ಮೂಲಕ ನಿಮ್ಮನ್ನೇ ಉದಾಹರಣೆಯಾಗಿಸಿಕೊಳ್ಳಬೇಕಾಗುತ್ತದೆ:

- ಸಂಹಿತೆಯನ್ನು ಬೆಂಬಲಿಸುವ ರೀತಿಯಲ್ಲಿ ಮತ್ತು ಸೂಕ್ತ ರೀತಿಯಲ್ಲಿ ವರ್ತಿಸುವುದು
- ತಂಡದ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಲು ಲಭ್ಯವಿರುವುದು
- ಹೊಸ ಮತ್ತು ನವೀನ ಆಲೋಚನೆಗಳನ್ನು ಹಂಚಿಕೊಳ್ಳಲು ನಿಮ್ಮ ತಂಡವನ್ನು ಉತ್ತೇಜಿಸುವುದು
- ನಿಮ್ಮ ತಂಡದೊಂದಿಗೆ ಮೂಲ ಮೌಲ್ಯಗಳ ಬಗ್ಗೆ ಚರ್ಚಿಸುವುದು
- ನಿಮ್ಮ ತಂಡಕ್ಕೆ ಸಂಹಿತೆ ಅರ್ಥವಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು
- ನಮ್ಮ ಮೂಲ ಮೌಲ್ಯಗಳು ಸಹ ನಮ್ಮ ಫಲಿತಾಂಶಗಳಷ್ಟೇ ಮುಖ್ಯ ಎಂಬುದನ್ನು ಸ್ಪಷ್ಟಪಡಿಸುವ ರೀತಿಯಲ್ಲಿ ತಂಡದ ಸದಸ್ಯರ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವುದು
- ಸಂಭಾವ್ಯ ದುರ್ನಡತೆಯನ್ನು ವರದಿ ಮಾಡುವುದು ಮತ್ತು ನಿಮ್ಮ ತಂಡ ಅಥವಾ ಇತರರು ವ್ಯಕ್ತಪಡಿಸಿರುವ ದುರ್ನಡತೆಯ ವರದಿಗಳನ್ನು ಮೇಲಿನ ಹಂತಕ್ಕೆ ಕೊಂಡೊಯ್ಯುವುದು
- ಒಳ್ಳೆಯ ಉದ್ದೇಶದಿಂದ ದುರ್ನಡತೆಯನ್ನು ವರದಿ ಮಾಡುವವರ ವಿರುದ್ಧ ಪ್ರತೀಕಾರವನ್ನು ತಡೆಯಲು ಕ್ರಮ ಕೈಗೊಳ್ಳುವುದು
- ಕಾರ್ಯಕ್ಷಮತೆಯ ಗುರಿ ಸೇರಿದಂತೆ ಯಾರಾದರೂ ನಮ್ಮ ಸಂಹಿತೆಯನ್ನು ಉಲ್ಲಂಘಿಸಿದಾಗ ಸೂಕ್ತ ಕ್ರಮಗಳನ್ನು ಪರಿಗಣಿಸುವುದು ಮತ್ತು ಆ ಮೂಲಕ ಅಪಾಯವನ್ನು ಕಡಿಮೆ ಮಾಡಿ ನಿಯಂತ್ರಣ ಸಾಧಿಸುವುದು
- ಎಚ್‌ಆರ್, ಕಾನೂನು ಇಲಾಖೆ ಅಥವಾ ಆಂತರಿಕ ಲೆಕ್ಕಪರಿಶೋಧ ಇಲಾಖೆಗಳೊಂದಿಗೆ ಸಮನ್ವಯ



## Tenneco GPS



### ಇದು ನಾವು ಸರಿಯಾದ ಹಾದಿಯನ್ನು ಆಯ್ದುಕೊಳ್ಳಲು ನಮಗೆ ನಿರ್ದೇಶನ ನೀಡುತ್ತದೆ.

ನೀವು ಎಂದಾದರೂ ಮುಂದಿನ ಅತ್ಯುತ್ತಮ ಕ್ರಮ ಅಥವಾ ಹಾದಿಯ ಬಗ್ಗೆ ದಿಕ್ಕು ತೋಚದೆ ಗೊಂದಲಕ್ಕೆ ಸಿಲುಕಿದ್ದಾಗ, ನಿಮ್ಮನ್ನು ನೀವು ಕೇಳಿಕೊಳ್ಳಿ:

ಇದು ಕಾನೂನುಬದ್ಧವಾಗಿದೆಯೇ?

↓

ಇದು ನಮ್ಮ ಸಂಹಿತೆ ಮತ್ತು ನಮ್ಮ ನೀತಿಗಳಿಗೆ ಅನುಗುಣವಾಗಿದೆಯೇ?

↓

ಇದು ನಮ್ಮ ಉದ್ದೇಶ ಮತ್ತು ಮೂಲ ಮೌಲ್ಯಗಳನ್ನು ಬೆಂಬಲಿಸುತ್ತದೆಯೇ?

↓

ಇದು ನಮ್ಮ ಗ್ರಾಹಕರು, ತಂಡದ ಸದಸ್ಯರು, ಷೇರುದಾರರು, ಸಮುದಾಯಗಳು ಮತ್ತು ನಮ್ಮೊಂದಿಗೆ, ನಮಗಾಗಿ ಹಾಗೂ ನಮ್ಮ ಪರವಾಗಿ ಕೆಲಸ ಮಾಡುವವರಿಗೆ ನಾವು ನೀಡಿರುವ ಭರವಸೆಗೆ ಅನುಗುಣವಾಗಿದೆಯೇ?

↓

ನಿಮ್ಮ ಕ್ರಿಯೆಗಳನ್ನು ಮಾಧ್ಯಮಗಳು ವರದಿ ಮಾಡಿದರೆ ನೀವು ನೆಮ್ಮದಿಯಾಗಿರಬಲ್ಲಿರಾ?

↓

ಈ ಎಲ್ಲಾ ಪ್ರಶ್ನೆಗಳಿಗೆ ನೀವು "ಹೌದು" ಎಂದು ಉತ್ತರಿಸಿದರೆ, ಮುಂದುವರೆಯುವುದು ಬಹುಶಃ ಸರಿ. ಆದರೆ ನೀವು ಯಾವುದೇ ಹಂತದಲ್ಲಿ "ಇಲ್ಲ" ಅಥವಾ "ನನಗೆ ಖಚಿತವಾಗಿ ಗೊತ್ತಿಲ್ಲ" ಎಂದು ಉತ್ತರಿಸಿದರೆ, ನಿಲ್ಲಿಸಿ, ಮಾತನಾಡಿ, ಕೇಳಿ ಮತ್ತು ಮರುಪರಿಗಣಿಸಿ. ನೆನಪಿಡಿ, ಸದಾ ಪ್ರಾಮಾಣಿಕತೆಯಿಂದ ನಾವು ಕಾರ್ಯನಿರ್ವಹಿಸುತ್ತೇವೆ.

ನೆನಪಿಡಿ, ನಿಮಗೆ ಏನು ಮಾಡಬೇಕೆಂದು ಖಚಿತವಿಲ್ಲದಿದ್ದರೆ ನಿಮಗೆ ಸಹಾಯ ಮಾಡಲು ಹಲವಾರು ಸಂಪನ್ಮೂಲಗಳು ಲಭ್ಯವಿವೆ. ನೀವು ಕಷ್ಟದ ಸನ್ನಿವೇಶವನ್ನು ಏಕಾಂಗಿಯಾಗಿ ಎದುರಿಸಬೇಕಾದ ಅಗತ್ಯವಿಲ್ಲ.

# ನಿರ್ದೇಶನಗಳನ್ನು ಕೇಳುವುದು

## ಮುಕ್ತವಾಗಿ ಮಾತನಾಡುವುದು

ನಮ್ಮ ಸಂಹಿತೆ, ನಮ್ಮ ನೀತಿಗಳು ಅಥವಾ ಕಾನೂನಿನ ಉಲ್ಲಂಘನೆಗಳು Tenneco ಮತ್ತು ನಮ್ಮ ತಂಡದ ಸದಸ್ಯರಿಗೆ ಹಾನಿ ಉಂಟು ಮಾಡಬಹುದು. ನೀವು ಎಂದಾದರೂ ಅನುಚಿತವಾದದ್ದನ್ನು ಕಂಡರೆ ಅಥವಾ ಅನುಮಾನಿಸಿದರೆ, ಅದರ ಬಗ್ಗೆ ಮಾತನಾಡಿ. ನಿಮಗೆ ಖಚಿತತೆ ಇಲ್ಲದಿದ್ದರೂ, ಮಾತನಾಡುವುದು ಸದಾ ಸರಿಯಾದ ಆಯ್ಕೆಯಾಗಿರುತ್ತದೆ.



### ಯಾವಾಗ ಮಾತನಾಡಬೇಕು

ಈ ಕೆಳಗಿನ ಉಲ್ಲಂಘನೆಗಳನ್ನು ನೀವು ನೋಡಿದಲ್ಲಿ ಅಥವಾ ಅನುಮಾನಿಸಿದರೆ:

- ನಮ್ಮ ಮೂಲ ಮೌಲ್ಯಗಳು ಅಥವಾ ಸಂಹಿತೆ
- ನಮ್ಮ ನೀತಿಗಳು ಮತ್ತು ಕಾರ್ಯವಿಧಾನಗಳು
- ಯಾವುದೇ ಕಾನೂನು ಅಥವಾ ನಿಯಂತ್ರಣ

### ಹೇಗೆ ಮಾತನಾಡಬೇಕು

ಕೆಳಗಿನವರನ್ನು ಸಂಪರ್ಕಿಸಲು ಸದಾ ಪ್ರೇರೇಪಿತರಾಗಿರಿ:

- ನಿಮ್ಮ ವ್ಯವಸ್ಥಾಪಕರು
- ನೀವು ನಂಬುವ ಇನ್ನೊಬ್ಬ ವ್ಯವಸ್ಥಾಪಕರು
- ಮಾನವ ಸಂಪನ್ಮೂಲಗಳ ವಿಭಾಗ
- ಕಾನೂನು ವಿಭಾಗ
- ಹಣಕಾಸು
- ಜಾಗತಿಕ ಅನುಸರಣೆ ವಿಭಾಗ

ಇದರ ಜೊತೆಗೆ, Tenneco ಹಾಟ್‌ಲೈನ್ ದಿನದ 24 ಗಂಟೆಗಳು, ವಾರದ ಏಳು ದಿನಗಳು ಫೋನ್ ಮತ್ತು ಆನ್‌ಲೈನ್ ಮೂಲಕ ಲಭ್ಯವಿದೆ. ಟೋಲ್ ಫ್ರೀ ಸಂಖ್ಯೆಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ಪಟ್ಟಿ ಮಾಡಲಾಗಿದೆ.

Tenneco ಹಾಟ್‌ಲೈನ್‌ಗೆ ಕರೆಗಳು ಮತ್ತು ವರದಿಗಳನ್ನು ಬಾಹ್ಯ ಕಂಪನಿಯು ನಿರ್ವಹಣೆ ಮಾಡುತ್ತದೆ. ಬಹುತೇಕ ದೇಶಗಳಲ್ಲಿ, ನೀವು ಅನಾಮಧೇಯರಾಗಿ ಉಳಿಯುವ ಆಯ್ಕೆಯನ್ನು ಹೊಂದಿರುತ್ತೀರಿ. ಇದಕ್ಕೆ ಕಾನೂನಿನ ಅನುಮತಿ ಇಲ್ಲದಂತಹ ದೇಶಗಳಲ್ಲಿ, ಹಾಟ್‌ಲೈನ್ ಪ್ರತಿನಿಧಿಯು ನಿಮಗೆ ತಿಳಿಸುತ್ತಾನೆ. ನೀವು ಈ ಸಂಪನ್ಮೂಲಗಳನ್ನು ಮಾತನಾಡಲು ಬಳಸಿದರೆ, ನಿಮಗೆ ವರದಿ ಸಂಖ್ಯೆಯೊಂದನ್ನು ನೀಡಲಾಗುತ್ತದೆ. ಇದರಿಂದ ನೀವು ನಿಮ್ಮ ವರದಿಯ ಸ್ಥಿತಿಯನ್ನು ಪರಿಶೀಲಿಸಬಹುದು ಅಥವಾ ಹೆಚ್ಚುವರಿ ಮಾಹಿತಿಯನ್ನು ಒದಗಿಸಬಹುದು.

ಹಾಟ್‌ಲೈನ್ ಮೂಲಕ ವರದಿಯಾದ ಎಲ್ಲಾ ಸಮಸ್ಯೆಗಳನ್ನು ಮುಖ್ಯ ನೈತಿಕ ಅನುಸರಣೆ ಅಧಿಕಾರಿಗೆ ಕಳುಹಿಸಲಾಗುತ್ತದೆ ಮತ್ತು ನಿಮ್ಮ ವಿಚಾರಣೆಗಳನ್ನು ಪ್ರಾಮಾಣಿಕವಾಗಿ ಪರಿಹರಿಸಲಾಗುತ್ತದೆ ಎಂಬುದನ್ನು ನೆನಪಿನಲ್ಲಿಡಿ. Tenneco ದಲ್ಲಿ, ಸಂಭವನೀಯ ದುರ್ನಡತೆಯ ಎಲ್ಲಾ ವರದಿಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಒಮ್ಮೆ ವರದಿ ಬಂದ ನಂತರ, ನಾವು ಈ ವಿಷಯವನ್ನು ಗೌಪ್ಯವಾಗಿ ತನಿಖೆ ಮಾಡುತ್ತೇವೆ, ನಮ್ಮ ಮೂಲ ಮೌಲ್ಯಗಳು, ಸಂಹಿತೆ, ನೀತಿಗಳು ಅಥವಾ ಅನ್ವಯವಾಗುವ ಕಾನೂನುಗಳು ಉಲ್ಲಂಘನೆಯಾಗಿವೆಯೇ ಎಂಬುದನ್ನು ನಿರ್ಧರಿಸುತ್ತೇವೆ ಮತ್ತು ಸೂಕ್ತವಾದ ಶಿಸ್ತು ಕ್ರಮವನ್ನು ಪ್ರಾಮಾಣಿಕವಾಗಿ ಮತ್ತು ಪೂರ್ಣ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತೇವೆ. Tenneco ತಂಡದ ಸದಸ್ಯರು ತನಿಖೆಗೆ ಸಹಕರಿಸುವರೆಂದು ನಿರೀಕ್ಷಿಸಲಾಗಿದೆ.

## ಪ್ರತೀಕಾರ -ರಹಿತತೆ

Tenneco ದಲ್ಲಿ, ಪ್ರಾಮಾಣಿಕ ಕಾಳಜಿಗಳನ್ನು ಹಂಚಿಕೊಳ್ಳುವ, ತನಿಖೆಗಳಲ್ಲಿ ಸಹಕರಿಸುವ ಅಥವಾ ಪ್ರಾಮಾಣಿಕ ವರದಿಗಳನ್ನು ಮಾಡುವವರ ವಿರುದ್ಧ ಯಾವುದೇ ರೀತಿಯ ಪ್ರತೀಕಾರಕ್ಕೆ (ಉದಾಹರಣೆಗೆ ಕೆಲಸದಿಂದ ವಜಾ ಮಾಡುವುದು, ಸಂಬಳ ಕಡಿತ ಅಥವಾ ಇತರ ಯಾವುದೇ ಋಣಾತ್ಮಕ ಉದ್ಯೋಗದ ಮೇಲಿನ ಕ್ರಮ) ನಾವು ಅನುಮತಿಸುವುದಿಲ್ಲ.

ಪ್ರಾಮಾಣಿಕ ವರದಿ ಎಂದರೇನು? ಇದು ನಮ್ಮ ಸಂಹಿತೆ, ನೀತಿಗಳು ಅಥವಾ ಕಾನೂನಿನ ಉಲ್ಲಂಘನೆಯೆಂದು ನಿಮಗೆ ಪ್ರಾಮಾಣಿಕವಾಗಿ ಅನಿಸಿದಾಗ, ನಿಮ್ಮ ಎಣಿಕೆ ತಪ್ಪಾದರೂ ಸರಿ ಅದರ ಬಗ್ಗೆ ಮಾತನಾಡುವುದಾಗಿದೆ.

ನಿಮ್ಮ ಅನುಮಾನಗಳು ನಿಜವೋ ಇಲ್ಲವೋ, ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಮತ್ತು ಮುಂದೆ ಬಂದು ತಿಳಿಸಿದಾಗ ನಿಮಗೆ ಸೂಕ್ತ ರಕ್ಷಣೆ ಒದಗಿಸಲಾಗುವುದು. ನಾವು ನಿಮ್ಮ ಮಾತಿಗೆ ಬೆಲೆ ನೀಡುತ್ತೇವೆ ಮತ್ತು ಸಾಧ್ಯವಾದಷ್ಟು ವಿವರವಾಗಿ ಮಾತನಾಡುವಂತೆ ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ನೀವು ಹೆಚ್ಚು ಮಾಹಿತಿಯನ್ನು ಒದಗಿಸಿದಷ್ಟೂ, ಸಮಸ್ಯೆಯನ್ನು ನಾವು ಸುಲಭವಾಗಿ ಬಗೆಹರಿಸಬಹುದು.

ಹಾಗಾಗಿ, ನಮ್ಮನ್ನು ಚಾಲಕ ಸ್ಥಾನದಲ್ಲಿ ಇರಿಸುವ ವಿಶ್ವಾಸ ಹಾಗೂ ಖ್ಯಾತಿಯನ್ನು ಕಾಪಾಡಿಕೊಳ್ಳಲು ನೀವು ಸಹಾಯ ಮಾಡುತ್ತಿದ್ದೀರಿ ಎಂದು ಅರಿತುಕೊಳ್ಳಿ ಮತ್ತು ಸಮಾಧಾನದಿಂದ ಇರಿ.



# ಒಟ್ಟಿಗೆ ಗೆಲ್ಲುವುದು

Tennecoದಲ್ಲಿ ನಾವೆಲ್ಲರೂ ತಂಡವಾಗಿದ್ದೇವೆ. ತಯಾರಿಕೆಯಿಂದ ಹಿಡಿದು ವಿತರಣೆವರೆಗೆ ಪ್ರತಿಯೊಂದರಲ್ಲೂ, ತಜ್ಞರನ್ನು ಹೊಂದಿರುವ ನಾವು ಮಾಹಿತಿ ಮತ್ತು ಸಂಪನ್ಮೂಲಗಳಿಗಾಗಿ ಪರಸ್ಪರ ಅವಲಂಬಿಸಿದ್ದೇವೆ. ನಾವು ಹಾಗೆ ಮಾಡಿದಾಗ, ನಾವು ನಿಜವಾಗಿಯೂ ಎಷ್ಟು ಪ್ರತಿಭಾವಂತರು ಎಂಬುದನ್ನು ನಾವು ಅರಿತುಕೊಳ್ಳುತ್ತೇವೆ. ಪರಸ್ಪರ ಕಾಳಜಿವಹಿಸುವ ಮೂಲಕ ಮತ್ತು ನಮ್ಮ ಭಿನ್ನಾಭಿಪ್ರಾಯಗಳನ್ನು ಒಪ್ಪಿಕೊಳ್ಳುವ ಮೂಲಕ ನಾವು ಒಟ್ಟಿಗೆ ಯಶಸ್ವಿಯಾಗುತ್ತೇವೆ.

## ಈ ವಿಭಾಗದಲ್ಲಿ:

- ಪರಸ್ಪರ ಗೌರವಿಸುವುದು
- ಒಳಗೊಳ್ಳುವಿಕೆ
- ಸುರಕ್ಷತೆಗೆ ಮೊದಲ ಆದ್ಯತೆ ನೀಡುವುದು
- ಇತರರೊಂದಿಗೆ ಕೆಲಸ ಮಾಡುವುದು

# ಪರಸ್ಪರ ಗೌರವಿಸುವುದು

## ತಲುಪಬೇಕಾದ ಗುರಿ

ಕಿರುಕುಳ, ಬೆದರಿಕೆ ಮತ್ತು ಬೈಗುಳಗಳಿಂದ ಮುಕ್ತವಾದ; ಸಹಯೋಗಯುಕ್ತ ಮತ್ತು ಎಲ್ಲರನ್ನೂ ಒಳಗೊಂಡ ಕೆಲಸದ ವಾತಾವರಣವನ್ನು ಉತ್ತೇಜಿಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ನಾವು ನಮ್ಮ ತಂಡದ ಪ್ರತಿಯೊಬ್ಬ ಸದಸ್ಯರಿಗೂ ಗೌರವ ನೀಡುತ್ತೇವೆ ಮತ್ತು ಪ್ರತಿಯೊಬ್ಬರೂ ಘನತೆ ಮತ್ತು ಗೌರವದ ವರ್ತನೆಗೆ ಅರ್ಹರಾಗಿರುತ್ತಾರೆ ಎಂಬುದನ್ನು ನಾವು ತಿಳಿದಿದ್ದೇವೆ. ಆದ್ದರಿಂದಲೇ ನಮ್ಮ ಕಂಪನಿಯ ಪ್ರತಿಯೊಂದು ಹಂತದಲ್ಲೂ, ನಾವು ಕೆಲಸ ಮಾಡುವ ಎಲ್ಲ ಕಡೆಯೂ, ಕಿರುಕುಳವನ್ನು ತಡೆಯುವ ಹೊಣೆಗಾರಿಕೆ ಯನ್ನು ನಾವು ಪ್ರತಿಯೊಬ್ಬರೂ ಹೊಂದಿದ್ದೇವೆ.

ನಾವು ಪರಸ್ಪರ ನಂಬಿಕೆಯಿಂದ ಹಾಗೆ ಮಾಡುತ್ತೇವೆ. ನಾವು ಮಾಡುವ ಪ್ರತಿಯೊಂದು ಕೆಲಸವೂ ವಿಶ್ವಾಸದಿಂದ ಪ್ರಾರಂಭವಾಗುತ್ತದೆ ಮತ್ತು ವಿಶ್ವಾಸದಿಂದಲೇ ಕೊನೆಗೊಳ್ಳುತ್ತದೆ. ಜನರು ಸರಿಯಾದ ಕೆಲಸವನ್ನು ಮಾಡುತ್ತಿದ್ದಾರೆ, ಪರಸ್ಪರ ಕಾಳಜಿ ವಹಿಸುತ್ತಿದ್ದಾರೆ, ಮತ್ತು ತಂಡದ ಸದಸ್ಯರು ಯಾವುದೇ ರೀತಿಯ ಕಿರುಕುಳದ ಭಯವಿಲ್ಲದೆ ತಮ್ಮ ಕೆಲಸಗಳನ್ನು ಮಾಡಲು ಸಾಧ್ಯವಿರುವಂತಹ ಸಕಾರಾತ್ಮಕ ವಾತಾವರಣವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಕಾರ್ಯಮಗ್ನರಾಗಿದ್ದಾರೆ ಎಂದು ನಾವು ನಂಬುತ್ತೇವೆ. ನಾವು ಕಿರುಕುಳವನ್ನು ಗುರುತಿಸಬಹುದು ಮತ್ತು ಒಂದು ವೇಳೆ ಅಂಥದ್ದು ನಮ್ಮ ಗಮನಕ್ಕೆ ಬಂದರೆ, ಅದನ್ನು ನಾವು ವರದಿ ಮಾಡಬಹುದು ಎಂಬುದನ್ನು ಸಹ ಖಾತ್ರಿಪಡಿಸಿಕೊಳ್ಳುತ್ತೇವೆ.

### ನೈತಿಕ ವರ್ತನೆಗೆ ಮಾದರಿ.

**ಭಾಗಿಯಾಗುವುದು.** *ತಂಡದ ಸದಸ್ಯರೊಬ್ಬರು ಬೇರೆಯವರ ಧರ್ಮಕ್ಕೆ ಅಪಮಾನ ಮಾಡುತ್ತಿದ್ದಾರೆ ಎಂಬ ವಿಷಯ ನಿಮ್ಮ ಕಿವಿಗೆ ಬೀಳುತ್ತದೆ. ನೀವು ಅವರಿಗೆ ಅದನ್ನು ನಿಲ್ಲಿಸುವಂತೆ ಹೇಳುತ್ತೀರಿ, ನಂತರ ಅವರ ವರ್ತನೆಯ ಬಗ್ಗೆ ವರದಿ ಮಾಡುತ್ತೀರಿ. ಇದು ವಿಪರೀತವಾದ ಕ್ರಮವೇ?* ಇಲ್ಲ. ನಾವು ಇತರರ ಧಾರ್ಮಿಕ ನಂಬಿಕೆಗಳನ್ನು ಗೌರವಿಸುತ್ತೇವೆ, ಆದ್ದರಿಂದ ನೀವು ಮಾತನಾಡುವ ಮೂಲಕ ಸರಿಯಾದ ಕೆಲಸವನ್ನೇ ಮಾಡಿದ್ದೀರಿ. ನೀವು ಇದೇ ರೀತಿಯ ಅಗೌರವ ಮತ್ತು ಅನುಚಿತವಾದದ್ದನ್ನು ಕಂಡಾಗಲೆಲ್ಲ, ಅಥವಾ ಹಿಂಸೆ, ಹೆದರಿಸುವಿಕೆ, ಬೆದರಿಕೆ ಅಥವಾ ಕಿರುಕುಳವನ್ನು ಒಳಗೊಂಡ ಸನ್ನಿವೇಶವನ್ನು ನೀವು ಎದುರಿಸಿದಾಗಲೆಲ್ಲ ಹಾಗೆಯೇ ಮಾಡಿ.

### ಎಚ್ಚರಿಕೆ.

**ಅದನ್ನು ವೃತ್ತಿಪರವಾಗಿರಿಸಿಕೊಳ್ಳುವುದು.** *ನೀವು ಈಗಷ್ಟೇ ತಂಡದ ಸದಸ್ಯರ ಬಡ್ತಿಯ ಬಗ್ಗೆ ತಿಳಿದುಕೊಂಡಿದ್ದೀರಿ. ನೀವು ಅವರಿಗಾಗಿ ಖುಷಿಯಾಗಿದ್ದೀರಿ ಮತ್ತು ಅವರ ಬೆನ್ನು ತಟ್ಟಿ ಅಭಿನಂದನೆ ಸಲ್ಲಿಸಲು ನೀವು ಬಯಸುತ್ತೀರಿ. ಅನುಮತಿಯಿದೆಯೇ?* ಬಹುಶಃ ಇರಬಹುದು, ಆದರೆ ಇದು ನಿಮ್ಮ ಸ್ಥಳದಲ್ಲಿನ ಪದ್ಧತಿಗಳು ಮತ್ತು ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ. ಅಂತಹ ದೈಹಿಕ ಸಂಪರ್ಕವು ಅಪ್ರಿಯವಾಗಿರಬಹುದು ಎಂದು ನಂಬಲು ನಿಮಗೆ ಯಾವುದೇ ಕಾರಣವಿದ್ದರೆ, ನಿಮ್ಮ ಸಹೋದ್ಯೋಗಿಯನ್ನು ಅಭಿನಂದಿಸಲು ಇನ್ನೊಂದು ಮಾರ್ಗವನ್ನು ಕಂಡುಕೊಳ್ಳಿ.

> ಗೆಲ್ಲುವ ಅತ್ಯುತ್ತಮ ಅವಕಾಶವನ್ನು ಖಚಿತಪಡಿಸಿಕೊಳ್ಳಲು ನಾವು ಮುಕ್ತ ಮತ್ತು ಪ್ರಾಮಾಣಿಕ ದ್ವಿಮುಖ ಸಂವಹನವನ್ನು ಬಳಸುತ್ತೇವೆ.

### ತಪ್ಪು ಮಾರ್ಗ.

**ಹಾಸ್ಯವನ್ನು ಸಮರ್ಥನೆಯನ್ನಾಗಿ ಬಳಸುವುದು.** *ತಂಡದ ಜೊತೆಗಿನ ಉದ್ವಿಗ್ನತೆ ಹೆಚ್ಚಾಗಿದೆ. ಏಕೆಂದರೆ ತ್ರೈಮಾಸಿಕವು ಮುಗಿಯುತ್ತಿರುವಂತೆ ಫಲಿತಾಂಶಗಳು ನಿರಾಶಾದಾಯಕವಾಗಿದ್ದವು. ಉದ್ವೇಗವನ್ನು ಕಡಿಮೆ ಮಾಡಲು ಎಲ್ಲರಿಗೂ ತೋರಿಸುವಂತಹ ಒಂದು ಉಲ್ಲಾಸದ ಚಿತ್ರ ನಿಮ್ಮ ಬಳಿ ಇರಬಹುದು, ಆದರೆ ಸಂಬಂಧಿತ ಚಿತ್ರವು ಸ್ವಲ್ಪ … ಸೂಚಕವಾಗಿದೆ. ಹೇ - ನಾವೆಲ್ಲರೂ ವಯಸ್ಕರು, ಅಲ್ಲವೇ?* ಅದನ್ನೇ ಒಂದು ಸಮರ್ಥನೆಯನ್ನಾಗಿ ಬಳಸಬೇಡಿ. ಸೂಕ್ತವಲ್ಲದ ಲೈಂಗಿಕ ಚಿತ್ರಗಳನ್ನು ಹಂಚಿಕೊಳ್ಳುವುದು ಲೈಂಗಿಕ ಕಿರುಕುಳದ ಒಂದು ರೂಪ. ಯಾರಿಗಾದರೂ ಅಸಮಾಧಾನ ಉಂಟಾಗುವಂತೆ ಮಾಡಬಹುದಾದ ಅಥವಾ ಅವರ ಕೆಲಸವನ್ನು ಮಾಡುವ ಸಾಮರ್ಥ್ಯದಲ್ಲಿ ಹಸ್ತಕ್ಷೇಪ ಮಾಡಬಹುದಾದ *ಯಾವುದೇ* ಲೈಂಗಿಕ ಅರ್ಥವನ್ನು ಹೊಂದಿರುವ ಕ್ರಿಯೆಗಳು ಅಥವಾ ಪದಗಳನ್ನು ನಾವು ಸಹಿಸುವುದಿಲ್ಲ. ಹಂಚಿಕೊಳ್ಳಲು ಹೆಚ್ಚು ಸೂಕ್ತವಾದದನ್ನು ಹುಡುಕಿ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### “ಕಿರುಕುಳ” ಹೇಗಿರುತ್ತದೆ?

ಕಿರುಕುಳವು ಇಷ್ಟವಿಲ್ಲದ ವರ್ತನೆಯಾಗಿದ್ದು ಅದು ಕೆಲಸದ ಸ್ಥಳವನ್ನು ಪ್ರತಿಕೂಲ ಅಥವಾ ಬೆದರಿಸುವ ಸ್ಥಳವೆಂದು ಭಾವಿಸುವಂತೆ ಮಾಡುತ್ತದೆ. ಅದರ ಬದಲು ನಾವು ಪರಸ್ಪರ ಕಾಳಜಿ ವಹಿಸುವಂತಹ ನಂಬಿಕೆಯ ಸಂಸ್ಕೃತಿಯನ್ನು ಬೆಳೆಸಲು ನಾವು ಬಯಸುತ್ತೇವೆ. ಈ ಕೆಳಗಿನವುಗಳನ್ನು ಒಳಗೊಂಡು ಎಲ್ಲಾ ರೀತಿಯ ಕಿರುಕುಳಗಳನ್ನು ತಪ್ಪಿಸುವ ಮೂಲಕ ನಿಮ್ಮ ಪಾತ್ರವನ್ನು ನಿರ್ವಹಿಸಿ:

- **ಮೌಖಿಕ**
  - ಅವಮಾನಕರ ಅಥವಾ ಅವಹೇಳನಕಾರಿ ಹಾಸ್ಯಗಳು
  - ಜನಾಂಗೀಯ ಬೈಗುಳಗಳು
  - ಬೆದರಿಕೆಗಳು
  - ಬೇರೆ ಹೆಸರಿನಿಂದ ಕರೆಯುವುದು
  - ಕೆಟ್ಟ ಟೀಕೆಗಳು
- **ದೈಹಿಕ**
  - ತಳ್ಳುವುದು ಅಥವಾ ನಡುಗಿಸುವುದು
  - ಇನ್ನೊಬ್ಬರ ದೇಹದ ಬಗ್ಗೆ ಮಾತನಾಡುವುದು
  - ಲೈಂಗಿಕವಾಗಿ ಮುಂದುವರೆಯುವುದು
- **ದೃಶ್ಯ**
  - ಆಕ್ರಮಣಕಾರಿ ವ್ಯಂಗ್ಯಚಿತ್ರಗಳು
  - ಆಕ್ರಮಣಕಾರಿ ಇಮೇಲ್‌ಗಳು
  - ಗ್ರಾಫಿಕ್ ರೇಖಾಚಿತ್ರಗಳು ಅಥವಾ ಚಿತ್ರಗಳು
  - ಅಸಹ್ಯಕರ ಅಥವಾ ಅಶ್ಲೀಲ ನೋಟಗಳು ಅಥವಾ ಸನ್ನೆಗಳು
- **ತಾರತಮ್ಯ**
  - ಲಿಂಗ ಅಥವಾ ಜನಾಂಗದಂತಹ ವೈಯಕ್ತಿಕ ಗುಣಲಕ್ಷಣಗಳನ್ನು ಆಧರಿಸಿರುವುದು, ಆದರೆ ಅವುಗಳಿಗೆ ಸೀಮಿತವಾಗಿಲ್ಲದಿರುವುದು.

ನಮ್ಮ ನೀತಿ ಸಂಹಿತೆಯನ್ನು ಉಲ್ಲಂಘಿಸುವ ಕೆಟ್ಟ ವರ್ತನೆಯು ಈ ಪಟ್ಟಿಯಲ್ಲಿ ಇರಬೇಕೆಂದಿಲ್ಲ ಎಂಬುದನ್ನು ನೆನಪಿಡಿ. ಒಬ್ಬರನ್ನೊಬ್ಬರು ಗೌರವಿಸಬೇಕು ಮತ್ತು ಪರಸ್ಪರರ ಭಾವನೆಗಳನ್ನು ಪರಿಗಣಿಸಬೇಕು ಎಂಬುದು ನೆನಪಿಡಬೇಕಾದ ಪ್ರಮುಖ ವಿಷಯವಾಗಿದೆ. ಅದಲ್ಲದೇ, ಇಲ್ಲಿ ನೀವು ನಡೆದುಕೊಳ್ಳುವ ರೀತಿಯ ಪರಿಣಾಮವು ಮುಖ್ಯವಾಗುತ್ತದೆ. “ಅದು ನನ್ನ ಉದ್ದೇಶವಾಗಿರಲಿಲ್ಲ” ಎಂದು ಹೇಳುವುದು ಸರಿಯಲ್ಲ.



## ದಿ ಗ್ಯಾರೇಜ್

# ಒಳಗೊಳ್ಳುವಿಕೆ

## ತಲುಪಬೇಕಾದ ಗುರಿ

ಪ್ರತಿಯೊಬ್ಬರೂ ತಮ್ಮಲ್ಲಿರುವ ಸಂಪೂರ್ಣ ಸಾಮರ್ಥ್ಯವನ್ನು ಕೆಲಸದಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುವಂತಹ ಮತ್ತು ಒಂದು ಒಳಗೊಳ್ಳುವಿಕೆ ಭಾವನೆಯನ್ನು ಅವರಲ್ಲಿ ಮೂಡಿಸುವಂತಹ ವಾತಾವರಣವನ್ನು ಸೃಷ್ಟಿಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

Tennecoದಲ್ಲಿ ನಾವು ಎಲ್ಲಾ ರೂಪಗಳಲ್ಲೂ ಶ್ರೇಷ್ಠತೆಯನ್ನು ಬಯಸುತ್ತೇವೆ. ವೈವಿಧ್ಯಮಯ ಹಿನ್ನೆಲೆಯುಳ್ಳ ಪ್ರತಿಭಾವಂತ ತಂಡವನ್ನು ಹೊಂದಿರುವುದು ನಮ್ಮ ಅದೃಷ್ಟವಾದರೂ, ಅದು ಅಲ್ಲಿಗೇ ನಿಲ್ಲುವುದಿಲ್ಲ. ನಮ್ಮ ತಂಡದ ಪ್ರತಿಯೊಬ್ಬ ಸದಸ್ಯರಲ್ಲೂ ಮೌಲ್ಯ, ಒಳಗೊಳ್ಳುವಿಕೆ ಮತ್ತು ಗೌರವ ಭಾವನೆ ಮೂಡಿಸುವುದು ನಮ್ಮ ಗುರಿಯಾಗಿದೆ.

ನಮ್ಮ ಜನರೇ ನಮ್ಮ ಶ್ರೇಷ್ಠ ಆಸ್ತಿ. ನಾವು ಒಳಗೊಳ್ಳುವಿಕೆ ಮತ್ತು ವೈವಿಧ್ಯತೆಯನ್ನು ಉತ್ತೇಜಿಸುವ ಮೂಲಕ, ನ್ಯಾಯೋಚಿತ ಉದ್ಯೋಗ ಪದ್ಧತಿಗಳನ್ನು ಆಚರಿಸುವ ಮೂಲಕ ಮತ್ತು ತಾರತಮ್ಯವನ್ನು ಎಂದಿಗೂ ಸಹಿಸದಿರುವ ಮೂಲಕ ಅವರನ್ನು ರಕ್ಷಿಸುತ್ತೇವೆ. ಭಿನ್ನಾಭಿಪ್ರಾಯಗಳನ್ನು ಸಂಭ್ರಮಿಸುವ ಮೂಲಕ ಮತ್ತು ನಿಮ್ಮ ಸುತ್ತಲಿನವರನ್ನು ಅತ್ಯುತ್ತಮ ವ್ಯಕ್ತಿಗಳಾಗಿಸಲು ಪ್ರೇರೇಪಿಸುವ ಮೂಲಕ ಎಲ್ಲರಿಗೂ ಸಮಾನ ಅವಕಾಶ ನೀಡಲು ನಮಗೆ ಸಹಾಯ ಮಾಡಿ.

**ನಾವು ಎಲ್ಲಾ ರೀತಿಯ ವೈವಿಧ್ಯತೆಯನ್ನು ಗೌರವಿಸುತ್ತೇವೆ, ಇವುಗಳೂ ಸೇರಿದಂತೆ:** ವಯಸ್ಸು, ವಂಶಾವಳಿ ಅಥವಾ ಪೌರತ್ವ, ಬಣ್ಣ, ಜನಾಂಗ, ಧರ್ಮ (ಧಾರ್ಮಿಕ ಉಡುಪು ಮತ್ತು ಅಲಂಕಾರ ಪದ್ಧತಿಗಳು ಸೇರಿದಂತೆ), ಜನಾಂಗೀಯತೆ, ಅಂಗವೈಕಲ್ಯತೆ, ವೈವಾಹಿಕ ಅಥವಾ ಕೌಟುಂಬಿಕ ಸ್ಥಿತಿ, ವೈದ್ಯಕೀಯ ಸ್ಥಿತಿ, ಅನುವಂಶಿಕ ಮಾಹಿತಿ, ಮಿಲಿಟರಿ ಮತ್ತು ನಿವೃತ್ತ ಸೈನಿಕ ಸ್ಥಾನಮಾನ, ರಾಜಕೀಯ ಸಂಬಂಧ, ರಾಷ್ಟ್ರೀಯ ಮೂಲ (ಭಾಷೆ-ಬಳಕೆಯ ನಿರ್ಬಂಧಗಳು ಸೇರಿದಂತೆ), ಲಿಂಗ (ಗರ್ಭಧಾರಣೆ, ಹೆರಿಗೆ, ಸ್ತನ್ಯಪಾನ, ಮತ್ತು ಸಂಬಂಧಿತ ಪರಿಸ್ಥಿತಿಗಳು ಸೇರಿದಂತೆ), ಲಿಂಗ ಗುರುತು ಮತ್ತು ಅಭಿವ್ಯಕ್ತಿ, ಲೈಂಗಿಕ ನಿಲುವು ಮತ್ತು ಇನ್ನೂ ಹಲವು.

ನಾವು ಮಾಡುವ ಎಲ್ಲದರಲ್ಲೂ ನಮ್ಮ ಸೇರ್ಪಡೆಯನ್ನು ಖಾತ್ರಿಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ.

## ನೈತಿಕ ವರ್ತನೆಗೆ ಮಾದರಿ.

ಸಮಾನ ಅವಕಾಶಕ್ಕೆ ಉತ್ತೇಜನ. *ಲಿಂಗ ಪರಿವರ್ತನೆಯ ನಿರ್ಧಾರದಿಂದಾಗಿ ವ್ಯಕ್ತಿಯೊಬ್ಬರನ್ನು ಯೋಜನೆಯಿಂದ ಕೈಬಿಡಲಾಗಿದೆ ಎಂದು ನಿಮ್ಮ ತಂಡ ಭಾವಿಸಿದೆ. ಅವರು ನಿಮ್ಮ ಸಹಾಯವನ್ನು ಕೇಳುತ್ತಾರೆ. ಸರಿಯಾದ ಆಯ್ಕೆಯೇ?* ಖಂಡಿತ. ಉದ್ಯೋಗ ನಿರ್ಧಾರಗಳು ಉದ್ಯೋಗ-ಸಂಬಂಧಿತ ಮಾನದಂಡಗಳ ಮೇಲೆ ಆಧರಿತವಾಗಿರಬೇಕೇ ಹೊರತು ಲಿಂಗದ ಅಭಿವ್ಯಕ್ತಿಗೆ ಸಂಬಂಧಿಸಿದ ಮಾನದಂಡಗಳ ಮೇಲಲ್ಲ. ಮಾತನಾಡುವ ಮೂಲಕ, ನಿಮ್ಮ ತಂಡವು ಒಂದು ನ್ಯಾಯೋಚಿತ, ವೈವಿಧ್ಯಮಯ ಮತ್ತು ಸ್ವಾಗತಾರ್ಹ ಕಾರ್ಯಸ್ಥಳವನ್ನು ಹೊಂದಲು ಸಹಾಯ ಮಾಡುತ್ತಿದೆ. ನಾವು ಅಂತಹ ವ್ಯಕ್ತಿಯ ಪರಿವರ್ತನೆಯನ್ನು ಬೆಂಬಲಿಸುತ್ತೇವೆ ಎಂದು ಆ ವ್ಯಕ್ತಿಗೆ ತಿಳಿಸುವುದು ಹೇಗೆಂಬ ಬಗ್ಗೆ ನೀವು ಕೆಲವೊಂದು ಆಲೋಚನೆಗಳನ್ನು ಹಂಚಿಕೊಳ್ಳಬಹುದು. ಸಂಭಾಷಣೆ ನಡೆಯುತ್ತಿರುವಾಗ ನಿಮ್ಮ ತಂಡವು ಆಲೋಚನೆಗಳನ್ನು ಮತ್ತಷ್ಟು ತ್ವರಿತವಾಗಿ ಕಾರ್ಯರೂಪಕ್ಕೆ ತರಬಹುದು.

## ಎಚ್ಚರಿಕೆ.

ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡುವುದು. *ನಿಮ್ಮ ತಂಡವು ಸಮಾನ ಅರ್ಹತೆ ಹೊಂದಿರುವ ಇಬ್ಬರು ಅಭ್ಯರ್ಥಿಗಳನ್ನು ಸಂದರ್ಶನ ಮಾಡುತ್ತಿದೆ. ಈ ಪೈಕಿ ಒಬ್ಬ ಅಭ್ಯರ್ಥಿ ವಿಭಿನ್ನವಾಗಿದ್ದಾರೆ. ಉತ್ತಮ ದೇಹದಾರ್ಢ್ಯತೆಯುಳ್ಳ ವ್ಯಕ್ತಿಯು ಸಮರ್ಥರಾಗಿರುವ ಕಾರಣದಿಂದ ಅವರನ್ನೇ ಆಯ್ಕೆ ಮಾಡುವಂತೆ ತಂಡದಲ್ಲಿ ಯಾರೋ ಒಬ್ಬರು ಸಲಹೆ ನೀಡುತ್ತಾರೆ. ಇದು ಚತುರ ನಡೆಯೇ?* ವಾಸ್ತವಿಕವಾಗಿ, ಅಲ್ಲ. ಪಕ್ಷಪಾತವು ನಿಮ್ಮನ್ನು ತಪ್ಪು ದಿಕ್ಕಿಗೆ ಎಳೆಯಬಹುದು. ವೈವಿಧ್ಯತೆಯು ನಿಮ್ಮ ಗುಂಪನ್ನು ಹೇಗೆ ಬಲಪಡಿಸಲ್ಲದು ಎಂಬ ಬಗ್ಗೆ ಚರ್ಚಿಸುವುದು ಉತ್ತಮ.

## ತಪ್ಪು ಮಾರ್ಗ.

ಅಗೌರವ ತೋರುವುದು. *ನಿಮ್ಮ ವ್ಯವಸ್ಥಾಪಕರು ಯಾರದೋ ರಾಷ್ಟ್ರೀಯತೆಯ ಬಗ್ಗೆ ತಮಾಷೆ ಮಾಡುತ್ತಾರೆ. ಆ ಸಮಯದಲ್ಲಿ ಯಾರೂ ಏನೂ ಹೇಳುವುದಿಲ್ಲ, ಆದರೆ ನಂತರ ಅದು ಎಷ್ಟು ಅನುಚಿತ ಎಂದು ಎಲ್ಲರೂ ಪಿಸುಮಾತಿನಲ್ಲಿ ಮಾತನಾಡಿಕೊಳ್ಳುತ್ತಾರೆ. ಹಾಗಾದರೆ, ನೀವೆಲ್ಲರೂ ಒಂದೇ ರೀತಿ ಯೋಚಿಸುತ್ತಿದ್ದೀರಿ ಎಂದಾಯಿತು, ಅಲ್ಲವೇ?* ತಪ್ಪು. ಈ ರೀತಿಯ ವಿಮರ್ಶೆಗಳಿಗೆ Tennecoದಲ್ಲಿ ಸ್ಥಾನವಿಲ್ಲ. ನೀವು ಧೈರ್ಯವಾಗಿ ಮಾತನಾಡಿ, ನಿಮ್ಮನ್ನು ಪ್ರತೀಕಾರದಿಂದ ನಿಮಗೆ ರಕ್ಷಣೆ ಇದೆ ಎಂಬ ವಿಷಯ ತಿಳಿದಿರಲಿ.




## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಹೆಚ್ಚು ಒಳಗೊಳ್ಳಲು ಮಾರ್ಗಗಳನ್ನು ಹುಡುಕುತ್ತಿರುವಿರಾ?

- ನಿಮ್ಮ ಅನನ್ಯ ಗುಣಲಕ್ಷಣಗಳ ಬಗ್ಗೆ ಮಾತನಾಡಿ - ಅದು ಇತರರನ್ನು ಅದೇ ರೀತಿ ಮಾಡಲು ಪ್ರೋತ್ಸಾಹಿಸುತ್ತದೆ.
- ಕಷ್ಟಕರವಾದ ಸಂಭಾಷಣೆಗಳಿಂದ ದೂರ ಸರಿಯಬೇಡಿ, ಆದರೆ ವಿಭಿನ್ನ ದೃಷ್ಟಿಕೋನಗಳನ್ನು ಹುಡುಕಿ, ಆಲಿಸಿ ಮತ್ತು ಗೌರವಿಸಿ.
- ಇನ್ನೊಬ್ಬರ ಅನುಭವದ ಬಗ್ಗೆ ನೀವು ಇನ್ನಷ್ಟು ತಿಳಿದುಕೊಳ್ಳಬೇಕಾಗಿದೆ ಎಂದು ಒಪ್ಪಿಕೊಳ್ಳಲು ಎಂದಿಗೂ ಹಿಂಜರಿಯದಿರಿ.
- ಜನರು ತಾವು ಹೇಗಿರುವರೋ ಹಾಗೆ ನಮ್ಮನ್ನು ಗೌರವಿಸುತ್ತಾರೆ ಎಂದು ಭಾವಿಸುವ ರೀತಿಯಲ್ಲಿ ಮಾತನಾಡಿ ಮತ್ತು ವರ್ತಿಸಿ.
- ಉದ್ಯೋಗ ಸಂಬಂಧಿತ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ವೈವಿಧ್ಯತೆಯ ಮಹತ್ವವನ್ನು ಯಾವಾಗಲೂ ಪರಿಗಣಿಸಿ.

## ದಿ ಗ್ಯಾರೇಜ್

# ಸುರಕ್ಷತೆಗೆ ಮೊದಲ ಆದ್ಯತೆ ನೀಡುವುದು

## ತಲುಪಬೇಕಾದ ಗುರಿ

ನಾವೆಲ್ಲರೂ ಸುರಕ್ಷಿತ ಮತ್ತು ಪರಸ್ಪರ ಕಾಳಜಿ ವಹಿಸುತ್ತೇವೆ ಎಂಬ ವಾತಾವರಣವನ್ನು ಸೃಷ್ಟಿಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ಸುರಕ್ಷತೆ ನಮ್ಮ ಸಂಸ್ಕೃತಿಯ ಒಂದು ದೊಡ್ಡ ಭಾಗವಾಗಿದೆ, ಮತ್ತು ಈ ನಿಟ್ಟಿನಲ್ಲಿ ನಮ್ಮಲ್ಲಿರುವ ಪ್ರತಿಯೊಬ್ಬರ ಪಾತ್ರವೂ ಮಹತ್ತರವಾದದ್ದು. ನೀತಿಗಳು ಮತ್ತು ಕಾರ್ಯವಿಧಾನಗಳು, ತಪಾಸಣೆಗಳು ಮತ್ತು ಪರಿಶೀಲನಾ ಪಟ್ಟಿಗಳು, ಸುರಕ್ಷತಾ ಸಮಿತಿಗಳು ಮತ್ತು ಸುರಕ್ಷತಾ ತರಬೇತಿಗಳ ಮೂಲಕ, ನಾವು ಪ್ರತಿಯೊಬ್ಬರೂ ಸುರಕ್ಷಿತ ಭಾವವನ್ನು ಖಚಿತಪಡಿಸಿಕೊಳ್ಳಲು ಶ್ರಮಿಸುತ್ತೇವೆ.

ಯಶಸ್ವಿಯಾಗಲು ನಮಗೆ ನಿಮ್ಮ ಸಹಾಯ ಬೇಕು. ಜಾಗರೂಕರಾಗಿರಿ, ಸುರಕ್ಷಿತ ಕೆಲಸದ ಅಭ್ಯಾಸಗಳನ್ನು ಅನುಸರಿಸಿ ಮತ್ತು ಪರಸ್ಪರ ಕಾಳಜಿವಹಿಸಿ.

### ನೈತಿಕ ವರ್ತನೆಗೆ ಮಾದರಿ.

**ಮಾಹಿತಿ ಹೊಂದಿರುವುದು.** *ನಿಮ್ಮ ಕಾರ್ಯಕ್ಷೇತ್ರದಲ್ಲಿ ಹೊಸ ಅಪಾಯದ ಚಿಹ್ನೆಯನ್ನು ನೀವು ಗಮನಿಸುತ್ತೀರಿ, ಅದರ ಬಗ್ಗೆ ಅರಿತುಕೊಳ್ಳಲು ಸಮಯ ತೆಗೆದುಕೊಳ್ಳುತ್ತೀರಿ. ಇದು ಒಳ್ಳೆಯ ಉಪಾಯವೇ?* ಖಂಡಿತವಾಗಿಯೂ! ಮಾಹಿತಿ ಹೊಂದುವುದು ಸುರಕ್ಷತೆಯನ್ನು ಉತ್ತೇಜಿಸಲು ಒಂದು ಅತ್ಯುತ್ತಮ ಮಾರ್ಗವಾಗಿದೆ. ಸಂಭಾವ್ಯ ಅಪಾಯಗಳ ಬಗ್ಗೆ ನಿಗಾ ಇರಿಸಿ, ಸುರಕ್ಷತೆಯ ಅಗತ್ಯಗಳ ಬಗ್ಗೆ ತಾಜಾ ಮಾಹಿತಿ ಪಡೆಯಿರಿ, ಮತ್ತು ಘಟನೆಗಳು, ಗಾಯಗಳು, ಸಂಭಾವ್ಯ ಅಪಾಯಗಳು ಮತ್ತು ಅಸುರಕ್ಷಿತ ಪರಿಸ್ಥಿತಿಗಳ ಬಗ್ಗೆ ತಕ್ಷಣ ವರದಿ ಮಾಡಿ.

**ಅಂತರ ಕಾಯ್ದುಕೊಳ್ಳುವುದು.** *ನಿಮ್ಮ ಸ್ಥಳವು ಕ್ವಾರಂಟೈನ್ ಪ್ರದೇಶದಲ್ಲಿದೆ, ಮತ್ತು ಎಲ್ಲರಿಗೂ ಮನೆಯಿಂದ ಕೆಲಸ ಮಾಡುವಂತೆ ಸೂಚಿಸಲಾಗಿದೆ. ಆದರೂ, ಆನ್‌ಸೈಟ್‌ಗೆ ಹೋಗಿ ಮಾಡಲೇಬೇಕಾದ ಕೆಲಸವೊಂದು ನಿಮಗೆ ಇದೆ, ಹೀಗಾಗಿ ನೀವು ಒಳಗೆ ಹೋಗಲು ನಿಮ್ಮ ವ್ಯವಸ್ಥಾಪಕರಿಂದ ಅನುಮತಿ ಯನ್ನು ಪಡೆಯುತ್ತೀರಿ. ನೀವು ಅಲ್ಲಿ ಇರುವಾಗ, ನೀವು ಇತರರಿಂದ ಅಂತರವನ್ನು ಕಾಯ್ದುಕೊಳ್ಳುತ್ತೀರಿ, ನಿಮ್ಮ ಕೈಗಳನ್ನು ಆಗಾಗ್ಗೆ ತೊಳೆಯುತ್ತೀರಿ, ಮತ್ತು ಹೆಚ್ಚು ಸ್ಪರ್ಶಿಸುವ ಮೇಲ್ಮೈಗಳ ಮೇಲೆ ಸೋಂಕು ನಿವಾರಕ ಸಿಂಪಡಿಸುತ್ತೀರಿ. ಇದು ಚತುರ ಆಯ್ಕೆಯೇ?* ಹೌದು. ಕಚೇರಿಗೆ ಕೆಲವೊಮ್ಮೆ ನೀವು ಸಂಪರ್ಕ ನಿಷೇಧದಲ್ಲಿ (ಕ್ವಾರಂಟೈನ್) ಇದ್ದಾಗ ಕೆಲಸಕ್ಕೆ ಹೋಗಲೇಬೇಕಾದ ಸಂದರ್ಭಗಳು ಬರಬಹುದು. ಅಂತಹ ಸಂದರ್ಭಗಳಲ್ಲಿ, ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಿಕೊಳ್ಳಿ.

### ಎಚ್ಚರಿಕೆ.

**ಕರ್ತವ್ಯಕ್ಕೆ ಸದೃಢವಾಗಿರುವುದು.** *ಮೈಗ್ರೇನ್‌ಗಾಗಿ ನೀವು ವೈದ್ಯರು ಸೂಚಿಸಿದ ಔಷಧವನ್ನು ತೆಗೆದುಕೊಂಡಿದ್ದೀರಿ. ಕೆಲಸ ಮಾಡುವುದು ಸರಿಯೇ?* ಇರಬಹುದು. ನೀವು ಸುರಕ್ಷಿತವಾಗಿ ಕೆಲಸ ಮಾಡಬಹುದೆಂದು ನಿಮ್ಮ ವೈದ್ಯರು ಖಾತರಿ ನೀಡಿದ್ದಾರೆ ಎಂದು ಖಚಿತಪಡಿಸಿಕೊಳ್ಳಿ. ಕೆಲವೊಮ್ಮೆ **ಸೂಚಿತ** ಔಷಧಗಳು ನಿಮ್ಮ ನಿರ್ಧಾರ ಮಾಡುವ ಸಾಮರ್ಥ್ಯವನ್ನು ದುರ್ಬಲಗೊಳಿಸಬಹುದು. **ಕಾನೂನುಬಾಹಿರ** ಮಾದಕ ದ್ರವ್ಯಗಳು, **ಮನರಂಜನಾತ್ಮಕ** ಮಾದಕ ದ್ರವ್ಯಗಳು ಮತ್ತು ಮದ್ಯದ ಸೇವನೆಯು ಪ್ರತಿಯೊಬ್ಬರ ಸುರಕ್ಷತೆಗೂ ಧಕ್ಕೆ ತರುತ್ತದೆ. ಈ ವಸ್ತುಗಳನ್ನು ನಮ್ಮ ಕಾರ್ಯಸ್ಥಳದಿಂದ ಹೊರಗಿಡೋಣ.

### ತಪ್ಪು ಮಾರ್ಗ.

**ಬೆದರಿಕೆಗಳನ್ನು ನಿರ್ಲಕ್ಷಿಸುವುದು.** *ತಂಡದ ಸದಸ್ಯರೊಬ್ಬರು ನಿಮ್ಮ ಬಾಸ್‌ಗೆ ಕಪಾಳ ಮೋಕ್ಷ ಮಾಡುವ ಬಗ್ಗೆ ಮಾತನಾಡುತ್ತಾರೆ. ಅವರ ಕೋಪವು ಕಡಿಮೆಯಾಗುತ್ತದೆ ಎಂದು ನೀವು ಅಂದುಕೊಳ್ಳುತ್ತೀರಿ ಮತ್ತು ಅದನ್ನು ಕಡೆಗಣಿಸುತ್ತೀರಿ. ದೊಡ್ಡ ವಿಷಯವೇನೂ ಅಲ್ಲ, ಅಲ್ಲವೇ?* ತಪ್ಪು. ಹಿಂಸೆಯ ಯಾವುದೇ ಬೆದರಿಕೆಯನ್ನು ಸದಾ ಗಮನಿಸಿ ಮತ್ತು ವರದಿ ಮಾಡಿ. ನಾವು ತಂಡವಾಗಿದ್ದೇವೆ. ಪರಸ್ಪರ ಕಾಳಜಿ ವಹಿಸೋಣ.

> ಹೇಗೆ ಕೆಲಸಗಳನ್ನು ಮಾಡುತ್ತೇವೆ ಎಂಬುದು ನಮ್ಮ ಯಶಸ್ಸಿಗೆ ನಾವು ಏನುಮಾಡುತ್ತೇವೆ ಎಂಬಷ್ಟೇ ನಿರ್ಣಾಯಕವಾಗಿರುತ್ತದೆ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಕೆಲಸದ ಸ್ಥಳದ ಹಿಂಸಾಚಾರವನ್ನು ನಾನು ಹೇಗೆ ನೋಡಬೇಕು?

ಯಾರಾದರೂ ಹಿಂಸಾತ್ಮಕವಾಗುತ್ತಾರೆಯೇ ಎಂದು ಊಹಿಸುವುದು ತುಂಬಾ ಕಷ್ಟ. ಆದರೂ, ವಿಷಯಗಳನ್ನು ಸಾಂದರ್ಭಿಕವಾಗಿ ಪ್ರಸ್ತಾಪಿಸುವುದು ಸಹಾಯ ಮಾಡುತ್ತದೆ. ಯಾರಾದರೂ ಒಂದಕ್ಕಿಂತ ಹೆಚ್ಚು ಎಚ್ಚರಿಕೆ ಚಿಹ್ನೆಗಳನ್ನು ತೋರಿಸಿದರೆ ಅಥವಾ ಅವರ ವರ್ತನೆಗಳು ಕೆಟ್ಟದಾಗಿದ್ದರೆ, ವ್ಯವಸ್ಥಾಪಕರೊಂದಿಗೆ ಮಾತನಾಡಿ.

ಗಮನಿಸಬೇಕಾದ ವರ್ತನೆಗಳ ಉದಾಹರಣೆಗಳೆಂದರೆ:

- ನ್ಯಾಯಬಾಹಿರವಾಗಿ ಅನುಚಿತವಾಗಿ ನಡೆಸಿಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಹಠಾತ್, ನಿರಂತರ ದೂರುಗಳು
- ಸಹೋದ್ಯೋಗಿಗಳು ಅಥವಾ ವ್ಯವಸ್ಥಾಪಕರ ಜೊತೆಗೆ ಒಳ್ಳೆಯ ಸಂಬಂಧ ಇಲ್ಲದಿರುವುದು
- ವರ್ತನೆ, ಮನಸ್ಥಿತಿ ಬದಲಾವಣೆಗಳು ಅಥವಾ ಅನಿಯಮಿತ ವರ್ತನೆಯಲ್ಲಿ ಹಠಾತ್ ಬದಲಾವಣೆಗಳು
- ಸಂಶಯಗ್ರಸ್ಥ ವರ್ತನೆ
- ಕಿರಿಕಿರಿಯ ದೈಹಿಕ ಚಿಹ್ನೆಗಳಾದ ದಾಪುಗಾಲು ಹಾಕುವುದು, ಚೀರುವುದು, ಕಿರುಚುವುದು, ಮಾತಿನ ನಿಂದನೆ ಅಥವಾ ಬೆದರಿಕೆ ಟೀಕೆಗಳನ್ನು ಮಾಡುವುದು, ಅಥವಾ ವಾದಿಸುತ್ತಿರುವುದು

ದಿ ಗ್ಯಾರೇಜ್



# ಇತರರೊಂದಿಗೆ ಕೆಲಸ ಮಾಡುವುದು

## ತಲುಪಬೇಕಾದ ಗುರಿ

ನಮ್ಮ ಮೂಲ ಮೌಲ್ಯಗಳನ್ನು ಹಂಚಿಕೊಳ್ಳುವ ಇತರ ವ್ಯಕ್ತಿಗಳೊಂದಿಗೆ ಪರಸ್ಪರ ವಿಶ್ವಾಸ ಮತ್ತು ಗೌರವವನ್ನು ಬೆಳೆಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

Tenneco ದಲ್ಲಿ ನಾವು ನಿರಂತರ ಬೆಳವಣಿಗೆ ಮತ್ತು ಯಶಸ್ಸನ್ನು ನಿರೀಕ್ಷಿಸುತ್ತೇವೆ. ನಮ್ಮ ಗ್ರಾಹಕರು, ಮಾರಾಟಗಾರರು ಮತ್ತು ಇತರ ವ್ಯಕ್ತಿಗಳೊಂದಿಗೆ ಪರಸ್ಪರ ಲಾಭದಾಯಕ ಪಾಲುದಾರಿಕೆ ಹೊಂದಿರುವುದು ನಮ್ಮ ಯಶಸ್ಸಿನ ಒಂದು ಪ್ರಮುಖ ಅಂಶವಾಗಿದೆ.

ನಮ್ಮ ವಿಷಯದಲ್ಲಿ ನಾವು ಹೇಗೆ ಉನ್ನತ ಮಾನದಂಡಗಳನ್ನು ಹೊಂದಿರುತ್ತೇವೆಯೋ, ನಮ್ಮೊಂದಿಗೆ ಕೆಲಸ ಮಾಡಲು ಬಯಸುವವರ ವಿಚಾರದಲ್ಲೂ ಅಂಥದ್ದೇ ಕೆಲವು ನಿರೀಕ್ಷೆಗಳನ್ನು ಹೊಂದಿರುತ್ತೇವೆ. ಆರೋಗ್ಯಕರ ವ್ಯಾಪಾರ ಸಂಬಂಧಗಳು ಪ್ರತಿಯೊಬ್ಬರಿಗೂ ಸಲ್ಲುವ ಗೆಲುವು. ಹೀಗಾಗಿ ನಾವು ನಮ್ಮ ಕಡೆಯಿಂದ ಒಪ್ಪಂದದ ಪ್ರಕಾರವಾಗಿ ಕಾರ್ಯನಿರ್ವಹಿಸಲು ನಾವು ಪ್ರಯತ್ನಿಸುತ್ತೇವೆ.

### ನೈತಿಕ ವರ್ತನೆಗೆ ಮಾದರಿ.

**ಬುದ್ಧಿವಂತಿಕೆಯಿಂದ ಆಯ್ಕೆ ಮಾಡುವುದು.** *ನೀವು ಮುಂಬರುವ ಯೋಜನೆಯೊಂದಕ್ಕಾಗಿ ಇಬ್ಬರು ಮಾರಾಟಗಾರರ ನಡುವೆ ಯಾರನ್ನು ಆಯ್ಕೆ ಮಾಡಬೇಕೆಂದು ನಿರ್ಧರಿಸುತ್ತಿದ್ದೀರಿ. ಇಬ್ಬರ ಬಗ್ಗೆಯೂ ವಿಚಾರಣೆ ಮಾಡಿದಾಗ, ಇಬ್ಬರಿಗೂ ಒಳ್ಳೆಯ ಹೆಸರು ಇದೆ ಎಂದು ಖಚಿತವಾಗುತ್ತದೆ, ಆದರೆ ಈ ಪೈಕಿ ಒಬ್ಬರು, ತುಂಬಾ ಜನಪ್ರಿಯ, ಮತ್ತೊಬ್ಬರು ಅಷ್ಟಕ್ಕಷ್ಟೇ. ಪ್ರಸಿದ್ಧ ಮಾರಾಟಗಾರರನ್ನೇ ಆಯ್ಕೆ ಮಾಡುವ ಪ್ರಲೋಭನೆ ನಿಮ್ಮಲ್ಲಿ ಮೂಡಬಹುದು. ಆದರೆ ಅಗತ್ಯಗಳು, ಬೆಲೆ, ಗುಣಮಟ್ಟ, ಲಭ್ಯತೆ ಮತ್ತು ಸೇವೆಗಳನ್ನು ಮೌಲ್ಯಮಾಪನ ಮಾಡಿದಾಗ, ಅಷ್ಟಾಗಿ ಜನಪ್ರಿಯವಲ್ಲದ ಮಾರಾಟಗಾರರು ಬಲವಾದ ಸಾಮರ್ಥ್ಯ ಹೊಂದಿರುತ್ತಾರೆ. ಹಾಗಾಗಿ, ನೀವು ಅಷ್ಟಾಗಿ ಜನಪ್ರಿಯತೆ ಹೊಂದಿಲ್ಲದ ಮಾರಾಟಗಾರರನ್ನೇ ಆಯ್ಕೆ ಮಾಡುತ್ತೀರಿ. ಇದು ಸರಿಯಾದ ಆಯ್ಕೆಯೇ?* ಹೌದು. ಯಾವಾಗಲೂ ಉಲ್ಲೇಖಗಳು ಮತ್ತು ಹಿನ್ನೆಲೆಯನ್ನು ಪರಿಶೀಲಿಸುವುದರ ಜೊತೆಗೆ, ನಾವು ಕಾರ್ಯತತ್ಪರತೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು. ಅವರು ನಮ್ಮ ಮೂಲ ಮೌಲ್ಯಗಳೊಂದಿಗೆ ಸಾಮ್ಯತೆ ಹೊಂದಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು, ಮತ್ತು ಅವರು ಎಷ್ಟು ಜನಪ್ರಿಯ ಎಂಬುದರ ಬದಲಾಗಿ, ವಸ್ತುನಿಷ್ಠ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಬೇಕು.

**ಎಲ್ಲರನ್ನೂ ನ್ಯಾಯೋಚಿತವಾಗಿ ನಡೆಸಿಕೊಳ್ಳುವುದು.** *ಒಬ್ಬ ಸಂಭಾವ್ಯ ಮಾರಾಟಗಾರರೊಬ್ಬರು ನಿಮಗೆ ಮತ್ತು ನಿಮ್ಮ ಸಂಗಾತಿಗೆ ವೃತ್ತಿಪರ ಫುಟ್ಬಾಲ್ ಆಟಕ್ಕೆ ಟಿಕೆಟ್‌ಗಳನ್ನು ಕಳುಹಿಸುತ್ತಾರೆ. ಅದು ವಿಪರೀತವೆನಿಸುತ್ತದೆ, ಆದ್ದರಿಂದ ನೀವು ನಮ್ಮ ನೀತಿಗಳನ್ನು ವಿವರಿಸುವ ಸೌಜನ್ಯದ ಟಿಪ್ಪಣಿಯೊಂದಿಗೆ ಅವುಗಳನ್ನು ಹಿಂದಿರುಗಿಸುತ್ತೀರಿ. ಇದು ಚತುರ ನಡೆಯೇ?* ಹೌದು, ತುಂಬಾ. ಸಂಭಾವ್ಯ ಮಾರಾಟಗಾರರಿಂದ ಉಡುಗೊರೆಯನ್ನು ಸ್ವೀಕರಿಸುವುದರ ಮೂಲಕ ನೀವು ಕಂಪನಿಗೆ ಅತ್ಯುತ್ತಮವಾದುದರ ಬದಲಾಗಿ ನಿಮಗೆ ಅತ್ಯುತ್ತಮವಾದುದನ್ನು ಆಯ್ಕೆ ಮಾಡುತ್ತಿದ್ದೀರಿ ಎಂಬ ಭಾವನೆಯನ್ನು ಮೂಡಿಸುತ್ತದೆ. ನಮ್ಮ ನೀತಿಗೆ ಅಗತ್ಯವಾಗಿ ಉಡುಗೊರೆಗಳನ್ನು ಬಹಿರಂಗಪಡಿಸಬೇಕು.

### ಎಚ್ಚರಿಕೆ.

**ಕಾರ್ಯಕ್ಷಮತೆಯ ಮೇಲ್ವಿಚಾರಣೆ.** *ನೀವು ಇತ್ತೀಚೆಗೆ ಗುತ್ತಿಗೆದಾರರೊಬ್ಬರ ಜೊತೆ ಕೆಲಸ ಆರಂಭಿಸಿದ್ದೀರಿ. ಅವರು ನಮ್ಮ ಶ್ರೇಷ್ಠ ಗುಣಮಟ್ಟವನ್ನು ಎತ್ತಿ ಹಿಡಿಯಬೇಕೆಂದು ನಾವು ನಿರೀಕ್ಷಿಸುತ್ತಿರುವುದಾಗಿ ಅವರಿಗೆ ತಿಳಿಸುತ್ತೀರಿ ಮತ್ತು ಯೋಜನೆಯು ಹೆಚ್ಚು ಸಮಯ ತೆಗೆದುಕೊಂಡರೂ ಕಾನೂನನ್ನು ಪಾಲಿಸಬೇಕೆಂದು ನಿರೀಕ್ಷಿಸುತ್ತಿರುವುದಾಗಿ ಅವರಿಗೆ ತಿಳಿಸುತ್ತೀರಿ. ನೀವು ನಿಮ್ಮ ಪಾತ್ರವನ್ನು ನಿರ್ವಹಿಸಿದ್ದೀರಿ, ಅಲ್ಲವೇ?* ಇದು ಒಂದು ಉತ್ತಮ ಆರಂಭ, ಆದರೆ ಅವರ ಕೆಲಸವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಯಾವುದೇ ಅನುಮಾನ ಕಂಡುಬಂದರೆ, ಇನ್‌ವಾಯ್ಸ್‌ಗಳನ್ನು ಪರಿಶೀಲಿಸಿ ಮತ್ತು ನಮ್ಮ ಮೂಲ ಮೌಲ್ಯಗಳನ್ನು ಬೆಂಬಲಿಸುವ ಜತೆಗೆ ಅವರು ಸಮಯಕ್ಕೆ ಸರಿಯಾಗಿ ಮತ್ತು ಭರವಸೆ ನೀಡಿದಂತೆ ಪೂರೈಸುತ್ತಾರೆಯೇ ಎಂದು ಖಚಿತಪಡಿಸಿಕೊಳ್ಳಿ.

### ತಪ್ಪು ಮಾರ್ಗ.

**ಅವರ ಮಾಹಿತಿಯನ್ನು ರಕ್ಷಿಸುವುದು.** *ನಮ್ಮ ಗುತ್ತಿಗೆದಾರರೊಬ್ಬರು ಆಕಸ್ಮಿಕವಾಗಿ ಯಾವುದೋ ಗೌಪ್ಯವಾದ ಇಮೇಲ್ ಕಳುಹಿಸುತ್ತಾರೆ. ಅದು ಇತರರೊಂದಿಗೆ ಹಂಚಿಕೊಳ್ಳಲಾರದಷ್ಟು ರೋಚಕವಾಗಿರುತ್ತದೆ. ಆದರೆ, ನೀವು ಊಟದ ನಂತರ ತಂಡದ ಸದಸ್ಯರೊಂದಿಗೆ ಅದರ ಬಗ್ಗೆ ಚರ್ಚಿಸುತ್ತೀರಿ. ನೀವು ಇನ್ನೊಬ್ಬರಿಗೆ ಬರೀ ಹೇಳುತ್ತೀರಿ ಅಷ್ಟೇ, Tenneco ದಲ್ಲಿ ಅದು ದೊಡ್ಡ ವಿಷಯವಲ್ಲ, ಅಲ್ಲವೇ?* ತಪ್ಪು. ನಮ್ಮ ಗುತ್ತಿಗೆದಾರರು ನಮ್ಮ ಮೇಲೆ ವಿಶ್ವಾಸವಿಟ್ಟು ಮಾಹಿತಿ ನೀಡಿರುತ್ತಾರೆ. ಒಂದು ವೇಳೆ, ನೀವು ಆಕಸ್ಮಿಕವಾಗಿ ಯಾವುದಾದರೂ ಗೌಪ್ಯ ಮಾಹಿತಿ ಸ್ವೀಕರಿಸಿದ್ದರೆ, ಅದನ್ನು ತಕ್ಷಣ ಅಳಿಸಿ ಹಾಕಿ. ಅದನ್ನು ಕಳುಹಿಸಿದವರಿಗೆ ಅವರ ತಪ್ಪಿನ ಬಗ್ಗೆ ತಿಳಿಸಿ, ಈ ಬಗ್ಗೆ ನಿಮ್ಮ ಕಾನೂನು ಸಲಹೆಗಾರರಿಗೆ ತಿಳಿಸಿ. ನಾವು ಸದಾ ಗೌಪ್ಯತೆಯನ್ನು ಕಾಪಾಡುತ್ತೇವೆ ಎಂಬ ಸಂದೇಶವನ್ನು ಇದು ರವಾನಿಸುತ್ತದೆ. ನಮ್ಮ ಗೆಲುವಿನ ಬದ್ಧತೆಯನ್ನು ಮಾತ್ರವಲ್ಲ, ಸರಿಯಾದ ಮಾರ್ಗದ ಬಗ್ಗೆ ಇದು ಮನವರಿಕೆ ಮಾಡಿಕೊಡುತ್ತದೆ. ಬೇರೆಯವರು ನಿಮ್ಮ ಬಗ್ಗೆ ಮಾಹಿತಿಯನ್ನು ಹೇಗೆ ನೋಡಬೇಕೆಂದು ಬಯಸುವಿರೋ, ಅವರ ಮಾಹಿತಿಯನ್ನೂ ನೀವು ಅದೇ ರೀತಿ ನೋಡಿ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### "ಇತರ ಪಕ್ಷಗಳು" ಎಂದರೇನು?

ಇತರ ಪಕ್ಷಗಳು ಎಂದರೆ Tenneco ಜೊತೆ ವ್ಯವಹಾರ ಮಾಡುವ ಅಥವಾ ಮಾಡಲು ಬಯಸುವ ಯಾವುದೇ ವ್ಯಕ್ತಿ ಅಥವಾ ಕಂಪನಿ ಎಂದರ್ಥ.

ಇತರ ಪಕ್ಷಗಳೊಂದಿಗೆ ಕೆಲಸ ಮಾಡಲು ಸಲಹೆಗಳು:

- ಪಕ್ಷದೊಂದಿಗೆ ಕೆಲಸ ಮಾಡುವ ಮೊದಲು ಸೂಕ್ತವಾದ ಹಿನ್ನೆಲೆ ಪರಿಶೀಲನೆ ನಡೆಸಿ.
- ಮಾರಾಟಗಾರರನ್ನು ನೇಮಕ ಮಾಡುವ ಮೊದಲು ಅವರ ಬಗ್ಗೆ ತಿಳಿದುಕೊಳ್ಳಲು ಕೆಲಸ ಮಾಡಿ (ಗುಣಮಟ್ಟ, ಖ್ಯಾತಿ, ಆರ್ಥಿಕ ಸ್ಥಿರತೆ, ಹಂಚಿಕೊಂಡ ಮೌಲ್ಯಗಳು).
- ಅಪಾಯವನ್ನು ನಿರ್ವಹಿಸಲು ಸರಿಯಾದ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಿ.
- ಅವರು ನಮ್ಮ ಮೂಲ ಮೌಲ್ಯಗಳು ಮತ್ತು ನಿರೀಕ್ಷೆಗಳನ್ನು ಅರ್ಥಮಾಡಿಕೊಂಡಿದ್ದಾರೆ ಎಂದು ಖಚಿತಪಡಿಸಿಕೊಳ್ಳಿ.
- ಗುತ್ತಿಗೆಯ ಒಪ್ಪಂದಗಳಲ್ಲಿ ಈ ಕೆಳಗಿನವುಗಳನ್ನು ಸೇರಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಿ:
  - ನಿರೀಕ್ಷಿತ ವಿತರಣೆಗಳು (ಸರಕುಗಳು ಅಥವಾ ಸೇವೆಗಳು)
  - ಕಮಿಷನ್ ಅಥವಾ ಶುಲ್ಕ ಅಥವಾ ಇತರ ಹಣ ಪಾವತಿಗಳನ್ನು ಗಳಿಸುವ ಆಧಾರ
  - ಅನ್ವಯವಾಗುವ ದರ ಅಥವಾ ಶುಲ್ಕ
  - ಕಾನೂನು ಕಟ್ಟುಪಾಡುಗಳ ಅನುಸರಣೆ
- ಯಾವುದೇ ಮರುಪಾವತಿಗಳನ್ನು ಬೆಂಬಲಿಸಲು ರಶೀದಿಗಳಂತಹ ದಾಖಲೆಗಳಿಗೆ ವಿನಂತಿಸಿ ಮತ್ತು ಪರಿಶೀಲಿಸಿ.
- ನಮ್ಮ ಮಾರಾಟಗಾರರ ಸ್ಕ್ರೀನಿಂಗ್ ಪ್ರಕ್ರಿಯೆಯನ್ನು ಅನುಸರಿಸಿ.



## ದಿ ಗ್ಯಾರೇಜ್

ಪೂರೈಕೆದಾರರ ನೀತಿ ಸಂಹಿತೆ



# ನಮ್ಮ ಹೂಡಿಕೆಯ ರಕ್ಷಣೆ

ಸರಿಯಾದ ದಾರಿಯಲ್ಲಿ ನಡೆದು ಗೆಲ್ಲುವ ನಮ್ಮ ಬದ್ಧತೆಗಾಗಿ ಜನರು ನಮ್ಮನ್ನು ಗೌರವಿಸುತ್ತಾರೆ. ಫಲಿತಾಂಶಗಳನ್ನು ನೀಡುವ ಉದ್ದೇಶದಿಂದ ಪ್ರತೀ ದಿನವೂ ಹಿಂದಿನ ದಿನಕ್ಕಿಂತ ಉತ್ತಮ ಕಾರ್ಯಕ್ಷಮತೆ ನೀಡುವ ಉತ್ಸಾಹದಿಂದ ಕೆಲಸಕ್ಕೆ ಬರುತ್ತೇವೆ ಎನ್ನುವುದು ಅವರಿಗೆ ಗೊತ್ತು. ಪರಸ್ಪರ, ನಮ್ಮ ಸಂಸ್ಥೆ, ನಮ್ಮ ಸಂಬಂಧಗಳನ್ನು ಗೌರವಿಸುವುದು ಮತ್ತು ರಕ್ಷಿಸುವುದರ ಮೂಲಕ ಮತ್ತು ನಮ್ಮ ಬ್ರಾಂಡ್‌ನ ಪ್ರಾಮಾಣಿಕತೆಯನ್ನು ನಿಭಾಯಿಸುವ ಜವಾಬ್ದಾರಿಯನ್ನು ತೆಗೆದುಕೊಂಡು ನಾವು ಅವರ ನಂಬಿಕೆಯನ್ನು ಪಡೆಯುತ್ತೇವೆ.

## ಈ ವಿಭಾಗದಲ್ಲಿ:

- ನಿಖರವಾದ ದಾಖಲೆಗಳು ಮತ್ತು ಹಣಕಾಸು ವರದಿಗಳನ್ನು ನಿರ್ವಹಿಸುವುದು
- ದಾಖಲೆಗಳನ್ನು ನಿರ್ವಹಿಸುವುದು
- ನಮ್ಮ ಆಸ್ತಿಯ ಕಾಳಜಿ ವಹಿಸುವುದು
- ಗೌಪ್ಯ ಮಾಹಿತಿಯ ರಕ್ಷಣೆ ಮಾಡುವುದು
- ಖಾಸಗೀತನ ವನ್ನು ರಕ್ಷಿಸಿಕೊಳ್ಳುವುದು
- ಸರ್ಕಾರದ ಜೊತೆಗೆ ವ್ಯವಹರಿಸುವುದು
- ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು

# ನಿಖರವಾದ ದಾಖಲೆಗಳು ಮತ್ತು ಹಣಕಾಸು ವರದಿಗಳನ್ನು ನಿರ್ವಹಿಸುವುದು

## ತಲುಪಬೇಕಾದ ಗುರಿ

ನಮ್ಮ ದಾಖಲೆಗಳು ಮತ್ತು ವರದಿಗಳು ನಮ್ಮ ವ್ಯವಹಾರವನ್ನು ನಿಖರವಾಗಿ ಪ್ರತಿಫಲಿಸುತ್ತದೆ ಎಂದು ಖಚಿತಪಡಿಸುವುದು.


## ನಾವು ಅದನ್ನು ಹೇಗೆ ಸಾಧಿಸುವುದು

ನಿಖರ ದಾಖಲೆಗಳು ಮತ್ತು ಹಣಕಾಸು ವರದಿಗಳನ್ನು ನಿಭಾಯಿಸುವುದು ಆರೋಗ್ಯಕರ ವ್ಯವಹಾರದ ಹೃದಯಭಾಗವಾಗಿದೆ. ಇದು ಜಾಣ ನಿರ್ಧಾರಗಳನ್ನು ತೆಗೆದುಕೊಳ್ಳಲು, ಕಾನೂನು ಅನುಸರಣೆಗೆ, ಮತ್ತು ನಮ್ಮ ಹಣ ಎಲ್ಲಿ ಹೋಗುತ್ತಿದೆ ಎನ್ನುವ ಅರಿವು ಹೊಂದಿರಲು ನೆರವಾಗುತ್ತದೆ.

ನಾವೆಲ್ಲರೂ ನಮ್ಮ ಕಂಪನಿಯ ದಾಖಲೆಗಳಿಗೆ ಕೊಡುಗೆ ನೀಡುತ್ತೇವೆ, ಹೀಗಾಗಿ ನಮ್ಮ ಕೊಡುಗೆಗಳು ಸಕಾರಾತ್ಮಕವಾಗಿವೆ ಎಂದು ಖಚಿತಪಡಿಸೋಣ. ನೀವೇನೇ ದಾಖಲಿಸಿದರೂ- ಅದು ನಿಮ್ಮ ಸಮಯ, ಒಂದು ವೆಚ್ಚ, ಅಥವಾ ಒಂದು ವ್ಯಾವಹಾರಿಕ ವಹಿವಾಟು ಆಗಿರುತ್ತದೆ - ಅದನ್ನು ಪ್ರಾಮಾಣಿಕತೆಯಿಂದ ಮಾಡಿ. ನೀವು ಅದನ್ನು ಮಾಡಿದಾಗ, ನಮ್ಮ ಹೂಡಿಕೆದಾರರು, ನಮ್ಮ ಗ್ರಾಹಕರು, ನಮ್ಮ ಸಹೋದ್ಯೋಗಿಗಳು ಮತ್ತು ನಮ್ಮ ಸಮುದಾಯಗಳ ವಿಶ್ವಾಸವನ್ನು ಪಡೆಯಲು ನೀವು ನಮಗೆ ನೆರವಾಗುತ್ತೀರಿ.

### ನೈತಿಕ ವರ್ತನೆಗೆ ಮಾದರಿ.

ಪ್ರಾಮಾಣಿಕವಾಗಿ ಇರುವುದು. *ನಿಮ್ಮ ತಂಡ ತನ್ನ ತಿಂಗಳ ಬಜೆಟ್ ತಲುಪಿದೆ ಎನ್ನುವ ಕಾರಣದಿಂದ ವೆಚ್ಚದ ವರದಿಯನ್ನು ಸಲ್ಲಿಸಲು ಕಾಯುವಂತೆ ನಿಮ್ಮ ತಂಡದ ಸದಸ್ಯನೊಬ್ಬ ಸಲಹೆ ನೀಡುತ್ತಾರೆ. ನಮ್ಮ ಸಂಖ್ಯೆಗಳು ನಿಖರವಾಗಿರಬೇಕು ಎಂದು ಆಕೆಗೆ ನೆನಪಿಸುತ್ತೀರಿ ಮತ್ತು ಅದನ್ನು ಸಲ್ಲಿಸಿರುವುದನ್ನು ಖಚಿತಪಡಿಸಿಕೊಳ್ಳಲು ಕೇಳಿ ತಿಳಿದುಕೊಳ್ಳುತ್ತೀರಿ. ಅದು ಸರಿಯಾದ ಆಯ್ಕೆಯೇ?* ಹೌದು! ನಿಖರವಾದ ದಾಖಲೆ ಹೊಂದಿರುವುದು ಬಜೆಟ್ ತಯಾರಿಸುವುದಕ್ಕಿಂತಲೂ ಹೆಚ್ಚು ಮುಖ್ಯವಾಗಿದೆ. ಸುಳ್ಳು ಹೇಳುವುದಕ್ಕಿಂತ ಬಜೆಟ್ ಕೊರತೆಯ ಬಗ್ಗೆ ವಿವರಿಸುವುದು ಹೆಚ್ಚು ಸುಲಭ.




### ಎಚ್ಚರಿಕೆ.

ವರದಿಗಳನ್ನು ಪರಿಶೀಲಿಸುವುದು. *ಇದು ತ್ರೈಮಾಸಿಕ ಅವಧಿಯ ಅಂತ್ಯ ಮತ್ತು ನಿಮ್ಮ ಬಾಸ್ ನಿಮ್ಮ ತಂಡ ಗುರಿ ತಲುಪಿದೆ ಎನ್ನುವ ಸಂತೋಷದಲ್ಲಿದ್ದಾರೆ. ಹಾಗಿದ್ದರೂ, ಇಂದು ಬೆಳಿಗ್ಗೆ, ದೊಡ್ಡ ಸರಕೊಂದು ತ್ರೈಮಾಸಿಕ ಅಂತ್ಯದ ನಂತರ ಒಂದು ದಿನದವರೆಗೆ ವಿಳಂಬವಾಯಿತು. ಅದನ್ನು ಪರಿಗಣಿಸುವಲ್ಲಿ ಯಾವುದೇ ತೊಂದರೆಯಿಲ್ಲ. ಸರಿಯೇ?* ತುಂಬಾ ತ್ವರಿತವಾಗಿಲ್ಲ. ನೀವು ಈ ಪ್ರಶ್ನೆಯನ್ನು ಕೇಳುತ್ತಿರುವುದು ಒಳ್ಳೆಯದು. ಯಾವಾಗಲೂ ಪ್ರಾಮಾಣಿಕವಾಗಿ ಕೆಲಸ ಮಾಡುವುದು ಮತ್ತು ನಮ್ಮ ಮಾರಾಟಗಳು ಸೂಕ್ತ ಲೆಕ್ಕಪರಿಶೋಧನಾ ನಿಯಮಗಳಿಗೆ ಬದ್ಧವಾಗಿವೆ ಎಂದು ದೃಢೀಕರಿಸುವುದು ಅತೀ ಮುಖ್ಯ. ಖರೀದಿಯನ್ನು ದೃಢೀಕರಿಸಿದರೂ ಮತ್ತು ಸರಕನ್ನು ತ್ರೈಮಾಸಿಕ ಅಂತ್ಯದ ಒಂದು ದಿನ ತಡವಾಗಿ ಸಾಗಾಟ ಮಾಡಲಾಗುತ್ತಿದ್ದರೂ, ನಾವು ಅದನ್ನು ಮೊದಲೇ ಲೆಕ್ಕ ಮಾಡಲು ಸಾಧ್ಯವಿಲ್ಲ. ನಮ್ಮ ಹೂಡಿಕೆದಾರರು ಮತ್ತು ಲೆಕ್ಕಪರಿಶೋಧಕರು ನಾವು ನಿಖರವಾಗಿರಬೇಕು ಎಂದು ಬಯಸುತ್ತಾರೆ.

### ತಪ್ಪು ಮಾರ್ಗ.

ಸಂಶಯವನ್ನು ಅಲಕ್ಷಿಸುವುದು. *ತಂಡದ ಸದಸ್ಯರೊಬ್ಬರು ತಾವು ಪೂರ್ಣಗೊಳಿಸಿರದ ಇನ್ವೆಂಟರಿ ಲೆಕ್ಕವೊಂದಕ್ಕೆ ಸೈನ್ ಆಫ್ ಮಾಡಿರುವುದನ್ನು ನೀವು ನೋಡುತ್ತೀರಿ. ಅದು ನಿಮ್ಮ ವಿಭಾಗವಲ್ಲ, ಹೀಗಾಗಿ ನೀವು ಅದರ ಕಡೆಗೆ ಗಮನಹರಿಸುವುದಿಲ್ಲ. ಅದು ಸರಿಯೇ?* ಅಲ್ಲ. ದಾಖಲೆಗಳನ್ನು ತಪ್ಪಾಗಿ ಸಲ್ಲಿಸುವುದು ಯಾವತ್ತೂ ಸರಿಯಲ್ಲ. ಮಾತನಾಡಿ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಇನ್ನೇನಾದರೂ ತಿಳಿಯಬೇಕೇ?

- ವ್ಯವಹಾರ ದಾಖಲೆಗಳನ್ನು ಎಚ್ಚರಿಕೆಯಿಂದ, ಸಂಪೂರ್ಣವಾಗಿ, ಪ್ರಾಮಾಣಿಕವಾಗಿ ಮತ್ತು ಸುಲಭವಾಗಿ ಅರ್ಥಮಾಡಿಕೊಳ್ಳಲು ರೆಕಾರ್ಡ್ ಮಾಡಿ.
- ನೀವು ಏನನ್ನು ರೆಕಾರ್ಡ್ ಮಾಡುತ್ತೀರಿ ಎಂಬುದನ್ನು ಬೆಂಬಲಿಸುವ ಎಲ್ಲವನ್ನೂ ಇರಿಸಿ - ಊಟದ ಐಟಂ ರಶೀದಿ ಅಥವಾ ನಿನ್ನೆಯ ಸುರಕ್ಷತಾ ಪರೀಕ್ಷೆಯ ಫಲಿತಾಂಶಗಳು.
- ಹಾಗೆ ಮಾಡಲು ಅಧಿಕಾರವಿದ್ದಾಗ ಮಾತ್ರ ದಾಖಲೆಗಳಿಗೆ ಸಹಿ ಮಾಡಿ ಮತ್ತು ಅನುಮೋದಿಸಿ.

**ದಿ ಗ್ಯಾರೇಜ್**
ಹಣಕಾಸು ಸಂಹಿತೆ



# ದಾಖಲೆಗಳನ್ನು ನಿರ್ವಹಿಸುವುದು

## ತಲುಪಬೇಕಾದ ಗುರಿ

ನಮ್ಮ ನಿತ್ಯದ ಉದ್ಯಮ ಅಭ್ಯಾಸಗಳಿಗೆ ನೆರವು ನೀಡಬಲ್ಲ ಮಾಹಿತಿಯನ್ನು ಸಮಯಕ್ಕೆ ಸರಿಯಾಗಿ ನೀಡುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ನಾವು ಸಾಕಷ್ಟು ವ್ಯವಹಾರ ದಾಖಲೆಗಳನ್ನು, ಕಾಗದದಲ್ಲಿ ಮತ್ತು ತಾಂತ್ರಿಕವಾಗಿ ಸೃಷ್ಟಿಸುತ್ತೇವೆ, ಮತ್ತು ನಮ್ಮ ತೆರಿಗೆ, ಕಾನೂನು, ಅನುಸರಣೆ ಮತ್ತು ಹಣಕಾಸು ಬದ್ಧತೆಗಳಿಗಾಗಿ ದಾಖಲೆಗಳನ್ನು ಉಳಿಸಿಕೊಳ್ಳುತ್ತೇವೆ. ಇದು ನಮ್ಮ ಸಂಸ್ಥೆಯನ್ನು ರಕ್ಷಿಸುತ್ತದೆ. ಆದರೆ, ನಾವು ಪ್ರತಿಯೊಂದನ್ನು ಶಾಶ್ವತವಾಗಿ ಕಾಪಿಡುವುದಿಲ್ಲ. ಕಾಪಿಡುವ ಅಗತ್ಯವಿಲ್ಲದ ದಾಖಲೆಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವುದರಿಂದ ನಮಗೆ ಅಗತ್ಯವಾಗಿರುವುದನ್ನು ತ್ವರಿತವಾಗಿ, ಸುಲಭವಾಗಿ ಮತ್ತು ಹೆಚ್ಚು ವೆಚ್ಚವಿಲ್ಲದ ರೀತಿಯಲ್ಲಿ ಪಡೆಯಲು ನಮಗೆ ನೆರವಾಗುತ್ತದೆ.

### ನೈತಿಕ ವರ್ತನೆಗೆ ಮಾದರಿ.

**ವೈಯಕ್ತಿಕ ಮಾಹಿತಿಯನ್ನು ರಕ್ಷಿಸುವುದು.** *ನಮ್ಮ ಶೇರ್‌ಪಾಯಿಂಟ್ ಸೈಟ್‌ಗಳಲ್ಲಿ ಒಂದು ನಮಗೆ ಇನ್ನು ಅಗತ್ಯಕ್ಕೆ ಬಾರದ ಗ್ರಾಹಕ ಮಾಹಿತಿ ಇರುವುದು ನಿಮ್ಮ ಗಮನಕ್ಕೆ ಬರುತ್ತದೆ. ನಿಮ್ಮ ಬಾಸ್‌ನಿಂದ, ಮತ್ತು ದಾಖಲೆಗಳ ಮಾಲೀಕರಿಂದ ಒಪ್ಪಿಗೆಯನ್ನು ಪಡೆದ ನಂತರ, ನಮ್ಮ ದಾಖಲೆ ಉಳಿಸುವ ನೀತಿಗೆ ಅನುಸಾರವಾಗಿ ಮಾಹಿತಿಯನ್ನು ನೀವು ವಿಲೇವಾರಿ ಮಾಡುತ್ತೀರಿ. ಆದರ್ಶ ವರ್ತನೆಯೇ?* ಖಂಡಿತಾ. ಮಾಹಿತಿ ನಮಗೆ ಇನ್ನು ಅಗತ್ಯವಿಲ್ಲದೆ ಇದ್ದರೂ, ಹ್ಯಾಕರ್‌ಗೆ ಅದು ಮೌಲ್ಯಯುತವಾಗಿ ಬಿಡಬಹುದು, ಅದರಿಂದಾಗಿ ನಾವು ಮಾಹಿತಿಯ ಸೋರಿಕೆಗೆ ಗುರಿಯಾಗಬಹುದು. ಅದನ್ನು ಸೂಕ್ತವಾಗಿ ವಿಲೇವಾರಿ ಮಾಡುವ ಮೂಲಕ, ನೀವು Tenneco ಮತ್ತು ನಮ್ಮ ಮೇಲೆ ವಿಶ್ವಾಸವನ್ನು ಇಟ್ಟವರನ್ನು ರಕ್ಷಿಸುತ್ತೀರಿ.

### ಎಚ್ಚರಿಕೆ.

**ಮಾಹಿತಿ ಪಡೆಯುವುದು.** *ಈಗ ಕಾನೂನಿನ ಪ್ರಕಾರ ನಿರ್ಣಯವಾಗಿದೆ ಎಂದು ತಿಳಿದು ಬಂದಿರುವ ಕಾನೂನು ವ್ಯಾಜ್ಯವೊಂದಕ್ಕೆ ಸಂಬಂಧಿಸಿದ ಹಲವು ಇಮೇಲ್‌ಗಳನ್ನು ನೀವು ಉಳಿಸಿಕೊಂಡಿದ್ದೀರಿ. ಅಳಿಸುವುದೇ ಸರಿಯೇ?* ಇರಬಹುದು, ಆದರೆ ಕಾನೂನು ವಿಭಾಗದೊಂದಿಗೆ ಮೊದಲು ಪರಿಶೀಲಿಸಿ. ಇಮೇಲ್‌ಗಳನ್ನು ವ್ಯವಹಾರ ದಾಖಲೆಗಳು ಎಂದು ಪರಿಗಣಿಸಲಾಗಿದೆ, ಮತ್ತು ಕಾನೂನು ಸಮರದ ಸಾಧ್ಯತೆಯನ್ನು ಗಮನಿಸಿ, ನೀವು ಅವುಗಳನ್ನು ನಿಭಾಯಿಸಬೇಕಾಗುತ್ತದೆ. ಒಂದು ಕಾನೂನು ವ್ಯಾಜ್ಯದಲ್ಲಿ ನಾವು ಗೆಲ್ಲಲು ನೆರವಾಗುತ್ತದೆಯೇ ಇಲ್ಲವೇ ಎನ್ನುವ ಪ್ರಶ್ನೆಯಿಲ್ಲದೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ರಕ್ಷಿಸಿಟ್ಟುಕೊಳ್ಳಲು ನಾವು ಅನುಸರಿಸುವ ಪ್ರಕ್ರಿಯೆ ಲೀಗಲ್ ಹೋಲ್ಡ್ ಆಗಿದೆ.



## ತಪ್ಪು ಮಾರ್ಗ.

ಅವಧಿಗೆ ಮೊದಲೇ ಅಳಿಸುವುದು. *ನೀವು ಡೌನ್‌ಲೋಡ್ ಮಾಡಿರುವ ಮತ್ತು ನಿಮ್ಮ ಹಾರ್ಡ್‌ಡ್ರೈವ್‌ನಲ್ಲಿ ಉಳಿಸಿಕೊಂಡಿರುವ ಹಣಕಾಸು ದಾಖಲೆಗಳು ಹಲವು ವರ್ಷಗಳ ಹಿಂದಿನವು ಎಂದು ನಿಮಗೆ ತಿಳಿಯುತ್ತದೆ, ಹೀಗಾಗಿ ನೀವು ಅವುಗಳನ್ನು ಅಳಿಸುತ್ತೀರಿ. ದೊಡ್ಡ ವಿಷಯವಲ್ಲವೇ?* ಅತೀ ದೊಡ್ಡ ವಿಷಯ. ಎಲ್ಲಾ ಹಣಕಾಸು ದಾಖಲೆಗಳು ಮತ್ತು ದಸ್ತಾವೇಜುಗಳ ಅಧಿಕೃತ ಪ್ರತಿಗಳು ಮತ್ತು ವರದಿಗಳನ್ನು ಕಂಪನಿಯ ಸಿಸ್ಟಂಗಳಲ್ಲಿ ಅಥವಾ ಅಂಗೀಕೃತ ಅಪ್ಲಿಕೇಶನ್‌ಗಳು ಮತ್ತು ರೆಪೊಸಿಟರಿಗಳಲ್ಲಿ ಉಳಿಸಿರಬೇಕು. ಹಾಗಿದ್ದರೂ, ಇಂತಹ ಪ್ರಕರಣ ಅಥವಾ ಸಮಾನ ಪರಿಸ್ಥಿತಿಗಳಲ್ಲಿ, **ಯಾವುದನ್ನಾದರೂ** ಅಳಿಸುವ ಮೊದಲು, ನಿಮ್ಮ ವ್ಯವಸ್ಥಾಪಕರ ಜೊತೆಗೆ ಮಾತನಾಡಿ ಮತ್ತು ನಮ್ಮ ದಾಖಲೆ ಇರಿಸಿಕೊಳ್ಳುವ ನೀತಿ ಪರಿಶೀಲಿಸಿ. ಅದು ಮಾಹಿತಿಯ ಸಂಗ್ರಹ, ಉಳಿಸುವುದು ಮತ್ತು ವಿಲೇವಾರಿ ಮಾಡುವ ವೇಳಾಪಟ್ಟಿಗಳನ್ನು ವಿವರಿಸುತ್ತದೆ. ಅಲ್ಲದೆ, ನಾಶಪಡಿಸುವ ದಿನಾಂಕದ ಹೊರತಾಗಿಯೂ, ನಾವು ಲೀಗಲ್‌ಹೋಲ್ಡ್ ದಾಖಲೆಗಳು ಅಥವಾ ಕಾನೂನು ಪ್ರಕಾರ ನಾಶಪಡಿಸಬಾರದ (ಸ್ಥಿರ ಆಸ್ತಿ ದಾಖಲೆಗಳು ಮೊದಲಾಗಿ) ದಾಖಲೆಗಳನ್ನು ನಾವು ಎಂದಿಗೂ ಅಳಿಸುವುದಿಲ್ಲ ಎನ್ನುವುದು ನೆನಪಿರಲಿ. ನಮ್ಮ ನೀತಿಗಳನ್ನು ಪಾಲಿಸುವ ಮೂಲಕ, ನೀವು ಪ್ರಾಮಾಣಿಕತೆಗಾಗಿ ನಿಮ್ಮ ಬದ್ಧತೆಯನ್ನು ಪ್ರದರ್ಶಿಸುತ್ತೀರಿ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ದಾಖಲೆಗಳನ್ನು ನಿರ್ವಹಣೆ ಮಾಡುವುದು ಹೇಗೆ ಕಾಣುತ್ತದೆ?

ಇದು ಕೇವಲ ನೀತಿಗಳನ್ನು ಪಾಲಿಕೊಂಡು ಹೋಗುವುದಕ್ಕಿಂತ ಹೆಚ್ಚಿನದಾಗಿದೆ. ಇದು ಸಾಮಾನ್ಯ ಜ್ಞಾನವನ್ನು ಬಳಸುವುದಕ್ಕೆ ಸಂಬಂಧಿಸಿದೆ. ಸಂಘಟಿತವಾಗಿರಿ ಮತ್ತು ಮುಖ್ಯವಾದುದನ್ನು ಇರಿಸಿ. ಯಾವುದಾದರೂ ಅಧಿಕೃತ ಲೆಕ್ಕಪರಿಶೋಧನೆ ಅಥವಾ ತನಿಖೆಗೆ ಒಳಪಟ್ಟರೆ, ನಾವು ಸೂಕ್ತವಾಗಿ ಪ್ರತಿಕ್ರಿಯಿಸಬಹುದು.

## ದಿ ಗ್ಯಾರೇಜ್



# ನಮ್ಮ ಆಸ್ತಿಯ ಕಾಳಜಿ ವಹಿಸುವುದು

## ತಲುಪಬೇಕಾದ ಗುರಿ

ನಮ್ಮದು ಎನ್ನುವ ಎಲ್ಲದರ ಉತ್ತಮ ಕಾಳಜಿವಹಿಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ನೀವು ಯಾವುದೇ ರೀತಿಯ ಪಾತ್ರವನ್ನು ನಿರ್ವಹಿಸಿದ್ದರೂ, ಮೌಲ್ಯಯುತವಾದ ಕಂಪನಿಯ ಆಸ್ತಿಗೆ ನೀವು ಜವಾಬ್ದಾರರಾಗುವ ಸಾಧ್ಯತೆಗಳು ಇವೆ. ನೀವು ಸಾಧನದ ನಿರ್ವಹಣೆ, ಕಂಪ್ಯೂಟರ್‌ಟೈಪಿಂಗ್ ಮಾಡುತ್ತೀರಾ ಅಥವಾ ಬೌದ್ಧಿಕ ಆಸ್ತಿಯನ್ನು ನೋಡುವ ಅವಕಾಶ ಹೊಂದಿದ್ದೀರಾ? ಇವೆಲ್ಲವೂ Tenneco ಮಾಲೀಕತ್ವದ ಅಥವಾ ಉದ್ಯಮ ನಡೆಸಲು ಬಳಸುವ ಕಂಪನಿಯ ಆಸ್ತಿಗಳಿಗೆ ಉದಾಹರಣೆಗಳಾಗಿವೆ. ಅವುಗಳ ಕಾಳಜಿವಹಿಸುವ ವೈಯಕ್ತಿಕ ಜವಾಬ್ದಾರಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದೆ.

### ನೈತಿಕ ವರ್ತನೆಗೆ ಮಾದರಿ.

**ಉತ್ತಮ ಕಾಳಜಿವಹಿಸುವುದು.** *ಲ್ಯುಬ್ರಿಕೇಶನ್‌ನ ಕೊರತೆಯಿಂದಾಗಿ ನಿಮ್ಮ ಫೋರ್ಕ್‌ಲಿಫ್ಟ್‌ನ ಚಲಿಸುವ ಭಾಗದಲ್ಲಿ ಸ್ವಲ್ಪ ಘರ್ಷಣೆಗಳಾಗಿರುವುದನ್ನು ನೀವು ಗಮನಿಸಿದ್ದೀರಿ. ನೀವು ತಕ್ಷಣವೇ ಸಾಧನವನ್ನು ಚಲಾಯಿಸುವುದು ನಿಲ್ಲಿಸುತ್ತೀರಿ ಮತ್ತು ನಿರ್ವಹಣೆ ವಿಭಾಗಕ್ಕೆ ಸೂಕ್ತ ಕ್ಷೇತ್ರಕ್ಕೆ ಅಥವಾ ಕಂಪನಿಯ ಕಾರ್ಯಾಚರಣೆಯ ಸಾಮಾನ್ಯ ಅಭ್ಯಾಸದ ಪ್ರಕಾರ ವರದಿ ನೀಡುತ್ತೀರಿ, ಹಾಗೆ ಅವರು ಪ್ರತೀ ಸಾಧನಕ್ಕೆ ಸರಿಯಾದ ಆಯಿಲ್ ಮತ್ತು ಗ್ರೀಸ್ ಹಚ್ಚಲು ಸಾಧ್ಯವಾಗುತ್ತದೆ. ಉತ್ತಮ ನಡೆಯೇ?* ಖಂಡಿತಾ! ನಮ್ಮ ಭೌತಿಕ ಆಸ್ತಿಯ ಸೂಕ್ತ ಕಾಳಜಿವಹಿಸಲಾಗಿದೆ ಎಂದು ಖಚಿತಪಡಿಸುವುದು ನಮ್ಮೆಲ್ಲರ ಕೆಲಸಗಳು. ತಕ್ಷಣವೇ ನಿರ್ವಹಣಾ ವಿಭಾಗವನ್ನು ಸಂಪರ್ಕಿಸುವ ಮೂಲಕ, ನೀವು ನಿಮ್ಮ ಯಂತ್ರದ ಬಗ್ಗೆ –ಮತ್ತು ಅದರ ಬಾಳಿಕೆಯನ್ನು ವಿಸ್ತರಿಸಲು- ಕಾಳಜಿವಹಿಸಿರುತ್ತೀರಿ.

**ಅದು ಕೇವಲ ಹೆಸರಲ್ಲ.** *ನೀವು ನಮ್ಮದೇ ಹೆಸರು ಮತ್ತು ಲೋಗೋ ಬಳಸಿದ ಕಂಪನಿಯನ್ನು ನೋಡುತ್ತೀರಿ. ಅದು ವಸ್ತುಶಃ ಒಂದೇ ರೀತಿಯಲ್ಲಿಲ್ಲದ ಕಾರಣ ಸಹೋದ್ಯೋಗಿಯೊಬ್ಬರು ಚಿಂತೆ ಮಾಡಬೇಡಿ ಎಂದು ಹೇಳಿದ್ದಾರೆ. ಹಾಗಿದ್ದರೂ, ನೀವು ಆ ಬಗ್ಗೆ ಸಂವಹನ ತಂಡಕ್ಕೆ ಮತ್ತು ಕಾನೂನು ವಿಭಾಗಕ್ಕೆ ತಿಳಿಸಲು ನಿರ್ಧರಿಸುತ್ತೀರಿ. ಉತ್ತಮ ಆಯ್ಕೆ?* ಖಂಡಿತಾ. ನಮ್ಮ ಬ್ರಾಂಡ್‌ಗಳು ಮತ್ತು ಅವರ ಸಂಬಂಧಿತ ಟ್ರೇಡ್‌ಮಾರ್ಕ್‌ಗಳು ಮತ್ತು ಲೋಗೋಗಳು ಮೌಲ್ಯಯುತವಾದ ಆಸ್ತಿಯಾಗಿವೆ ಮತ್ತು ಗೊಂದಲವಾಗುವ ಸಮಾನ ಹೆಸರುಗಳು ಮತ್ತು ಲೋಗೋಗಳನ್ನು ಕಂಡರೆ ನಾವು ಯಾವಾಗಲೂ ವರದಿ ಮಾಡಬೇಕು, ಆ ಮೂಲಕ ಕಂಪನಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗಲಿದೆ. "ನಿಮಗೇನಾದರೂ ಕಂಡುಬಂದರೆ, ಅದನ್ನು ಹೇಳಿ"ಎನ್ನುವುದೇ ನಮ್ಮ ಬ್ರಾಂಡ್‌ನ ರಕ್ಷಣೆಯ ವಿಚಾರದಲ್ಲಿ ಸದಾ ಸರಿಯಾದ ನಿರ್ಧಾರವಾಗಿರುತ್ತದೆ. ನಾವು ಒಂದು ತಂಡ.


### ಎಚ್ಚರಿಕೆ.

**ಅದು ಸರಳವಾಗಿರಲಿ ... ಆದರೆ ದೀರ್ಘವಾಗಿರಲಿ.** *ಪಾಸ್‌ವರ್ಡ್ ನೆನಪಿಟ್ಟುಕೊಳ್ಳುವುದು ನಿಮಗೆ ಬಹಳ ಕಷ್ಟವಾಗುತ್ತದೆ, ಹೀಗಾಗಿ ನೀವು ಯಾವತ್ತೂ ಮರೆಯದಿರುವುದನ್ನು ಇಟ್ಟುಕೊಳ್ಳುತ್ತೀರಿ. ಅದು ಸರಿಯೆ?* ಬಹುಶಃ. ಹ್ಯಾಕ್ ಮಾಡಲು ಸರಳವಾಗಿರುವುದನ್ನು ಆರಿಸಿ ಇಡದಂತೆ ಖಚಿತಪಡಿಸಿ. ಪಾಸ್‌ಪ್ರೇಸ್ ಒಂದನ್ನು ಪ್ರಯತ್ನಿಸಿ. ಪಾಸ್‌ಪ್ರೇಸ್‌ಗಳು ಪದಗಳ ಗುಚ್ಛವಾಗಿರದೆ, ಶಬ್ದಗಳ ಗುಚ್ಛಗಳಾಗಿರುತ್ತವೆ. ಅವುಗಳು ಬಹಳ ಉದ್ದವಾಗಿರುತ್ತವೆ (ಹೀಗಾಗಿ ಅವುಗಳನ್ನು ಕಂಡುಹಿಡಿಯುವುದು ಕಷ್ಟ), ಆದರೆ ಸರಳವಾಗಿರುತ್ತವೆ (ಹೀಗಾಗಿ ನೆನಪಿಸಿಕೊಳ್ಳುವುದು ಸುಲಭ).

**ಪ್ಯಾಕ್ ಮಾಡುವುದು.** *ನೀವು ಉದ್ಯೋಗ ಪ್ರವಾಸಕ್ಕಾಗಿ ಬೆಳಿಗ್ಗೆಯೇ ಪ್ಯಾಕ್ ಮಾಡುತ್ತೀರಿ ಮತ್ತು ನಿಮ್ಮ ಲ್ಯಾಪ್ ಟಾಪ್ ಮರೆಯಲು ಬಯಸುವುದಿಲ್ಲ. ಅದನ್ನು ರಾತ್ರಿಯೇ ಕಾರಿನಲ್ಲಿ ಬಿಡಲು ನಿರ್ಧರಿಸುತ್ತೀರಿ, ಆದರೆ ಬದಲಾಗಿ ಹೊರಹೋಗುವ ದಾರಿಯಲ್ಲಿ ಅದನ್ನು ತೆಗೆದುಕೊಂಡು ಹೋಗಲಾಗುವಂತೆ ಅದನ್ನು ಬಾಗಿಲ ಬಳಿ ನಿಮ್ಮ ಬ್ಯಾಕ್ ಪ್ಯಾಕ್‌ನಲ್ಲಿ ಇಡುತ್ತೀರಿ. ಉತ್ತಮ ನಿರ್ಧಾರವೇ?* ಬಹುತೇಕ ಉತ್ತಮ. ಅದನ್ನು ಕಾರಿನಲ್ಲಿ ಇಡದೆ ಇರುವುದು ಉತ್ತಮ ನಿರ್ಧಾರ. ಕೆಟ್ಟ ಉದ್ದೇಶದ ವ್ಯಕ್ತಿಗಳು ಅದನ್ನು ನೋಡಿದಲ್ಲಿ ಕದ್ದುಬಿಡಬಹುದು. ನಿಮ್ಮ ಲ್ಯಾಪ್ ಟಾಪ್‌ನಲ್ಲಿ ಕಂಪನಿಗೆ ಸಂಬಂಧಿಸಿದ ಅಮೂಲ್ಯ ಮಾಹಿತಿ ಇರಬಹುದು, ಹೀಗಾಗಿ ಲ್ಯಾಪ್‌ಟಾಪ್ ಅನ್ನು ಸುರಕ್ಷಿತವಾಗಿ ಬ್ಯಾಗ್‌ನಲ್ಲಿ ಇಟ್ಟು ರಕ್ಷಿಸುವ ಜೊತೆಗೆ, ಪ್ರಮುಖ ಮಾಹಿತಿ ಎನ್‌ಕ್ರಿಪ್ಟ್ ಆಗಿರುವುದನ್ನು ಖಚಿತಪಡಿಸಿ.

## ತಪ್ಪು ಮಾರ್ಗ.

ಕ್ಲಿಕ್ ಮಾಡುವುದು. *ನೀವು ನಿಮ್ಮ ಕಾರ್ಯನಿಮಿತ್ತ ಕಂಪ್ಯೂಟರ್‌ನಲ್ಲಿ ಇದ್ದಾಗ ಗೌಪ್ಯ ಮಾಹಿತಿಯನ್ನು ಅಧಿಕಾರಿಯೊಬ್ಬರಿಗೆ ಕಳುಹಿಸುವಂತೆ ಸೂಚಿಸಿದ ಅಸಹಜ ಇಮೇಲ್ ಬೇಡಿಕೆ ಒಂದನ್ನು ನೋಡುತ್ತೀರಿ. ಅದು ತುರ್ತಾಗಿ ಕಂಡ ಕಾರಣ, ತಕ್ಷಣವೇ ಅದಕ್ಕೆ ಬದ್ಧರಾಗಬೇಕು … ಸರಿಯೆ?* ತಪ್ಪು. ಸೈಬರ್ ದಾಳಿಗಳು ಬಹುತೇಕ ವಿಚಿತ್ರ ಇಮೇಲ್‌ಗಳ ರೂಪದಲ್ಲಿಯೇ ಬರುತ್ತವೆ. ಕಳುಹಿಸಿದ ವ್ಯಕ್ತಿಯ ಗುರುತು ನಿಮಗಿಲ್ಲದೆ ಇದ್ದಲ್ಲಿ, ಅಥವಾ ಅದು ಅನುಮಾನಾಸ್ಪದ ಎಂದು ಕಂಡಲ್ಲಿ, ಇಮೇಲ್ ಮುಚ್ಚಿ ಮತ್ತು ಐಟಿ ವಿಭಾಗವನ್ನು ಸಂಪರ್ಕಿಸಿ.



## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಹೇಗಾದರೂ ನಮ್ಮ "ಆಸ್ತಿ" ಎಂದರೇನು?

ನಾವು ರಕ್ಷಿಸಬೇಕಾದ ಕೆಲವು ವಿಭಿನ್ನ ರೀತಿಯ ಆಸ್ತಿಗಳಿವೆ, ಅವುಗಳೆಂದರೆ:

- ಭೌತಿಕ ಆಸ್ತಿ (ಉತ್ಪನ್ನಗಳು, ಭಾಗಗಳು, ಕಚ್ಚಾ ವಸ್ತುಗಳು, ಉಪಕರಣಗಳು, ಕಂಪ್ಯೂಟರ್‌ಗಳು ಮತ್ತು ಫೋನ್‌ಗಳಂತಹ ಉಪಕರಣಗಳು ಮತ್ತು ದಾಸ್ತಾನುಗಳ ಕುರಿತು ಯೋಚಿಸಿ)
- ತಾಂತ್ರಿಕ ಮೂಲಸೌಕರ್ಯ ಆಸ್ತಿ (ಇಮೇಲ್, ಇಂಟರ್ನೆಟ್ ಪ್ರವೇಶ ಮತ್ತು ಸಾಫ್ಟ್‌ವೇರ್ ಕುರಿತು ಯೋಚಿಸಿ)
- ಹಣಕಾಸು ಆಸ್ತಿ (ನಗದು ಮತ್ತು ಬ್ಯಾಂಕ್ ಖಾತೆಗಳನ್ನು ಯೋಚಿಸಿ)
- ಬೌದ್ಧಿಕ ಆಸ್ತಿ (ಗೌಪ್ಯ ಮಾಹಿತಿ, ಸೃಜನಶೀಲ ವಿಷಯ, ಪೇಟೆಂಟ್, ಟ್ರೇಡ್ ಮಾರ್ಕ್‌ಗಳು ಮತ್ತು ಆವಿಷ್ಕಾರಗಳನ್ನು ಯೋಚಿಸಿ)

## ದಿ ಗ್ಯಾರೇಜ್

# ಗೌಪ್ಯ ಮಾಹಿತಿಯ ರಕ್ಷಣೆ ಮಾಡುವುದು

## ತಲುಪಬೇಕಾದ ಗುರಿ

ರಹಸ್ಯ ಮಾಹಿತಿಯನ್ನು ಸಂಗ್ರಹಿಸಲು, ರಕ್ಷಿಸಲು ಮತ್ತು ಸೂಕ್ತವಾಗಿ ಬಳಸಲು ಅತಿಯಾದ ಶ್ರಮ ಪಡುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ಬಹಳಷ್ಟು ಬಾರಿ ನಮ್ಮ ಬಳಿ ಇರುವ ಮಾಹಿತಿಯ ಬಗ್ಗೆ ಇತರರಿಗೆ ಅರಿವಿಲ್ಲದ ಕಾರಣ, ಅದು ಅಮೂಲ್ಯವಾಗಿರುತ್ತದೆ. ಆದರೆ ಡಿಜಿಟಲ್ ಜಗತ್ತಿನಲ್ಲಿ ಎಲ್ಲವೂ ದತ್ತಾಂಶಗಳಲ್ಲೇ ಚಲಾವಣೆಯಾಗುತ್ತವೆ. ನಾವು ಕಾಳಜಿವಹಿಸಿರುವ ಮಾಹಿತಿಯು ನಮ್ಮ ಗ್ರಾಹಕರಿಗೆ ವೈಯಕ್ತಿಕ ಅನುಭವ ಸೃಷ್ಟಿಸಲು, ಗೌರವಾನ್ವಿತ ಮತ್ತು ಪ್ರತಿಭಾವಂತ ತಂಡದ ಸದಸ್ಯರನ್ನು ನೇಮಿಸಲು, ಮತ್ತು ಮಾರುಕಟ್ಟೆಯಲ್ಲಿ ನಮ್ಮ ಸ್ಪರ್ಧಾತ್ಮಕ ಶಕ್ತಿಯನ್ನು ಉಳಿಸಿಕೊಳ್ಳಲು ನಮಗೆ ಸಾಧ್ಯವಾಗಿಸುತ್ತವೆ. ನಾವು ಅದನ್ನು ರಕ್ಷಿಸದೆ ಇದ್ದಲ್ಲಿ, ತ್ವರಿತವಾಗಿ ಎಲ್ಲವೂ ತಪ್ಪಾಗಿ ಹೋಗಬಹುದು.

ಅದೇ ಕಾರಣದಿಂದ ನಾವು ಗೌಪ್ಯ ಮಾಹಿತಿಯನ್ನು, ಅದು ನಮಗೆ ಸೇರಿದ್ದರೂ, ಅಥವಾ ಗ್ರಾಹಕರ, ಅಥವಾ ವಿತರಿಕನಿಗೇ ಸೇರಿದ್ದರೂ, ಸೂಕ್ತವಾಗಿ ಸಂಗ್ರಹಿಸುತ್ತೇವೆ ಮತ್ತು ಸುರಕ್ಷಿತವಾಗಿ ಕಾಪಿಡುತ್ತೇವೆ.

ನಾವು ಕೆಲವು ಮಾಹಿತಿಯನ್ನು ಸಾರ್ವಜನಿಕವಾಗಿ ಜಾಹೀರಾತು, ಉತ್ಪನ್ನದ ದಾಖಲೀಕರಣ, ಸುದ್ದಿ ಬಿಡುಗಡೆಗಳು, ಮತ್ತು ಸಾರ್ವಜನಿಕ ಹಣಕಾಸು ವರದಿಗಳಲ್ಲಿ ಬಹಿರಂಗವಾಗಿ ಸಂವಹನ ಮಾಡುತ್ತೇವೆಯಾದರೂ, ಉಳಿದ ಎಲ್ಲವನ್ನೂ ನಾವು ಸೂಕ್ತ ಮತ್ತು ಸಕಾರಣ ಸುರಕ್ಷತೆ, ಮತ್ತು ಅನ್ವಯಿಸಿದಲ್ಲಿ, ಕಾನೂನು ಕ್ರಮದ ಒಪ್ಪಂದಗಳ ಮೂಲಕ ರಕ್ಷಿಸುತ್ತೇವೆ. ಸೂಕ್ತ ಅಧಿಕೃತ ಒಪ್ಪಿಗೆ ಇಲ್ಲದೆ ಅಥವಾ ತಮ್ಮ ಉದ್ಯೋಗಕ್ಕೆ ಅದರ ಅಗತ್ಯ ಇಲ್ಲದವರ ಜೊತೆಗೆ ನಾವು ಎಂದಿಗೂ ಗೌಪ್ಯ ಮಾಹಿತಿಯನ್ನು ಹಂಚಿಕೊಳ್ಳುವುದಿಲ್ಲ.

ನಾವು ಯಾವಾಗಲೂ ಗೌಪ್ಯ ಮಾಹಿತಿಯನ್ನು ರಕ್ಷಿಸಲು ಸಮಂಜಸವಾದ ಮತ್ತು ಸೂಕ್ತವಾದ ನಿಯಂತ್ರಣಗಳು ಜಾರಿಯಲ್ಲಿವೆ ಎಂದು ಖಚಿತಪಡಿಸುತ್ತೇವೆ.

## ನೈತಿಕ ವರ್ತನೆಗೆ ಮಾದರಿ.

**ಖಾಸಗಿ ಸಂಭಾಷಣೆ.** *ನಿಮ್ಮ ವ್ಯವಸ್ಥಾಪಕರಿಂದ ಕರೆ ಬಂದಾಗ ನೀವು ಜನಸಂದಣಿಯಿರುವ ಎಲಿವೇಟರ್‌ನಲ್ಲಿದ್ದೀರಿ. ನೀವು ಕಾರ್ಯನಿರ್ವಹಿಸಿದ ಹೊಸ ಮಾರುಕಟ್ಟೆ ಕಾರ್ಯಯೋಜನೆ ಬಗ್ಗೆ ಆಕೆ ತಿಳಿಯಲು ಬಯಸಿದ್ದಾರೆ. ನೀವು ಫೋನ್ ಕರೆಗೆ ಉತ್ತರಿಸುತ್ತೀರಿ, ಆದರೆ ನಿಮ್ಮ ಕಚೇರಿಗೆ ತಲುಪುವವರೆಗೂ ಕಾಯುತ್ತೀರಿ ಮತ್ತು ವಿವರ ಹಂಚಿಕೊಳ್ಳುವ ಮೊದಲು ಬಾಗಿಲನ್ನು ಭದ್ರಪಡಿಸುತ್ತೀರಿ. ಇದು ಚತುರ ನಡೆಯೇ?* ಹೌದು, ತುಂಬಾ. ಗೌಪ್ಯ ಮಾಹಿತಿಗಳು ಎಲಿವೇಟರ್‌ನಂತಹ ಸಾರ್ವಜನಿಕ ಸ್ಥಳಗಳೂ ಸೇರಿದಂತೆ ಹಲವು ರೀತಿಯಲ್ಲಿ ಸೋರಿಕೆಯಾಗುತ್ತವೆ. ನಾವು ಏನು ಹೇಳುತ್ತೇವೆ ಮತ್ತು ಅದನ್ನು ಎಲ್ಲಿ ಹೇಳುತ್ತೇವೆ ಎಂದು ಗಮನಿಸುವುದು ಅತೀ ಮುಖ್ಯ.

**ಮಾಹಿತಿಯ ರಕ್ಷಣೆ.** *ಎಲ್ಲರೂ ಓಡಾಡುವ ಜಾಗದಲ್ಲಿ ಪ್ರಿಂಟರ್‌ನಲ್ಲಿ ಗೌಪ್ಯ ಮಾಹಿತಿ ಬಿಟ್ಟಿರುವುದನ್ನು ನೀವು ಗಮನಿಸುತ್ತೀರಿ. ಅದನ್ನು ಬಿಟ್ಟಿರುವ ವ್ಯಕ್ತಿಗೆ, ಆತನ ವ್ಯವಸ್ಥಾಪಕನಿಗೆ, ಅದನ್ನು ರಕ್ಷಿಸುವ ಪ್ರಾಮುಖ್ಯತೆಯ ಬಗ್ಗೆ ಸಲಹೆ ನೀಡುವ ಮೊದಲು ಮಾಹಿತಿಯನ್ನು ಭದ್ರಪಡಿಸುತ್ತೀರಿ. ಸರಿಯಾದ ನಡೆಯೇ?* ಅತ್ಯುತ್ತಮ! ಗೌಪ್ಯ ಮಾಹಿತಿಯನ್ನು ಸ್ವೀಕರಿಸುವ ಅಧಿಕಾರವಿಲ್ಲದ ಯಾರೊಂದಿಗೂ ಅದನ್ನು ಹಂಚಿಕೊಳ್ಳುವಂತಿಲ್ಲ (ಅಜಾಗರೂಕತೆ ಅಥವಾ ಇನ್ನಾವುದೇ ರೀತಿ).

## ಎಚ್ಚರಿಕೆ.

**ಗೌಪ್ಯ ಇಮೇಲ್‌ಗಳನ್ನು ಕಳುಹಿಸುವುದು.** *ಬಿಗಿಯಾದ ಅಂತಿಮ ಗಡುವು ತಲುಪಲು ಇಮೇಲ್ ಮೂಲಕ ಕೆಲವು ಗೌಪ್ಯ ಮಾಹಿತಿಯನ್ನು ಕಳುಹಿಸಬೇಕಾಗುತ್ತದೆ. ಹೀಗಾಗಿ ಅದನ್ನು ನೀವು ವರ್ಡ್ ಡಾಕ್ಯುಮೆಂಟ್ ಆಗಿ ಅಟ್ಯಾಚ್ ಮಾಡುತ್ತೀರಿ ಮತ್ತು ಸಮಯವನ್ನು ಉಳಿಸುವುದಕ್ಕಾಗಿ ಎನ್‌ಕ್ರಿಪ್ಟ್ ಮಾಡಲಾದ ಫೈಲ್ ಅನ್ನು ಪಾಸ್‌ವರ್ಡ್ ಜೊತೆಗೆ ಕಳುಹಿಸುತ್ತೀರಿ. ಇದು ಎಲ್ಲವನ್ನೂ ಭದ್ರವಾಗಿಡುತ್ತದೆ, ಅಲ್ಲವೆ?* ಬಹುಶಃ ಇರಬಹುದು. ಎನ್‌ಕ್ರಿಪ್ಟ್ ಮಾಡಿರುವ ಪಾಸ್‌ವರ್ಡ್ ಅನ್ನು ಪ್ರತ್ಯೇಕವಾಗಿ ಕಳುಹಿಸಿರುವುದನ್ನು ಖಚಿತಪಡಿಸಿ.

**ಯಾರಿಗೆ ತಿಳಿಯಬೇಕು ಎಂದು ತಿಳಿದಿರುವುದು.** *ನೀವು ಮತ್ತು ನಿಮ್ಮ ತಂಡ ಉತ್ಪಾದನಾ ಪ್ರಕ್ರಿಯೆ ಸುಧಾರಿಸುವ ಬಗ್ಗೆ ಚರ್ಚಿಸುತ್ತಿರುವಾಗ ವಿತರಕರೊಬ್ಬರು ಹಾದು ಹೋಗುತ್ತಾರೆ. ವಿತರಕರು ಮಾತನ್ನು ಆಲಿಸಲು ನಿಂತರೂ ವ್ಯವಸ್ಥಾಪಕರು ಸಭೆ ಮುಂದುವರಿಸುತ್ತಾರೆ. ವಿತರಕರು ಗೌಪ್ಯತೆ ಕಾಪಾಡುವ ಒಪ್ಪಂದಕ್ಕೆ ಸಹಿ ಹಾಕಿರುವ ಕಾರಣ ಹಾಗೆ ಮಾಡುವುದು ಸರಿ ಎಂದು ವ್ಯವಸ್ಥಾಪಕರು ಹೇಳುತ್ತಾರೆ. ಅದು ಸರಿಯೆ?* ನಮ್ಮ ಗೌಪ್ಯ ಮಾಹಿತಿಯನ್ನು ತಿಳಿದುಕೊಳ್ಳುವ ಅಗತ್ಯವಿಲ್ಲದವರ ಜೊತೆಗೆ ಹಂಚಿಕೊಳ್ಳದೆ ಇರುವುದು ಅದನ್ನು ರಕ್ಷಿಸುವ ಅತ್ಯುತ್ತಮ ವಿಧಾನವಾಗಿದೆ. ನಿಮ್ಮ ಬಾಸ್ ಚರ್ಚೆ ಮುಗಿಸಲು ಸಾಧ್ಯವಾಗುವಂತೆ ವಿನಯದಿಂದ ವಿತರಕರನ್ನು ಸಭೆಯಿಂದ ದೂರ ಹೋಗುವಂತೆ ನಿರ್ದೇಶಿಸಿ.

## ತಪ್ಪು ಮಾರ್ಗ.

*ಗೌಪ್ಯ ಮಾಹಿತಿ ಹಂಚಿಕೆ. ಕಾರ್ಯಸ್ಥಳದ ವಿವರಗಳು ಇರುವ ವೈಯಕ್ತಿಕ ಬ್ಲಾಗ್ ಆರಂಭಿಸುತ್ತೀರಿ. ಮಾರಾಟ ಗುರಿಗಳನ್ನು ತಲುಪಲು ಅದರಿಂದ ನೆರವಾಗಲಿದೆ ಎಂದು ನೀವು ಭಾವಿಸುತ್ತೀರಿ, ಹೀಗಾಗಿ ಆಸಕ್ತಿ ಸೃಷ್ಟಿಸಲು ಕೆಲವು ಬಿಡುಗಡೆ ಮಾಡದ ಉತ್ಪನ್ನದ ವಿನ್ಯಾಸಗಳನ್ನು ನೀವು ಉಲ್ಲೇಖಿಸುತ್ತೀರಿ. ಮಾರುಕಟ್ಟೆ ಚಾತುರ್ಯ?* ಖಂಡಿತಾ ಅಲ್ಲ. ಪ್ರತಿಸ್ಪರ್ಧಿಗಳು ನಮ್ಮ ವಿನ್ಯಾಸಗಳ ನಕಲಿ ಮಾಡಬಹುದು ಮತ್ತು ಉತ್ಪನ್ನದ ವಿನ್ಯಾಸಗಳಿಗೆ ಹಕ್ಕುಸ್ವಾಮ್ಯ ಪಡೆಯುವ ನಿಮ್ಮ ಪ್ರಯತ್ನಗಳಿಗೆ ಧಕ್ಕೆಯಾಗಬಹುದು. ನಮ್ಮ ಸೃಷ್ಟಿಯನ್ನು ರಕ್ಷಿಸಲು ನೆರವಾಗುವ ಮೂಲಕ ನಿಮ್ಮ ಪಾಲಿನ ಕರ್ತವ್ಯ ನಿರ್ವಹಿಸಿ.



## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಗೌಪ್ಯ ಮಾಹಿತಿಯನ್ನು ಹೇಗೆ ರಕ್ಷಿಸುವುದು ಎಂದು ತಿಳಿದಿದೆಯೇ?

ಗೌಪ್ಯವಲ್ಲವೆಂದು ಖಚಿತವಾಗಿ ತಿಳಿಯುವವರೆಗೂ ,ಕಂಪನಿಯ ಎಲ್ಲಾ ಮಾಹಿತಿಯೂ ಗೌಪ್ಯವಾಗಿರುತ್ತದೆ ಎಂದು ತಿಳಿಯಿರಿ ಮತ್ತು ಖಚಿತವಾಗಿರಿ:

- ಲ್ಯಾಪ್‌ಟಾಪ್‌ಗಳು ಮತ್ತು ಮೊಬೈಲ್ ಸಾಧನಗಳನ್ನು ದೈಹಿಕವಾಗಿ ಮತ್ತು ವಿದ್ಯುನ್ಮಾನವಾಗಿ ಸುರಕ್ಷಿತವಾಗಿರಿಸಿಕೊಳ್ಳಿ.
- ದೂರ ಹೋಗುವಾಗ ನಿಮ್ಮ ಕಾರ್ಯಕ್ಷೇತ್ರವನ್ನು ಲಾಕ್ ಮಾಡಿ.
- ಬಲವಾದ ಪಾಸ್‌ವರ್ಡ್‌ಗಳನ್ನು ಬಳಸಿ ಮತ್ತು ಪಾಸ್‌ವರ್ಡ್‌ಗಳನ್ನು ಸುರಕ್ಷಿತವಾಗಿರಿಸಿ.
- ನಿರ್ದೇಶಿಸಿದಂತೆ ಭದ್ರತಾ ಸಾಫ್ಟ್‌ವೇರ್ ಮತ್ತು ನವೀಕರಣಗಳನ್ನು ಸ್ಥಾಪಿಸಿ.
- ನೀವು ಅಧಿಕೃತ ಜನರು ಮತ್ತು ತಿಳಿದುಕೊಳ್ಳಬೇಕಾದ ಸರಿಯಾದ ಜನರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುತ್ತಿರುವಿರಾ ಎಂದು ಖಚಿತಪಡಿಸಿಕೊಳ್ಳಿ.

## ದಿ ಗ್ಯಾರೇಜ್

# ಖಾಸಗೀತನವನ್ನು ರಕ್ಷಿಸಿಕೊಳ್ಳುವುದು

## ತಲುಪಬೇಕಾದ ಗುರಿ

ಖಾಸಗೀತನ ವನ್ನು ರಕ್ಷಿಸಿಕೊಳ್ಳುವುದುಮತ್ತು ವೈಯಕ್ತಿಕ ಮಾಹಿತಿಯನ್ನು ಪಾರದರ್ಶಕವಾಗಿ ಮತ್ತು ನ್ಯಾಯೋಚಿತವಾಗಿ ಸಂಗ್ರಹಿಸುವುದು, ಬಳಸುವುದು, ಹಂಚುವುದು ಮತ್ತು ಉಳಿಸಿಕೊಳ್ಳಲಾಗುತ್ತದೆ ಎಂದು ಖಚಿತಪಡಿಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ತಮ್ಮ ವೈಯಕ್ತಿಕ ಮಾಹಿತಿಯನ್ನು ನಮಗೆ ಒದಗಿಸುವ ತಂಡದ ಸದಸ್ಯರು, ಷೇರುದಾರರು, ಗ್ರಾಹಕರು, ವ್ಯಾಪಾರಿಗಳು ಮತ್ತು ಇತರರು ನಾವು ಕಾಳಜಿವಹಿಸಿ ನಿಭಾಯಿಸುತ್ತೇವೆ ಎನ್ನುವ ವಿಶ್ವಾಸ ಹೊಂದಿರುತ್ತಾರೆ. ನಾವು ವೈಯಕ್ತಿಕ ಮಾಹಿತಿಯನ್ನು ಕಾನೂನಾತ್ಮಕವಾಗಿ, ಸೂಕ್ತವಾಗಿ ಮತ್ತು ಒದಗಿಸಿರುವ ಉದ್ದೇಶಕ್ಕಾಗಿ ಮಾತ್ರವೇ ಬಳಸುತ್ತೇವೆ.

ನಮ್ಮ ಮೇಲೆ ಇಡಲಾಗಿರುವ ವಿಶ್ವಾಸದ ಕಾರಣದಿಂದ, ನಾವು ಖಾಸಗಿತನವನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ ಮತ್ತು ನಮ್ಮ ಜೊತೆಗೆ, ನಮಗಾಗಿ ಅಥವಾ ನಮ್ಮ ಪರವಾಗಿ ಕೆಲಸ ಮಾಡುವ ಎಲ್ಲರೂ ನಮ್ಮ ಖಾಸಗಿತನದ ಅಭ್ಯಾಸಗಳು ಮತ್ತು ಅನ್ವಯಿಸುವ ನಿಯಮಗಳ ಬಗ್ಗೆ ತಿಳಿದುಕೊಂಡಿದ್ದಾರೆ ಎಂಬುದನ್ನು ಖಾತ್ರಿಪಡಿಸುತ್ತೇವೆ. ಅವುಗಳಲ್ಲಿ ನಾವು ಸಂಗ್ರಹಿಸುವ ಹಲವು ವಿಧಗಳ ಖಾಸಗಿ ಮಾಹಿತಿಯೂ ಸೇರಿದೆ, ನಾವು ಅದನ್ನು ಹೇಗೆ ಬಳಸುತ್ತೇವೆ ಮತ್ತು ಜನರಿಗೆ ತಮ್ಮ ಖಾಸಗಿ ಮಾಹಿತಿಯ ಬಗ್ಗೆ ಇರುವ ಹಕ್ಕುಗಳೂ ಸೇರಿವೆ.

### ನೈತಿಕ ವರ್ತನೆಗೆ ಮಾದರಿ.

ಖಾಸಗಿ ಹಕ್ಕುಗಳನ್ನು ಗೌರವಿಸುವುದು. *ತಂಡದ ಸದಸ್ಯರೊಬ್ಬರು ಹೆರಿಗೆ ರಜಾದಲ್ಲಿದ್ದಾರೆ ಮತ್ತು ವಿತರಕರೊಬ್ಬರು ಕಾರ್ಡ್ ಕಳುಹಿಸಲು ಆಕೆಯ ಮನೆಯ ವಿಳಾಸವನ್ನು ಕೇಳುತ್ತಾರೆ. ಅದಕ್ಕೆ ಬದಲಾಗಿ ಕಾರ್ಡ್ ಅನ್ನು ಕಾರ್ಖಾನೆಯ ವಿಳಾಸಕ್ಕೆ ಕಳುಹಿಸುವಂತೆ ನೀವು ಸಲಹೆ ನೀಡುವಿರಿ. ಸರಿಯಾದ ನಡೆಯೇ?* ಹೌದು. ನಿಮ್ಮ ತಂಡದ ಸದಸ್ಯರ ಒಪ್ಪಿಗೆ ಇಲ್ಲದೆ ಮನೆಯ ವಿಳಾಸ ಅಥವಾ ವೈಯಕ್ತಿಕ ವಿವರವನ್ನು ವಿತರಕರೊಬ್ಬರ ಅಥವಾ ಇತರ ವ್ಯಕ್ತಿಗಳ ಜೊತೆಗೆ ನೀವು ಹಂಚಿಕೊಳ್ಳಬಾರದು ಅಥವಾ ನಮ್ಮ ಸಿಸ್ಟಂಗಳು ಮತ್ತು ವೈಯಕ್ತಿಕ ಮಾಹಿತಿಯನ್ನು ನೀವು ನೋಡುತ್ತಿದ್ದರೆ ಗೌಪ್ಯತೆ ಕಚೇರಿ ಒಪ್ಪಿಗೆಯ ಹೊರತಾಗಿ ಅದನ್ನು ಮಾಡಬಾರದು.

### ಎಚ್ಚರಿಕೆ.

ಸೈಬರ್ ಭದ್ರತೆ ಅಭ್ಯಾಸ. *ನೀವು ಸ್ಪರ್ಧೆಯೊಂದನ್ನು ಗೆದ್ದಿರುವುದಾಗಿ ಇಮೇಲ್ ಪಡೆಯುತ್ತೀರಿ ಮತ್ತು ನಿಮ್ಮ ಸಂಪೂರ್ಣ ತಂಡವನ್ನು ಉಚಿತವಾದ, ಪ್ರತ್ಯೇಕ ಕಾರ್ಯಾಗಾರಕ್ಕಾಗಿ ನೋಂದಣಿ ಮಾಡಬೇಕಾಗುತ್ತದೆ. ಈ ಇಮೇಲ್‌ನಲ್ಲಿ ವೈರಸ್ ಇದೆ ಎಂದು ನಿಮಗೆ ಅನಿಸುತ್ತದೆ ಅಥವಾ ನಮ್ಮ ಸಿಸ್ಟಮ್ ಹ್ಯಾಕ್ ಮಾಡಲು ಪ್ರಯತ್ನಿಸಲಾಗಿದೆ ಎಂದು ಕೊಂಡಿದ್ದೀರಿ, ಹೀಗಾಗಿ ನೀವು ಯಾವುದೇ ಅಟ್ಯಾಚ್‌ಮೆಂಟ್‌ಗಳು ಅಥವಾ ಲಿಂಕ್‌ಗಳನ್ನು ತೆರೆಯದೆಯೇ ಇಮೇಲ್ ಅಳಿಸುತ್ತೀರಿ. ನೀವು ಒಂದು ಹಂತವನ್ನು ಬಿಟ್ಟಿದ್ದೀರಾ?* ಇರಬಹುದು. ನಮ್ಮ ರಕ್ಷಣಾ ವ್ಯವಸ್ಥೆಯು ಎಷ್ಟೇ ಸುರಕ್ಷಿತವಾಗಿದ್ದರೂ ಕೂಡ, ಈ ಇ-ಮೇಲ್ ಮೇಲೆ ಕ್ಲಿಕ್ ಮಾಡುವುದರಿಂದ ಯಾವುದಾದರೂ ವೈರಸ್ ನಿಮ್ಮ ಪಾಸ್ ವರ್ಡ್, ಸ್ವಂತ ದತ್ತಾಂಶ ಅಥವಾ ಕಂಪನಿಯ ಮಾಹಿತಿಯನ್ನು ಕದಿಯಬಹುದು ಎಂದು ನಿಮಗೆ ಚೆನ್ನಾಗಿ ತಿಳಿದಿದೆ. ಈ ಇ-ಮೇಲ್ ತಕ್ಷಣ ಡಿಲೀಟ್ ಮಾಡುವುದರ ಬದಲಾಗಿ, ಇದನ್ನು ಮಾಹಿತಿ ರಕ್ಷಣಾ ವಿಭಾಗಕ್ಕೆ ಕಳುಹಿಸಿ ಮತ್ತು ನೀವು ಏನನ್ನು ಗಮನಿಸಿದ್ದೀರಿ ಎಂದು ತಿಳಿಸಿ. ಇದರಿಂದ ಅವರು ಬೇರೆ ಯಾರೂ ತಪ್ಪು ಮಾಡುವುದಿಲ್ಲ ಎಂದು ಖಚಿತ ಪಡಿಸುತ್ತಾರೆ.

### ತಪ್ಪು ಮಾರ್ಗ.

ನಿಯಮಾವಳಿಯನ್ನು ಕಡೆಗಣಿಸುವುದು. *ನೀವು ಸಂಗ್ರಹಣಾ ವಿಭಾಗದಲ್ಲಿ ಕೆಲಸ ಮಾಡುತ್ತಿರುವಾಗ ಒಂದು ಪ್ರಾಜೆಕ್ಟ್‌ಗೆ ಯಾವುದೋ ಮಾರಾಟಗಾರನ್ನು ಸಂಪರ್ಕಿಸಿ ನಮ್ಮ ವ್ಯವಸ್ಥೆಯೊಳಗೆ ಪ್ರವೇಶಕ್ಕೆ ಅನುಮತಿ ಕೊಡುವಂತೆ ಮನವಿಯೊಂದನ್ನು ಸ್ವೀಕರಿಸುತ್ತೀರಿ. ಇದು ನಿಯಮಾವಳಿಯಲ್ಲ, ಆದರೆ ಮನವಿಯು ತ್ವರಿತ ಗತಿಯದಾಗಿರುತ್ತದೆ ಮತ್ತು ಉನ್ನತ ಅಧಿಕಾರಿಯಿಂದ ಬಂದಿರುತ್ತದೆ. ಕೊಡಬಹುದೇ?* ಇಲ್ಲ. ಗೌಪ್ಯ ಮಾಹಿತಿಗಳಿಗೆ ಅನುಮತಿ ಕೊಡುವ ಮೊದಲು ಮಾರಾಟಗಾರರು ಮಾಹಿತಿ ತಂತ್ರಜ್ಞಾನ ವಿಭಾಗದಿಂದ ಅನುಮತಿ ಪಡೆದುಕೊಂಡಿದ್ದಾರೆಯೇ ಎಂದು ಖಚಿತ ಪಡಿಸಿಕೊಳ್ಳಿ. ನೀವು ನಿಯಮಾವಳಿಯನ್ನು ಪ್ರಾಮಾಣಿಕತೆಯಿಂದ ಪಾಲಿಸುತ್ತೀರಿ ಎಂದು ಎಕ್ಸಿಕ್ಯೂಟಿವ್‌ಗೆ ತಿಳಿಯಲಿ. ನಿಮ್ಮನ್ನು ಬೇರೆ ರೀತಿಯಲ್ಲಿ ಮಾಡುವಂತೆ ಒತ್ತಾಯ ಮಾಡಿದಲ್ಲಿ ನಿಮ್ಮ ಮ್ಯಾನೇಜರ್ ಸಹಾಯ ಕೇಳಿ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಕೆಲವು ಉದಾಹರಣೆಗಳು ಬೇಕೇ?

ವೈಯಕ್ತಿಕ ಮಾಹಿತಿಯು ಯಾರನ್ನಾದರೂ ನೇರವಾಗಿ ಅಥವಾ ಪರೋಕ್ಷವಾಗಿ ಗುರುತಿಸಬಹುದಾದ ಯಾವುದನ್ನೂ ಒಳಗೊಂಡಿರುತ್ತದೆ, ಅವುಗಳೆಂದರೆ:


- ಹೆಸರು
- ವಿಳಾಸ
- ಇಮೇಲ್
- IP ವಿಳಾಸ
- ದೂರವಾಣಿ ಸಂಖ್ಯೆ
- ಬ್ಯಾಂಕ್ ಅಥವಾ ಕ್ರೆಡಿಟ್ ಕಾರ್ಡ್ ಮಾಹಿತಿ
- ಆರೋಗ್ಯ ಮಾಹಿತಿ
- ತಂಡದ ಸದಸ್ಯ ಐಡಿ

ಅದು "ವೈಯಕ್ತಿಕ ಮಾಹಿತಿ" ಎಂದು ಖಚಿತವಾಗಿಲ್ಲವೇ? ನಿಮಗೆ ಖಚಿತವಾಗಿ ತಿಳಿಯುವವರೆಗೂ, ಅದನ್ನು ಹಾಗೆಯೇ ನೋಡಿಕೊಳ್ಳಿ.

ಡೇಟಾ ಗೌಪ್ಯತೆ ಬಗ್ಗೆ ಯಾವುದೇ ಪ್ರಶ್ನೆಗಳಿವೆಯೇ? ದಯವಿಟ್ಟು, ನಮ್ಮ ಗೌಪ್ಯತೆ ಕಚೇರಿ ಯನ್ನು ಸಂಪರ್ಕಿಸಿ.

ಫಿಶಿಂಗ್ ಮತ್ತು ಸ್ಪ್ಯಾಮ್ ಸೇರಿದಂತೆ ಸೈಬರ್ ಸುರಕ್ಷತೆಯ ಬಗ್ಗೆ ನೀವು ಯಾವುದೇ ಪ್ರಶ್ನೆಗಳನ್ನು ಹೊಂದಿದ್ದರೆ, ದಯವಿಟ್ಟು ಮಾಹಿತಿ ಭದ್ರತೆ ವಿಭಾಗ ಸಂಪರ್ಕಿಸಿ.

## ದಿ ಗ್ಯಾರೇಜ್



# ಸರ್ಕಾರದ ಜೊತೆಗೆ ವ್ಯವಹರಿಸುವುದು

## ತಲುಪಬೇಕಾದ ಗುರಿ

ನಾವು ಕೆಲಸ ಮಾಡುವ ಎಲ್ಲಾ ಸ್ಥಳಗಳಲ್ಲಿ ಸರ್ಕಾರದ ಜೊತೆ ಪ್ರಾಮಾಣಿಕ ಮತ್ತು ಪಾರದರ್ಶಕ ಸಂಬಂಧ ಬೆಳೆಸಬೇಕು.

## ನಾವು ಅದನ್ನು ಹೇಗೆ ಸಾಧಿಸುವುದು

ಪ್ರಪಂಚದಾದ್ಯಂತ ವಿವಿಧ ಸರ್ಕಾರಿ ಸಂಸ್ಥೆಗಳು ಮತ್ತು ಪ್ರತಿನಿಧಿಗಳ ಜೊತೆ ಕೆಲಸ ಮಾಡುತ್ತಿರುವುದು ನಮಗೆ ಸಂತೋಷಕರ ವಿಷಯ. ಸರ್ಕಾರವು ಈ ಎಲ್ಲಾ ಸಂಬಂಧಗಳನ್ನು ಅತ್ಯಂತ ಕೂಲಂಕುಶವಾಗಿ ಗಮನಿಸುತ್ತದೆ ಮತ್ತು ಇಲ್ಲಿ ಅವರ ಮೇಲಿನ ನಂಬಿಕೆ, ಹೊಣೆಗಾರಿಕೆ, ಪಾರದರ್ಶಕತೆಗಳು ಅತ್ಯಂತ ಅವಶ್ಯವಾಗಿ ಇರಬೇಕೆಂದು ಬಯಸುತ್ತದೆ.

ನಮ್ಮ ಎಲ್ಲಾ ವ್ಯವಹಾರದಲ್ಲಿನ ಸಂಬಂಧಗಳಂತೆ, ಸರ್ಕಾರಿ ಅಧಿಕಾರಿಗಳೊಂದಿಗೆ ಕೆಲಸ ಮಾಡುವಾಗಲೂ, ನಾವು ಎಲ್ಲಾ ನಿಯಮಗಳನ್ನು ಪಾಲಿಸುತ್ತೇವೆ ಮತ್ತು ನೈತಿಕ ಹೊಣೆಗಾರಿಕೆಯನ್ನು ಮೀರುವುದಿಲ್ಲ. ಸರ್ಕಾರದೊಂದಿಗೆ ಪರವಾನಗಿಗಳು, ಕಸ್ಟಮ್ಸ್ ನಿರ್ಮಾಣ ಅಥವಾ ಇತರ ರೀತಿಯ ಕೆಲಸಗಳನ್ನು ಒಳಗೊಂಡಿರುವ ಕೆಲಸಗಳಲ್ಲಿ ನೀವು ಎಂದಾದರೂ ತೊಡಗಿಸಿಕೊಂಡಿದ್ದರೆ, ನಿಮ್ಮನ್ನು ಮತ್ತು ಕಂಪನಿಯನ್ನು ರಕ್ಷಿಸಿಕೊಳ್ಳಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಿ. ಇದರಿಂದಾಗಿ, ನೀವು ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದೀರಿ ಎಂದು ಸಾಬೀತುಪಡಿಸಲು ಸಾಧ್ಯವಾಗುತ್ತದೆ.

### ನೈತಿಕ ವರ್ತನೆಗೆ ಮಾದರಿ.

**ಸಹಕಾರದ ಮೂಲಕ ಅನುಸರಣೆ.** *ಸರ್ಕಾರಿ ಅಧಿಕಾರಿಯೊಬ್ಬರು ನಿಮ್ಮ ಕಾರ್ಖಾನೆಯ ಸ್ಥಳಕ್ಕೆ ಲೆಕ್ಕ ಪರಿಶೋಧನೆಗೆ ಅನಿರೀಕ್ಷಿತವಾಗಿ ಆಗಮಿಸುತ್ತಾರೆ. ನೀವು ಅವರನ್ನು ಆದರದಿಂದ ಮತ್ತು ವೃತ್ತಿಪರವಾಗಿ ಸ್ವಾಗತಿಸಿ ನಂತರ, ಕಾನೂನು ಇಲಾಖೆಯನ್ನು ಸಂಪರ್ಕಿಸಿ. ಇದರಿಂದ ಅವರು ನಿಮಗೆ ಸಹಾಯ ಮಾಡಬಹುದು. ಸರಿಯಾದ ಪ್ರತಿಕ್ರಿಯೆಯೇ?* ಹೌದು. ಸರ್ಕಾರದ ತಪಾಸಣೆ, ತನಿಖೆ ಮತ್ತು ಮಾಹಿತಿಗಳಿಗೆ ನಾವು ಯಾವಾಗಲೂ ಸಹಕರಿಸುತ್ತೇವೆ. ಸರ್ಕಾರಿ ಅಧಿಕಾರಿಗಳ ಅಗತ್ಯತೆಗಳಿಗೆ ಸ್ಪಂದಿಸಲು ಕಾನೂನು ಇಲಾಖೆ ಸುಸಜ್ಜಿತವಾಗಿದೆ. ಆದ್ದರಿಂದ ನೀವು ಸರಿಯಾದ ಕೆಲಸವನ್ನೇ ಮಾಡಿದ್ದೀರಿ. ಹಾಗೆಯೇ, ಸರ್ಕಾರಿ ಇಲಾಖೆಗೆ ನೇರವಾಗಿ ಪ್ರತಿಕ್ರಿಯೆ ನೀಡುವಂತೆ ಎಂದಾದರೂ ಕಾನೂನು ವಿಭಾಗವು ನಿಮಗೆ ತಿಳಿಸಿದರೆ, ಸತ್ಯವನ್ನೇ ಹೇಳಿ. ಎಂದಿಗೂ ಯಾರನ್ನೂ ದಾರಿ ತಪ್ಪಿಸಬೇಡಿ ಅಥವಾ ದಾಖಲೆಗಳನ್ನು ಮರೆಮಾಚಬೇಡಿ, ನಾಶಪಡಿಸಬೇಡಿ ಅಥವಾ ಬದಲಾಯಿಸಬೇಡಿ.

### ಎಚ್ಚರಿಕೆ.

**ಮಾರ್ಗದರ್ಶನ ಪಡೆಯುವುದು.** *ನೀವು, ಸರ್ಕಾರಿ ಅಧಿಕಾರಿಗಳು ಭಾಗವಹಿಸುವ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದೀರಿ ಮತ್ತು Tenneco ದ ಪ್ರಚಾರಕ್ಕಾಗಿ ಕೆಲವು ವಸ್ತುಗಳನ್ನು ಅವರಿಗೆ ಕೊಡಲು ಬಯಸುತ್ತೀರಿ. ಅದೇನು ದೊಡ್ಡ ವಿಷಯವಲ್ಲ, ಅಲ್ಲವೇ?* ಇರಬಹುದು. ಸರ್ಕಾರಿ ಅಧಿಕಾರಿಗಳಿಗೆ ಕೊಡುವ ಉಡುಗೊರೆಯ ಬಗ್ಗೆ ಕಠಿಣ ನಿಯಮಗಳಿವೆ. ನಿಮ್ಮ ಈ ಕಾರ್ಯಕ್ರಮವನ್ನು ಆಯೋಜಿಸುವ ಮೊದಲು ನಮ್ಮ ಹಾಟ್‌ಲೈನ್ ಮೂಲಕ ಮಾರ್ಗದರ್ಶನ ಕೋರಿ ಅನುಮೋದನೆಯನ್ನು ಪಡೆಯಿರಿ. ನಿಮ್ಮ ಈ ಔದಾರ್ಯವನ್ನು ಯಾರಾದರೂ ಲಂಚವೆಂದು ತಪ್ಪಾಗಿ ಅರ್ಥೈಸಲು ನೀವು ಬಯಸುವುದಿಲ್ಲ.



## ತಪ್ಪು ಮಾರ್ಗ.

**ಅನೈತಿಕವಾಗಿ ಒಪ್ಪಂದ ಮಾಡಿಕೊಳ್ಳುವುದು.** *ಸರ್ಕಾರಿ ಸ್ವಾಮ್ಯದ ಕಂಪನಿಯೊಂದು ಒಂದು ಯೋಜನೆಯ ಮೇಲೆ ಬಿಡ್ ಮಾಡಲು ನಿಮ್ಮನ್ನು ಕೇಳುತ್ತದೆ. ನೀವು ಕಡಿಮೆ ಬಿಡ್ ಮಾಡುತ್ತೀರಿ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ನಿಮ್ಮ ಪ್ರತಿಸ್ಪರ್ಧಿಯೊಂದಿಗೆ ಸಹಯೋಗ ಮಾಡುತ್ತೀರಿ. ವ್ಯವಹಾರದ ವಿರುದ್ಧ ಹೋರಾಡುವ ಅಗತ್ಯವಿಲ್ಲ. ಈ ರೀತಿಯಾಗಿ ಒಟ್ಟಾಗಿ ಕೆಲಸ ಮಾಡುವುದರಿಂದ ಬೆಲೆಗಳು ಹೆಚ್ಚಾಗಿರುತ್ತವೆ. ಆದ್ದರಿಂದ, ಎರಡೂ ಕಂಪನಿಗಳು ತಮ್ಮ ಗುರಿಯನ್ನು ತಲುಪಬಹುದು. ವ್ಯವಹಾರವನ್ನು ರಕ್ಷಿಸಿಕೊಳ್ಳಲು ಅತ್ಯಂತ ಒಳ್ಳೆಯ ದಾರಿಯೆ?* ಇಲ್ಲ. ನಾವು ಸರಿಯಾದ ರೀತಿಯಲ್ಲಿ ಅಂದರೆ ಪ್ರಾಮಾಣಿಕತೆ, ನೈತಿಕತೆ ಮತ್ತು ಯಾವಾಗಲೂ ಪ್ರಾಮಾಣಿಕತೆಯೊಂದಿಗೆ ಗೆಲುತ್ತೇವೆ. ಇದು ಬಿಡ್ಡಿಂಗ್ ಪ್ರಕ್ರಿಯೆಯನ್ನು ದುರ್ಬಲಗೊಳಿಸುತ್ತದೆ ಮತ್ತು ಕಾನೂನುಬಾಹಿರವಾಗಿದೆ. ನಿಮ್ಮ ವ್ಯವಸ್ಥಾಪಕರನ್ನು ಮತ್ತು ಕಾನೂನು ಇಲಾಖೆಯನ್ನು ಈಗಲೇ ಸಂಪರ್ಕಿಸಿ.



## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಯಾರನ್ನು ಸರ್ಕಾರಿ ಅಧಿಕಾರಿ ಎಂದು ಪರಿಗಣಿಸಲಾಗುತ್ತದೆ?

"ಸರ್ಕಾರಿ ಅಧಿಕಾರಿ" ಎಂಬ ಪದವು ವಿಶಾಲವಾಗಿದೆ ಮತ್ತು ಕೇವಲ ಚುನಾಯಿತ ಅಧಿಕಾರಿಗಳಿಗಿಂತ ಹೆಚ್ಚು ಅನ್ವಯಿಸುತ್ತದೆ. ಇದು ಈ ಕೆಳಗಿನವುಗಳನ್ನು ಒಳಗೊಂಡಿರಬಹುದು:

- ಸರ್ಕಾರಿ ಸಂಸ್ಥೆಗಳ ಉದ್ಯೋಗಿಗಳು
- ಸರ್ಕಾರಿ ನಿಯಂತ್ರಿತ ಕಂಪನಿಗಳು ಅಥವಾ ಘಟಕಗಳ ಉದ್ಯೋಗಿಗಳು (ಉದಾಹರಣೆಗೆ, ಸಾರ್ವಜನಿಕ ಶಾಲೆಗಳು, ವಿಶ್ವವಿದ್ಯಾಲಯಗಳು, ಇತ್ಯಾದಿ)
- ರಾಜಕೀಯ ಪಕ್ಷಗಳಲ್ಲಿನ ಅಧಿಕಾರಿಗಳು ಅಥವಾ ಅಭ್ಯರ್ಥಿಗಳು

## ದಿ ಗ್ಯಾರೇಜ್

# ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು

### ತಲುಪಬೇಕಾದ ಗುರಿ

ನಮ್ಮ ಸಮುದಾಯಗಳನ್ನು ಉತ್ತಮಪಡಿಸುವುದು.

### ನಾವು ಅದನ್ನು ಹೇಗೆ ಸಾಧಿಸುವುದು

ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು, ಉತ್ತಮ ಪ್ರಜೆಯಾಗಿ ಮತ್ತು ಸಮಾಜದ ಕೆಲಸಗಳಲ್ಲಿ ಸಕ್ರಿಯ ಸದಸ್ಯನಾಗುವ ಒಂದು ಭಾಗವಾಗಿದೆ. ರಾಜಕೀಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಮತ್ತು ನಮ್ಮ ತಂಡದ ಸದಸ್ಯರಲ್ಲಿ ಕಂಡುಬರುವ ವಿವಿಧ ರಾಜಕೀಯ ದೃಷ್ಟಿಕೋನಗಳನ್ನು ಪ್ರಶಂಸಿಸಲು ನಮ್ಮ ತಂಡದ ಸದಸ್ಯರ ಹಕ್ಕುಗಳನ್ನು ನಾವು ಗೌರವಿಸುತ್ತಿದ್ದರೂ, ರಾಜಕೀಯದಲ್ಲಿ ಭಾಗವಹಿಸುವುದು Tennecoದಲ್ಲಿನ ನಮ್ಮ ಕೆಲಸದಿಂದ ಪ್ರತ್ಯೇಕವಾಗಿರಬೇಕು ಮತ್ತು ಕಾನೂನು ಹಾಗೂ Tenneco ನೀತಿಗಳಿಗೆ ಅನುಗುಣವಾಗಿರಬೇಕು.

### ನೈತಿಕ ವರ್ತನೆಗೆ ಮಾದರಿ.

ರಾಜಕೀಯವನ್ನು ವೈಯಕ್ತಿಕವಾಗಿರಿಸಿಕೊಳ್ಳುವುದು. *ನಿಮ್ಮ ಸ್ನೇಹಿತ ಸ್ಥಳೀಯ ಕಚೇರಿಯ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ನಿಮ್ಮ ಬೆಂಬಲವನ್ನು ತೋರಿಸಲು, ನಿಮ್ಮ ಬಿಡುವಿನ ಸಮಯದಲ್ಲಿ ಮತ ಯಾಚಿಸಲು ನಿಮ್ಮ ಮನೆಯ ದೂರವಾಣಿಯನ್ನು ಬಳಸುತ್ತೀರಿ. ಸರಿಯಾದ ಕ್ರಮವೇ?* ಉತ್ತಮ ಕಾರ್ಯ ಮಾಡಿದ್ದೀರಿ. ರಾಜಕೀಯ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು, ದೂರವಾಣಿಯನ್ನು ಉಪಯೋಗಿಸುವುದು ಸೇರಿದಂತೆ ಕಂಪನಿಯ ಸಮಯ ಮತ್ತು ಸಂಪನ್ಮೂಲಗಳನ್ನು ಎಂದಿಗೂ ಬಳಸಬೇಡಿ. ನೀವು ಮನೆಗೆ ಬರುವವರೆಗೂ ಕಾಯುವುದು ರಾಜಕೀಯವನ್ನು ವೈಯಕ್ತಿಕವಾಗಿಡಲು ಉತ್ತಮ ಮಾರ್ಗವಾಗಿದೆ.

### ಎಚ್ಚರಿಕೆ.

ನಿಮಗಾಗಿಯೇ ಮಾತನಾಡುವುದು. *ರಾಜಕೀಯ ಅಭಿಯಾನದಲ್ಲಿ ನಿಮ್ಮ ಕಾರ್ಯದ ಕುರಿತು ಚರ್ಚಿಸಲು ಸ್ಥಳೀಯ ಸುದ್ದಿ ಕೇಂದ್ರದಿಂದ ನಿಮ್ಮನ್ನು ಆಹ್ವಾನಿಸಲಾಗಿದೆ. ನಿಮ್ಮ ಹೆಸರು, ವೃತ್ತಿ ಮತ್ತು ಕೆಲಸ ಮಾಡುವ ಸ್ಥಳವನ್ನು ತಿಳಿಸುವ ಮೂಲಕ ಈ ಕೇಂದ್ರವು ನಿಮ್ಮನ್ನು ಪರಿಚಯಿಸಲು ಬಯಸುತ್ತದೆ. ಅದು ಸರಿಯೇ?* ಇರಬಹುದು, ಆದರೆ, ಮೊದಲು ಸಂವಹನ ತಂಡದೊಂದಿಗೆ ಪರಿಶೀಲಿಸಿ. ಅನುಮೋದನೆ ನೀಡಿದರೆ, ನಿಮ್ಮ ಭಾಗವಹಿಸುವಿಕೆಯು ನಮ್ಮ ನೀತಿಗಳಿಗೆ ಅನುಸಾರವಾಗಿದೆ ಮತ್ತು ನೀವು ವ್ಯಕ್ತಪಡಿಸುವ ಯಾವುದೇ ಅಭಿಪ್ರಾಯಗಳು ನಿಮ್ಮದೇ ಆಗಿರುವುದು ಎಂಬುದನ್ನು ಸ್ಪಷ್ಟವಾಗಿ ತಿಳಿಸಿ.

### ತಪ್ಪು ಮಾರ್ಗ.

ನಿಮ್ಮ ಹೆಸರನ್ನು ಬಳಸುವುದು. *ರಾಜಕೀಯ ಕಾರಣಕ್ಕಾಗಿ ನೀವು ಫ್ಲೈಯರ್ ಗಳನ್ನು ವಿತರಿಸಲು ಇಚ್ಛಿಸುತ್ತೀರಿ ಮತ್ತು ಕಂಪನಿಯ ಲೋಗೋವನ್ನು ಬಳಸುವುದರಿಂದ ಹೆಚ್ಚಿನ ಬೆಂಬಲ ಪಡೆಯಲು ಸಹಾಯವಾಗುವುದೆಂದು ಭಾವಿಸುತ್ತೀರಿ. ಜೊತೆಗೆ, ನಿಮ್ಮ ಮುಖ್ಯಸ್ಥರು ಈ ಕಾರಣವನ್ನು ಇಷ್ಟಪಡುತ್ತಾರೆ ಮತ್ತು ನಿಮ್ಮ ತಂಡದ ಕೆಲಸವನ್ನು ಮೆಚ್ಚುತ್ತಾರೆ ಎಂಬುದು ನಿಮಗೆ ತಿಳಿದಿದೆ. ಎಲ್ಲವೂ ಒಳ್ಳೆಯ ಕಾರಣಕ್ಕಾಗಿ, ಸರಿ?* ತಪ್ಪಾಗಿದೆ. ಪೂರ್ವಾನುಮತಿ ಇಲ್ಲದೇ ನೀವು ಯಾವುದೇ ರಾಜಕಿಯ ಚಟುವಟಿಕೆಯಲ್ಲೂ Tenneco ಹೆಸರನ್ನು ಬಳಸಬಾರದು. Tennecoದಲ್ಲಿ ನಾವು ಅಭಿಪ್ರಾಯಗಳ ವೈವಿಧ್ಯತೆಯನ್ನು ಆಚರಿಸುತ್ತೇವೆ ಮತ್ತು ರಕ್ಷಿಸುತ್ತೇವೆ. ನಾವು ನಿಮ್ಮನ್ನು ಸಹ ನಿರೀಕ್ಷಿಸುತ್ತೇವೆ.

### ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

#### ಯಾವುದೇ ಪ್ರಮುಖ ನೆನಪಿಡಬೇಕಾದ ಅಂಶಗಳಿವೆಯೇ?

ರಾಜಕೀಯ ಚಟುವಟಿಕೆಗಳಲ್ಲಿ ನಿಮ್ಮ ಭಾಗವಹಿಸುವಿಕೆ ಕಾನೂನುಬದ್ಧವಾಗಿದೆ ಮತ್ತು Tenneco ಮೇಲೆ ಪ್ರತಿಕೂಲವಾಗಿ ಪ್ರತಿಫಲಿಸುವುದಿಲ್ಲ ಎಂದು ಖಚಿತಪಡಿಸಿಕೊಳ್ಳಿ.

### ದಿ ಗ್ಯಾರೇಜ್



# ನಮ್ಮ ಉದ್ಯಮವನ್ನು ನಡೆಸುವುದು

ನಾವೆಲ್ಲೇ ಇದ್ದರೂ ಕೂಡಾ ಸಮಗ್ರತೆಯಿಂದ ಕೆಲಸ ಮಾಡುತ್ತೇವೆ. ನಾವು ಪ್ರಾಮಾಣಿಕವಾಗಿ ವ್ಯವಹರಿಸುತ್ತೇವೆ. ನಾವು ಸೂಕ್ತ ರೀತಿಯಲ್ಲಿ ಸ್ಪರ್ಧಿಸುತ್ತೇವೆ, ಮತ್ತು ನಮ್ಮ ಉತ್ಪನ್ನಗಳು ಮತ್ತು ಸೇವೆಗಳ ಗುಣಮಟ್ಟಗಳ ಆಧಾರದ ಮೇಲೆ ನಾವು ಯಶಸ್ವಿಯಾಗುತ್ತೇವೆ. ಇದು ಯಾವಾಗಲೂ ಸುಲಭವಾದ ಮಾರ್ಗವಾಗಿರುವುದಿಲ್ಲ, ಆದರೆ ಯಾವಾಗಲೂ ಸರಿಯಾದ ಮಾರ್ಗವಾಗಿರುತ್ತದೆ, ಮತ್ತು ಇದು ನಮಗೆ ನಮ್ಮ ಗ್ರಾಹಕರು, ನಮ್ಮ ಸಮುದಾಯಗಳು, ನಮ್ಮ ಸಹೋದ್ಯೋಗಿಗಳು ಮತ್ತು ನಮ್ಮ ಷೇರುದಾರರ ವಿಶ್ವಾಸವನ್ನು ಗೆಲ್ಲುತ್ತದೆ.

## ಈ ವಿಭಾಗದಲ್ಲಿ:

- ಭ್ರಷ್ಟಾಚಾರವನ್ನು ಎದುರಿಸುವುದು
- ಅಪರಾಧದ ವಿರುದ್ಧ ಹೋರಾಡುವುದು
- ಸೂಕ್ತ ರೀತಿಯಲ್ಲಿ ಸ್ಪರ್ಧಿಸುವುದು
- ಹಿತಾಸಕ್ತಿಯ ಸಂಘರ್ಷಗಳನ್ನು ತಪ್ಪಿಸುವುದು
- ಉಡುಗೊರೆಗಳು, ಮನರಂಜನೆ, ಮತ್ತು ಆತಿಥ್ಯವನ್ನು ವಿನಿಮಯ ಮಾಡಿಕೊಳ್ಳುವುದು
- ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ಮಾಡುವುದು

# ಭ್ರಷ್ಟಾಚಾರವನ್ನು ಎದುರಿಸುವುದು

## ತಲುಪಬೇಕಾದ ಗುರಿ

ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಗೆಲ್ಲುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ಭ್ರಷ್ಟಾಚಾರವು ಸಮುದಾಯಗಳಿಗೆ ತೊಂದರೆ ಮಾಡುತ್ತದೆ. ಲಂಚ ಸ್ವೀಕರಿಸುವ ಜನರು ತಮ್ಮ ವೈಯಕ್ತಿಕ ಲಾಭಗಳಿಗೆ (ಉಡುಗೊರೆಗಳು, ಪ್ರಯಾಣ, ಊಟ, ಮತ್ತು ಹಣ ಮುಂತಾದವು) ಗುಣಮಟ್ಟದ ಕೆಲಸಕ್ಕಿಂತ ಹೆಚ್ಚು ಆದ್ಯತೆ ಕೊಡುತ್ತಾರೆ. ನೀವು ವ್ಯವಹಾರದ ಯಾವುದೇ ನಿರ್ಧಾರಗಳನ್ನು ಅನುಕೂಲಕರವಾಗುವಂತೆ ಪ್ರಭಾವಿಸಲು ಹಣ (ಅಥವಾ ಮೌಲ್ಯದ ಯಾವುದಾದರೂ) ನೀಡಿದರೆ, ಅದು ನಿಮಗಾಗಿ ಅಲ್ಲದೆ ಕಂಪನಿಗೆ ಸಹಾಯ ಮಾಡಲು ನೀವು ಮಾಡಿದರೂ ಸಹ ಅದು ನಮ್ಮ ಮೂಲ ಮೌಲ್ಯಗಳ ವಿರುದ್ಧವಾಗಿರುತ್ತದೆ.

ಲಂಚವು ಇನ್ಸ್‌ಪೆಕ್ಟರ್‌ಗೆ ಒಂದು ಅಪಾಯಕಾರಿ ಭಾಗವನ್ನು ಕಡೆಗಣಿಸಲು ಅಥವಾ ಖರೀದಿದಾರರಿಗೆ ಅನರ್ಹರಾದ ಪೂರೈಕೆದಾರರಿಂದ ಖರೀದಿ ಮಾಡುವಂತೆ ಮನವೊಲಿಸಬಹುದು. ನಾವು ಆ ರೀತಿಯಲ್ಲಿ ಕೆಲಸ ಮಾಡುವುದಿಲ್ಲ. ನಾವು ಯಾವಾಗಲೂ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತೇವೆ. ನಾವು ಎಂದಿಗೂ ಲಂಚ ಕೊಡುವುದಿಲ್ಲ ಅಥವಾ ಸ್ವೀಕರಿಸುವುದಿಲ್ಲ ಮತ್ತು ನಾವು ಯಾವುದೇ ರೀತಿಯ ಅನುಚಿತವಾಗಿರುವುದನ್ನು ಕಾಣುವುದನ್ನೂ ಸಹ ತಪ್ಪಿಸುತ್ತೇವೆ.

### ನೈತಿಕ ವರ್ತನೆಗೆ ಮಾದರಿ.

**ಬೇರೆ ವ್ಯಕ್ತಿಗಳನ್ನು ತಿಳಿದುಕೊಳ್ಳುವುದು.** *ನೀವು ಒಬ್ಬ ಪೂರೈಕೆದಾರರನ್ನು ಆಯ್ಕೆ ಮಾಡುತ್ತಿದ್ದೀರಿ ಮತ್ತು ಸೂಕ್ತ ಆಯ್ಕೆ ಮಾಡಲು ಇಚ್ಛಿಸುತ್ತೀರಿ. ಆದ್ದರಿಂದ ನೀವು ನಮ್ಮ ವ್ಯಾಪಾರಿಗಳ ಪರಿಶೀಲನಾಕ್ರಮ ಮತ್ತು ಹರಾಜು ಪ್ರಕ್ರಿಯೆಗಳನ್ನು ಅನುಸರಿಸಿ, ವ್ಯವಹಾರದ ನೊಂದಣಿ ಮತ್ತು ಸಾರ್ವಜನಿಕವಾಗಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ, ವ್ಯಾಪಾರ ತಿಳಿಸಿ, ಹಿಂದಿನ ವ್ಯಾಪಾರಿಗಳನ್ನು ವಿಚಾರಿಸಿ, ಉದಾಹರಣೆಗಳನ್ನು ಕೇಳಿ ಮತ್ತು ಇಂಟರ್‌ನೆಟ್‌ನಲ್ಲಿ ಹುಡುಕಿ ಸೂಕ್ತ ನಿರ್ಧಾರ ತೆಗೆದುಕೊಳ್ಳಿ. ಉತ್ತಮ ಹೆಜ್ಜೆಗಳೇ?* ಖಚಿತವಾಗಿಯೂ ಹೌದು. ನಾವು ನಮ್ಮ ಸಮಗ್ರತೆಯನ್ನು ಗೌರವಿಸುವ ಪೂರೈಕೆದಾರರ ಜೊತೆ ಕೆಲಸ ಮಾಡಲು ಇಚ್ಛಿಸುತ್ತೇವೆ, ಮತ್ತು ನಾವು ನಮ್ಮ ಪೂರೈಕೆದಾರರ ಹಿನ್ನೆಲೆ ಮತ್ತು ಖ್ಯಾತಿಯನ್ನು ಪರಿಶೀಲಿಸುತ್ತೇವೆ. ಇದನ್ನು ನಾವು “ಸೂಕ್ತ ಪರಿಶೀಲನೆ” ಎನ್ನುತ್ತೇವೆ. ಅವರು ನಮಗೆ ಲಂಚ ನೀಡುವುದಿಲ್ಲ ಮತ್ತು ನೀಡಬಾರದು ಎಂದು ತಿಳಿದಿದ್ದಾರೆಂದು ಖಚಿತಪಡಿಸಿಕೊಳ್ಳಿ. ಹಾಗೆಯೇ ಒಪ್ಪಂದಕ್ಕೆ ಸಹಿ ಹಾಕಿದ ನಂತರ ಕಂಡುಬರುವ ಯಾವುದೇ ಎಚ್ಚರಿಕೆಯ ಸೂಚನೆಗಾಗಿ ಗಮನಿಸಿ.

**ನಿಖರವಾದ ದಾಖಲೆಗಳನ್ನು ಇಡುವುದು.** *ನೀವು ಖರ್ಚಿನ ವರದಿಯನ್ನು ಪರಿಶೀಲಿಸುತ್ತಿದ್ದೀರಿ ಮತ್ತು ಒಂದು ವಹಿವಾಟನ್ನು ಹೊರತುಪಡಿಸಿ ಇತರ ಎಲ್ಲಾ ವಹಿವಾಟುಗಳನ್ನೂ ವಿವರವಾಗಿ ತಿಳಿಸಲಾಗಿದೆ ಎಂದು ಗಮನಿಸುತ್ತೀರಿ. ಅದು ಸಂಶಯಾಸ್ಪದವಾಗಿ ಕಂಡುಬರುತ್ತದೆ, ಆದ್ದರಿಂದ ನೀವು ಹೆಚ್ಚಿನ ಮಾಹಿತಿಯನ್ನು ಕೇಳುತ್ತೀರಿ.* ಅತ್ಯುತ್ತಮ ಕೆಲಸ. ಅದು ಒಂದು ಪ್ರಾಮಾಣಿಕ ತಪ್ಪಾಗಿರಬಹುದು ಅಥವಾ ಯಾರಾದರೂ ಏನನ್ನಾದರೂ ಮುಚ್ಚಿಡಲು ಪ್ರಯತ್ನಿಸುತ್ತಿರಬಹುದು. ಅತ್ಯುತ್ತಮ ಮಾರ್ಗವೆಂದರೆ ಅದರ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಕೊಳ್ಳುವುದು. ನೀವು ಯಾವುದೇ ಲಂಚದ ಮೊತ್ತಕ್ಕೆ ಅನುಮತಿ ಕೊಡಲು ಇಚ್ಛಿಸುವುದಿಲ್ಲ.

> ಲಂಚ ನೀಡದೆ ನಾವು ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತೇವೆ ...
> ಇದು ನಮ್ಮ ಸಮುದಾಯಗಳನ್ನು ಸುಧಾರಿಸಲು ಸಹಾಯ ಮಾಡುತ್ತದೆ.

### ಎಚ್ಚರಿಕೆ.

**ಆಮಂತ್ರಣಗಳನ್ನು ಸ್ವೀಕರಿಸುವುದು.** *ಹೊಸ ಗ್ರಾಹಕರು ನಿಮ್ಮನ್ನು ಊಟಕ್ಕೆ ಕರೆಯಲು ಬಯಸುತ್ತಾರೆ. ನೀವು ಒಪ್ಪಿಕೊಳ್ಳಬೇಕೇ?* ನೀತಿಗಳ ಮಿತಿಯೊಳಗಿದ್ದರೆ, ಹೆಚ್ಚು ಖರ್ಚಿಲ್ಲದ ಊಟಕ್ಕೆ, ಗ್ರಾಹಕರ ಪ್ರಸ್ತಾಪವನ್ನು ಒಪ್ಪುವುದು ಬಹುಶಃ ಸರಿ. ನಿಮ್ಮ ಊಟದ ಖರ್ಚನ್ನು ನೀವೇ ನೋಡಿಕೊಳ್ಳುವುದು ಉತ್ತಮ ಆಯ್ಕೆಯಾಗಿದೆ. ಈ ರೀತಿಯಾಗಿ, ನೀವು ಪ್ರಭಾವಕ್ಕೊಳಗಾಗಿದ್ದೀರಿ ಎಂಬ ಭಾವನೆಯನ್ನು ತಪ್ಪಿಸುತ್ತೀರಿ.

**ಸರ್ಕಾರಿ ನೌಕರರಿಗೆ ನೀಡುವುದು.** *ಇತ್ತೀಚೆಗೆ ನೀವು ನಿರ್ಮಾಣ ಪರವಾನಗಿ ಅರ್ಜಿಯನ್ನು ಪೂರ್ಣಗೊಳಿಸಿದ್ದೀರಿ. ನಿಮ್ಮ ಸಂಪರ್ಕದಲ್ಲಿರುವವರಿಗೆಲ್ಲಾ ನೀವು ಉಡುಗೊರೆಯನ್ನು ಕೊಡಲು ಯೋಜಿಸಿದ್ದರೆ, ರಜಾದಿನಗಳಲ್ಲೂ ಸರ್ಕಾರಿ ಸಂಬಂಧಿತ ಸಂಸ್ಥೆಯು ಅದನ್ನು ಪರೀಕ್ಷಿಸುತ್ತಿರುತ್ತದೆ. ಸರಿಯಾದ ಸಮಯ, ಅಲ್ಲವೇ?* ತಪ್ಪು. ಸರ್ಕಾರಿ ಅಧಿಕಾರಿಗಳಿಗೆ ಮತ್ತು ಅವರ ಸಂಬಂಧಿಕರಿಗೆ ನಾವು ಏನು ನೀಡಬಹುದು ಎಂಬುದರ ಬಗ್ಗೆ ನಿಯಮಗಳು ಬಹಳ ಕಟ್ಟುನಿಟ್ಟಾಗಿವೆ. ನೀವು ಯಾವುದೇ ಮೌಲ್ಯದ್ದನ್ನು ಕೊಡುವ ಮೊದಲು ನಮ್ಮ ನೀತಿಯನ್ನು ಪರಿಶೀಲಿಸಿ ಮತ್ತು ಅನುಮೋದನೆಯನ್ನು ಪಡೆಯಿರಿ. ನಿಮಗೆ ಉದ್ದೇಶವಿಲ್ಲದಿದ್ದರೂ, ನಿಮ್ಮ ಉಡುಗೊರೆ ಲಂಚದಂತೆ ಭಾಸವಾಗಬಹುದು.

## ತಪ್ಪು ಮಾರ್ಗ.

**ಗುರುತಿಸಲಾಗದಂತಹ ಲಂಚಗಳು.** *ಕಸ್ಟಮ್ಸ್‌ನಲ್ಲಿ ಕೆಲವು ಕಂಟೈನರ್‌ಗಳನ್ನು ಇರಿಸಲಾಗಿದೆ ಎಂದು ಹೇಳಲು ನಿಮ್ಮ ಪೂರೈಕೆದಾರರು ಕರೆ ಮಾಡುತ್ತಾರೆ. ನೀವು ಪರಿಶೀಲನೆಯನ್ನು ತಪ್ಪಿಸಲು ಸಣ್ಣ ಮೊತ್ತವನ್ನು ಕೊಡುವಂತೆ ಅವರು ಶಿಫಾರಸು ಮಾಡುತ್ತಾರೆ. ಇದು ಸಾಮಾನ್ಯ ಮತ್ತು ಎಲ್ಲರೂ ಮಾಡುತ್ತಾರೆ. ನೀವು ನಿಮ್ಮ ತಂಡದ ಸಭೆಯಲ್ಲಿ ಮಾತನಾಡುತ್ತೀರಿ ಮತ್ತು ಮುಂದುವರೆಯಲು ಎಲ್ಲರೂ ಒಪ್ಪುತ್ತಾರೆ. ನೀವು, ವಿತರಣೆಯು ತಡವಾಗಿಲ್ಲ ಎಂದು ಖಚಿತಪಡಿಸಿಕೊಳ್ಳಲು ನಿಮ್ಮ ಪಾವತಿಯನ್ನು ಅಧಿಕೃತಗೊಳಿಸುತ್ತೀರಿ. ಸಮಯವನ್ನು ಉಳಿಸುವುದು ಯಾವಾಗಲೂ ಒಳ್ಳೆಯದು, ಅಲ್ಲವೇ?* ಈ ಸಂದರ್ಭದಲ್ಲಿ ಅಲ್ಲ. ಹಣ ನೀಡುವ ಮೂಲಕ ಕಸ್ಟಮ್ಸ್ ನಿಂದ ಕಂಟೈನರ್ ಗಳನ್ನು ಬೇಗ ಪಡೆಯಬಹುದಾದರೂ, ಅದು ನಾವು ಮಾಡುವ ವ್ಯಾಪಾರದ ವಿಧಾನವಲ್ಲ. ಇಲ್ಲಿ, ನಗದು ಕೋರಿಕೆಯೇ ಲಂಚದ ಮೊದಲ ಸುಳಿವು. ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಅಧಿಕೃತ ಶುಲ್ಕ ಅಥವಾ ಅನುಮೋದನೆ ಇರಬೇಕು. ಮುಂದಿನ ಹಂತಗಳನ್ನು ಚರ್ಚಿಸಲು ಕಾನೂನು ಇಲಾಖೆಯನ್ನು ಸಂಪರ್ಕಿಸಿ.




## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಅದು ಲಂಚವಾಗಿದ್ದರೆ ಲಂಚವೆಂದು ಹೇಳಬಹುದೇ ?

ವ್ಯವಹಾರದ ಯಾವುದೇ ನಿರ್ಣಯಗಳನ್ನು ಬದಲಾಯಿಸಲು ಕೊಟ್ಟ ಯಾವುದೇ ಮೌಲ್ಯವೂ ಕೂಡಾ ಲಂಚವಾಗುತ್ತದೆ ಎಂದು ನೆನಪಿಡಿ. ಉದಾಹರಣೆಗೆ:

- ವಿಶೇಷ ರಿಯಾಯಿತಿ
- ಒಂದು ಕ್ರೀಡಾಕೂಟಕ್ಕೆ ಟಿಕೆಟ್‌ಗಳು
- ದುಬಾರಿ ಹೋಟೆಲ್‌ನಲ್ಲಿ ಊಟ
- ಕೆಲಸ ಅಥವಾ ಇಂಟರ್ನ್‌ಶಿಪ್ ಗೆ ಪ್ರಸ್ತಾಪ
- ನಗದಿನ ವಿವಿಧ ರೂಪ (ಅಂದರೆ ಉಡುಗೊರೆ ಪತ್ರ ಅಥವಾ ಸಾಲ)
- ದಾನದ ಕೆಲಸಕ್ಕೆ ದೇಣಿಗೆ

ನಿಮ್ಮನ್ನೇ ಕೇಳಿಕೊಳ್ಳಿ: ವ್ಯವಹಾರದ ಅನುಕೂಲಕರ ವಿನಿಮಯ ನಿರ್ಧಾರಕ್ಕೆ ಯಾರಾದರೂ ಇದನ್ನು ನೀಡುತ್ತಾರೆಯೇ ಅಥವಾ ವಿನಂತಿಸುತ್ತಾರೆಯೇ? ಉತ್ತರ "ಹೌದು" ಎಂದಾದರೆ, ನಿಮ್ಮ ಪ್ರತಿಕ್ರಿಯೆ "ಇಲ್ಲ, ಧನ್ಯವಾದಗಳು" ಎಂದಾಗಿರಬೇಕು.

## ದಿ ಗ್ಯಾರೇಜ್

# ಅಪರಾಧದ ವಿರುದ್ಧ ಹೋರಾಡುವುದು

## ತಲುಪಬೇಕಾದ ಗುರಿ

ಅಪರಾಧದ ವಿರುದ್ಧ ಹೋರಾಡುವ ಮೂಲಕ ನಮ್ಮ ಕಂಪನಿ, ಆರ್ಥಿಕತೆ ಮತ್ತು ಸಮುದಾಯಗಳನ್ನು ಸುರಕ್ಷಿತವಾಗಿರಿಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ಹಣ ವರ್ಗಾವಣೆಯನ್ನು ತಡೆಯುವ ಮೂಲಕ ನಾವು ಅಪರಾಧದ ವಿರುದ್ಧ ಹೋರಾಡುತ್ತೇವೆ. ಅಪರಾಧಿಗಳು ಕಾನೂನುಬಾಹಿರ ಚಟುವಟಿಕೆಯಿಂದಾಗಿ ಗಳಿಸಿದ ಹಣವನ್ನು ಕಾನೂನಾತ್ಮಕ ವ್ಯವಹಾರದ ಮೂಲಕ (ನಮ್ಮಂತೆ) ತೋರಿಸಿದಾಗ ಈ ರೀತಿಯದು ಸಂಭವಿಸುತ್ತದೆ. ಹಣದ ಮೂಲವನ್ನು ಮರೆಮಾಚಿ, ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದು ಮತ್ತು ಈ ಕೆಟ್ಟ ವರ್ತನೆಯನ್ನು ಮುಂದುವರೆಸುವುದೇ ಅವರ ಗುರಿಯಾಗಿದೆ.

ವಿಶೇಷವಾಗಿ ವ್ಯವಹಾರವು ಹಣವನ್ನು ಹೊಂದಿದ್ದರೆ – ಉತ್ತಮ ನಿರ್ಧಾರವನ್ನು ತೆಗೆದುಕೊಳ್ಳುವ, ಗ್ರಾಹಕರನ್ನು ತಿಳಿದುಕೊಳ್ಳುವ ಮತ್ತು ಪೂರೈಕೆದಾರರೊಂದಿಗೆ ಕೆಲಸ ಮಾಡುವಾಗ ಹೆಚ್ಚಿನ ಗಮನ ಹರಿಸುವುದರ ಮೂಲಕ ನಾವು ಅಪರಾಧದ ವಿರುದ್ಧ ಹೋರಾಡುತ್ತೇವೆ. ಏನಾದರೂ ಅನುಮಾನಾಸ್ಪದವೆಂದು ತೋರಿದಾಗ, ಜಾಗರೂಕರಾಗಿರಿ ಮತ್ತು ಮಾತನಾಡಿ. ಈ ಮೂಲಕ ಹಣ ವರ್ಗಾವಣೆಯನ್ನು ತಡೆಯಲು ಮತ್ತು ನಮ್ಮ ಸುತ್ತಲಿನವರನ್ನು ಸುರಕ್ಷಿತವಾಗಿಡಲು ನಾವು ಸಹಾಯ ಮಾಡುತ್ತೇವೆ.

### ನೈತಿಕ ವರ್ತನೆಗೆ ಮಾದರಿ.

**ಸಂಕೇತಗಳನ್ನು ತಿಳಿದುಕೊಳ್ಳುವುದು.** *ನಿಮ್ಮ ಗ್ರಾಹಕರಲ್ಲಿ ಒಬ್ಬರು ಗಮನಾರ್ಹವಾಗಿ ಹೆಚ್ಚಿಗೆ ಪಾವತಿಸಿದ್ದಾರೆ. ಈ ಹಿಂದೆಯೂ ಅವರು ಇದನ್ನು ಹಲವಾರು ಬಾರಿ ಮಾಡಿದ್ದಾರೆ. ಇದರ ಬಗ್ಗೆ ನೀವು ಅವರನ್ನು ಕೇಳಿದರೆ, ಅವರ ಮುಂದಿನ ಆರ್ಡರ್ ಸಂದರ್ಭದಲ್ಲಿ ಹಣ ಸಂದಾಯ ಮಾಡುವಂತೆ ನಿಮ್ಮನ್ನು ಕೇಳುತ್ತಾರೆ. ನಿಮಗೆ ಇದು ಸರಿಯೆನಿಸುತ್ತಿಲ್ಲ, ಆದ್ದರಿಂದ ನೀವು ಇದನ್ನು ನಿಮ್ಮ ವ್ಯವಸ್ಥಾಪಕರಿಗೆ ತಿಳಿಸಿ. ಸರಿಯಾದ ಆಯ್ಕೆಯೇ?* ಖಂಡಿತವಾಗಿ. ಇದು ನಿಮ್ಮ ಪ್ರಾಮಾಣಿಕ ತಪ್ಪಾಗಿರಬಹುದು, ಆದರೆ ಈ ರೀತಿಯಾಗಿರುವುದೇ ಸುರಕ್ಷಿತ. ಅತಿಯಾಗಿ ಪಾವತಿಸುವುದು ಹಣ ವರ್ಗಾವಣೆಯ ಸಂಕೇತವಾಗಿರಬಹುದು. ಮಾರ್ಗದರ್ಶನ ಪಡೆಯುವ ಮೂಲಕ ನೀವು ಒಳ್ಳೆಯ ಕೆಲಸ ಮಾಡಿದ್ದೀರಿ.

### ಎಚ್ಚರಿಕೆ.

**ಪ್ರಶ್ನೆಗಳನ್ನು ಕೇಳುವುದು.** *ನಿಮಗೆ ಚೆನ್ನಾಗಿ ತಿಳಿದಿರುವ ಗ್ರಾಹಕರು ಕೆಲವು ದೋಷಯುಕ್ತ ಉತ್ಪನ್ನಗಳನ್ನು ಖರೀದಿಸಲು ಆಸಕ್ತರಾಗಿದ್ದಾರೆ. ಮುಂದುವರೆಯುವುದು ಸರಿಯೇ?* ಇರಬಹುದು, ಆದರೆ ನಿಮ್ಮ ಗ್ರಾಹಕರನ್ನು ಮತ್ತು ನಮ್ಮ ಉತ್ಪನ್ನಗಳನ್ನು ಅವರು ಹೇಗೆ ಬಳಸುತ್ತಾರೆ ಎಂದು ತಿಳಿದುಕೊಳ್ಳುವುದು ಬಹಳ ಮುಖ್ಯ. ಕೆಲವು ಕಂಪನಿಗಳು ದೋಷಯುಕ್ತ ಉತ್ಪನ್ನಗಳನ್ನು ನಿರುಪಯುಕ್ತ ವಸ್ತುಗಳೆಂದು ಖರೀದಿಸುತ್ತವೆ ನಂತರ ಅವುಗಳನ್ನೇ ದೋಷಯುಕ್ತ ಮತ್ತು ಕಾನೂನುಬಾಹಿರ ಎಂದು ತಿಳಿದಿದ್ದರೂ ಮತ್ತೆ ಹೊಸದೆಂಬಂತೆ ಮಾರುಕಟ್ಟೆಗೆ ಪರಿಚಯಿಸುತ್ತವೆ. ನಮ್ಮ ಉತ್ಪನ್ನಗಳ ದುರುಪಯೋಗ ಮತ್ತು ಇತರ ರೀತಿಯ ಅಪರಾಧಗಳನ್ನು ತಪ್ಪಿಸಲು, ಮೂರನೇ ವ್ಯಕ್ತಿಯು ಹೀಗೆ ಮಾಡುತ್ತಿದ್ದಾರೆಯೇ ಎಂದು ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳಿ:

- ಹಣದಲ್ಲಿ ಪಾವತಿಸಲು ಪ್ರಯತ್ನಿಸುತ್ತಿದ್ದಾರೆ
- ಇನ್‌ವಾಯ್ಸ್‌ನಲ್ಲಿ ತೋರಿಸಿರುವುದಕ್ಕಿಂತ ಬೇರೆ ಕರೆನ್ಸಿಯಲ್ಲಿ ಪಾವತಿಸುತ್ತಿದ್ದಾರೆ
- ಪಾವತಿ ಮಾಡಿರುವ ಸ್ಥಳವನ್ನು ಬಿಟ್ಟು ಬೇರೆ ದೇಶಕ್ಕೆ ಸಾಗಿಸಲು ವಿನಂತಿಸುತ್ತಿದ್ದಾರೆ
- ದಾಖಲೆ ಇಡುವುದರ ಅವಶ್ಯಕತೆಗಳನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ
- ವಹಿವಾಟಿಗೆ ಸಂಬಂಧವಿರದ ಬೇರೆಯವರನ್ನು ಪಾವತಿಯನ್ನು ಮಾಡಲು ಬಳಸಿಕೊಳ್ಳುತ್ತಿದ್ದಾರೆ
- ಅವರ ವಹಿವಾಟಿನ ಮಾದರಿಯನ್ನು ತೀವ್ರ ರೀತಿಯಲ್ಲಿ ಬದಲಾಯಿಸುತ್ತಿದ್ದಾರೆ

ಈ ಯಾವುದೇ ಪ್ರಶ್ನೆಗಳಿಗೆ ನೀವು "ಹೌದು" ಎಂದು ಉತ್ತರಿಸಿದ್ದಾದಲ್ಲಿ, ನಿಮ್ಮ ವ್ಯವಸ್ಥಾಪಕರೊಂದಿಗೆ ಅಥವಾ ವ್ಯಾಪಾರ ಅನುಸರಣೆ ವಿಭಾಗದ ಜೊತೆಗೆ ಮಾತನಾಡಿ. ಇವೆಲ್ಲವೂ ಸಂಭಾವ್ಯ ಹಣ ವರ್ಗಾವಣೆಯ ಚಿಹ್ನೆಗಳು ಮತ್ತು ನಾವು ಅವುಗಳ ಬಗ್ಗೆ ತಿಳಿದುಕೊಳ್ಳಬೇಕು.

ನಾವು ಸರಿಯಾದದ್ದನ್ನು ಮಾಡುತ್ತೇವೆ ಮತ್ತು ನಾವು ಜವಾಬ್ದಾರರಾಗಿರುತ್ತೇವೆ.

## ತಪ್ಪು ಮಾರ್ಗ.

ಶಾಂತವಾಗಿರಿ. *ಕಷ್ಟಪಡುತ್ತಿರುವ ವಿತರಕರ ಪರವಾಗಿ ಮೂರನೇ ವ್ಯಕ್ತಿಯು ಪಾವತಿಸುತ್ತಾನೆ. ನೀವು ನಷ್ಟವನ್ನು ಅನುಭವಿಸಲು ತಯಾರಿಲ್ಲ, ಹಾಗಾಗಿ ನೀವು ಪಾವತಿಯನ್ನು ಸ್ವೀಕರಿಸುತ್ತೀರಿ. ನೀವು ಚಿಂತಿಸಬೇಕೇ?* ಹೌದು. ಸಂಬಂಧವಿಲ್ಲದ ಪಕ್ಷವು ಪಾವತಿ ಮಾಡುವುದು ಅನುಮಾನಾಸ್ಪದವಾಗಿದೆ. ವಿವರಗಳಿಗಾಗಿ ವಿತರಕರನ್ನು ಸಂಪರ್ಕಿಸಿ. ನಿಮಗೆ ಇನ್ನೂ ಕಳವಳಗಳು ಇದ್ದರೆ, ಇದನ್ನು ವರದಿ ಮಾಡಿ. ನಾವು ಈ ಕಂಪನಿಯೊಂದಿಗೆ ವ್ಯವಹಾರ ಮಾಡಬಹುದು ಮತ್ತು ಅದು ನಮ್ಮ ಪ್ರಾಮಾಣಿಕತೆಯೊಂದಿಗೆ ಕಾರ್ಯನಿರ್ವಹಿಸುವ ನಮ್ಮ ಬದ್ಧತೆಯೊಂದಿಗೆ ಹೊಂದಿಕೆಯಾಗುತ್ತದೆ ಎಂಬುದನ್ನು ನೀವು ಖಚಿತಪಡಿಸಿಕೊಳ್ಳಬೇಕು.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಇನ್ನೇನಾದರೂ ತಿಳಿಯಬೇಕೇ?

ಹೌದು, ಯಾವಾಗಲೂ ಹೆಸರಾಂತ ಪೂರೈಕೆದಾರರು ಮತ್ತು ಇತರ ಪಕ್ಷಗಳನ್ನು ಆಯ್ಕೆ ಮಾಡಿ, ಬ್ಯಾಂಕ್ ಖಾತೆ ಮಾಲೀಕತ್ವವನ್ನು ಮೌಲ್ಯೀಕರಣಗೊಳಿಸಿ ಹಾಗೂ ನಿಮಗೆ ಪ್ರಶ್ನೆಗಳಿದ್ದರೆ ಕೇಳಿ.

## ದಿ ಗ್ಯಾರೇಜ್



# ಸೂಕ್ತ ರೀತಿಯಲ್ಲಿ ಸ್ಪರ್ಧಿಸುವುದು

## ತಲುಪಬೇಕಾದ ಗುರಿ

ನಮ್ಮ ಸ್ವಂತ ಅರ್ಹತೆಗಳ ಮೇಲೆ ಮತ್ತು ಸಮಂಜಸವಾದ ರೀತಿಯಿಂದ ಗೆಲ್ಲುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ಉಚಿತ ಮತ್ತು ನ್ಯಾಯಯುತವಾದ ಸ್ಪರ್ಧೆಯು ಮಾರುಕಟ್ಟೆಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸುತ್ತದೆ ಎಂದು ನಾವು ನಂಬುತ್ತೇವೆ. ನವೀನ ಉತ್ಪನ್ನಗಳು ಹಾಗೂ ಸೇವೆಗಳು ಮತ್ತು ವ್ಯಾಪಾರ ಮಾಡಲು ಹೊಸ ಮಾರ್ಗಗಳು ನಮ್ಮ ಗ್ರಾಹಕರಿಗೆ ಸಂತೋಷವನ್ನು ನೀಡುವುದರಿಂದ ನಮ್ಮ ಉದ್ಯಮದೊಳಗಿನ ಪ್ರಗತಿಗೆ ಕಾರಣವಾಗುತ್ತದೆ.

ಹಾಗಾದರೆ, ನಾವು ನ್ಯಾಯಯುತ ಸ್ಪರ್ಧೆ ಎಂದಾಗ ಏನನ್ನು ಹೇಳುತ್ತೇವೆ? ನಮಗೆ, ಇದು ಪ್ರಾಮಾಣಿಕವಾಗಿ ಮತ್ತು ನೈತಿಕವಾಗಿ ಸರಿಯಾಗಿ ಕೆಲಸ ಮಾಡುವುದು ಎಂದರ್ಥ. ಮುಂದೆ ಬರಲು ನಾವು ಅನೈತಿಕ ಅಭ್ಯಾಸಗಳನ್ನು (ನಮ್ಮ ಪ್ರತಿಸ್ಪರ್ಧಿಗಳ ಬಗ್ಗೆ ಸುಳ್ಳು ಹೇಳುವುದು ಅಥವಾ ಹೊಸ ಕಂಪನಿಗಳನ್ನು ಹೊರಗೆ ತಳ್ಳಲು ಪ್ರಯತ್ನಿಸುವುದು) ಉಪಯೋಗಿಸುವುದಿಲ್ಲ. ನಮ್ಮ ಉತ್ಪನ್ನಗಳು ಮತ್ತು ಸೇವೆಗಳ ಗುಣಮಟ್ಟಗಳ ಮೂಲಕ ನಮ್ಮ ಯಶಸ್ಸನ್ನು ಹೆಚ್ಚಿಸುವತ್ತ ನಾವು ಗಮನ ಕೊಡುತ್ತೇವೆ. ಇದಕ್ಕಿಂತ ಹೆಚ್ಚು ಇಲ್ಲ, ಕಡಿಮೆಯೂ ಇಲ್ಲ. ಮತ್ತು ನಾವು ಅನುಚಿತ ಸ್ಪರ್ಧಾತ್ಮಕ ಅಭ್ಯಾಸಗಳ ಗೋಚರವನ್ನು ಸಹ ತಪ್ಪಿಸುತ್ತೇವೆ.

> ನಮ್ಮ ವ್ಯವಹಾರದ ಯಶಸ್ಸಿಗೆ ನ್ಯಾಯಯುತ ಸ್ಪರ್ಧೆಯು ಮೂಲಭೂತವಾದುದು ಎಂಬುದನ್ನು ನಾವು ನಂಬುತ್ತೇವೆ.

## ನೈತಿಕ ವರ್ತನೆಗೆ ಮಾದರಿ.

**ಅನುಚಿತ ಒಪ್ಪಂದಗಳನ್ನು ತಪ್ಪಿಸುವುದು.** *ಮಾರಾಟದಲ್ಲಿನ ಕುಸಿತದ ಬಗ್ಗೆ ನಿಮ್ಮ ಪ್ರತಿಸ್ಪರ್ಧಿಯು ನಿಮಗೆ ದೂರುತ್ತಾರೆ ಮತ್ತು ಬೆಲೆಯನ್ನು ಹೆಚ್ಚಿಸಲು ಸಲಹೆ ನೀಡುತ್ತಾರೆ. ಇದು ಸರಿಯಲ್ಲವೆಂದು ನಿಮಗೆ ತಿಳಿದಿದೆ. ಆದ್ದರಿಂದ ನೀವು ಅವರನ್ನು ಸುಮ್ಮನಿರಿಸಿ ಮತ್ತು ತಕ್ಷಣವೇ ಈ ಸಂಭಾಷಣೆಯನ್ನು ವರದಿ ಮಾಡಿ. ಇದು ಚತುರ ನಡೆಯೇ?* ಹೌದು, ತುಂಬಾ. ನಾವು ಸರಿಯಾದ ರೀತಿಯಲ್ಲಿ ಅಂದರೆ ಪ್ರಾಮಾಣಿಕತೆ, ನೈತಿಕತೆ ಮತ್ತು ಯಾವಾಗಲೂ ಪ್ರಾಮಾಣಿಕತೆಯೊಂದಿಗೆ ಗೆಲುತ್ತೇವೆ. ನೀವು ವಿಷಯವನ್ನು ಚರ್ಚಿಸಲು ಬಯಸುವುದಿಲ್ಲ ಎಂದು ಸಂಭಾಷಣೆಯನ್ನು ಕೊನೆಗೊಳಿಸಿ ತಕ್ಷಣವೇ ಕಾನೂನು ವಿಭಾಗವನ್ನು ಸಂಪರ್ಕಿಸಿ.

**ಇತರರ ಹಕ್ಕುಗಳನ್ನು ಗೌರವಿಸುವುದು.** *ಇತ್ತೀಚೆಗೆ, ನಮ್ಮ ಉತ್ಪನ್ನ ಅಭಿವೃದ್ಧಿ ತಂಡವು ಪ್ರತಿಸ್ಪರ್ಧಿ ಪರಿಚಯಿಸಿದ ಹೊಸ ಉತ್ಪನ್ನದ ವೈಶಿಷ್ಟ್ಯಗಳನ್ನು ನಕಲು ಮಾಡಲು ಯೋಜಿಸುತ್ತಿದೆ ಎಂದು ನಿಮಗೆ ತಿಳಿದಿದೆ. ನಕಲು ಮಾಡುವುದು ಯಾವಾಗಲೂ ಕೆಟ್ಟದ್ದಲ್ಲ ಎಂದು ನಿಮಗೆ ತಿಳಿದಿದ್ದರೂ, ಹೊಸ ಉತ್ಪನ್ನ ಯೋಜನೆಗಳ ಬಗ್ಗೆ ಕಾನೂನು ವಿಭಾಗಕ್ಕೆ ತಿಳಿದಿದೆ ಎಂದು ಖಚಿತಪಡಿಸಿಕೊಳ್ಳಿ. ಇದರಿಂದಾಗಿ, ನಾವು ಒಂದೇ ರೀತಿಯ ವೈಶಿಷ್ಟ್ಯಗಳನ್ನು ನೀಡಲು ಸಾಧ್ಯವಿಲ್ಲ ಎಂದು ತಿಳಿದಿದ್ದರೂ, ಪ್ರತಿಸ್ಪರ್ಧಿಯ ಯಾವುದೇ ಪೇಟೆಂಟ್‌ಗಳನ್ನು ಉಲ್ಲಂಘಿಸುವುದನ್ನು ತಪ್ಪಿಸಬಹುದು. ಸರಿಯಾದ ವಿಷಯ?* ಖಂಡಿತ. ನಾವು  ಪೇಟೆಂಟ್‌ಗಳು, ಟ್ರೇಡ್‌ಮಾರ್ಕ್‌ಗಳು, ಕಾಪಿರೈಟ್‌ಗಳು ಮತ್ತು ವ್ಯಾಪಾರದ ರಹಸ್ಯಗಳು ಸೇರಿದಂತೆ, ಬೇರೆಯವರ ಮಾನ್ಯವಾಗಿರುವ ಮತ್ತು ಜಾರಿಗೊಳಿಸಬಹುದಾದ ಬೌದ್ಧಿಕ ಆಸ್ತಿ ಹಕ್ಕುಗಳನ್ನು ನಾವು ಗೌರವಿಸುತ್ತೇವೆ. ಹೊಸ ಉತ್ಪನ್ನಗಳು, ಹೊಸ ಉತ್ಪನ್ನದ ವೈಶಿಷ್ಟ್ಯಗಳು ಮತ್ತು ಹೊಸ ಬ್ರಾಂಡ್‌ಗಳನ್ನು ಪರಿಚಯಿಸುವಾಗ ಕಾನೂನು ವಿಭಾಗವನ್ನು ಸೇರಿಸಿಕೊಳ್ಳಲು ಮರೆಯದಿರಿ.

## ಎಚ್ಚರಿಕೆ.

**ಸ್ಪರ್ಧಾತ್ಮಕ ಮಾಹಿತಿಯನ್ನು ಸಂಗ್ರಹಿಸುವುದು.** *ನೀವು ಉತ್ಪನ್ನ ಬಿಡುಗಡೆಗಾಗಿ ಕೆಲವು ಸ್ಪರ್ಧಾತ್ಮಕ ಬುದ್ಧಿವಂತಿಕೆಯ ಮಾಹಿತಿಯನ್ನು ಸಂಗ್ರಹಿಸಬೇಕಾಗಿದೆ. ಅದು ಸರಿಯೇ?* ಹೌದು, ಸ್ಪರ್ಧಾತ್ಮಕ ಮಾಹಿತಿಯನ್ನು ಸಂಗ್ರಹಿಸುವುದನ್ನು ಪ್ರೋತ್ಸಾಹಿಸಲಾಗುತ್ತದೆ ಆದರೆ, ಅದನ್ನು ಸರಿಯಾದ ರೀತಿಯಲ್ಲಿ ಮಾಡುವುದು ಮುಖ್ಯ. ಸಾರ್ವಜನಿಕ ಮೂಲಗಳಿಂದ ಪ್ರಾಮಾಣಿಕವಾಗಿ ನೀವು ಪಡೆದ ವಿಧಾನಗಳು ಮತ್ತು ದಾಖಲೆಗಳನ್ನು ಮಾತ್ರ ಬಳಸಬೇಕೆಂಬುದನ್ನು ಮರೆಯದಿರಿ.

**ಪ್ರತಿಸ್ಪರ್ಧಿಗಳಿಂದ ನೇಮಕ ಮಾಡುವುದು.** *ನಿಮ್ಮ ತಂಡದಲ್ಲಿ ಒಂದು ಉದ್ಯೋಗಾವಕಾಶ ವಿದೆ ಮತ್ತು ನಿಮ್ಮ ಪ್ರತಿಸ್ಪರ್ಧಿಯ ಉದ್ಯಮದಲ್ಲಿ ಉತ್ತಮ ಅನುಭವವನ್ನು ಹೊಂದಿರುವ ಅಭ್ಯರ್ಥಿಯು ಲಭ್ಯವಿದ್ದಾರೆ. ನೇಮಿಸಿಕೊಳ್ಳುವುದು ಸರಿಯೇ?* ಬಹುಶಃ ಇರಬಹುದು. ವಿವಿಧ ವ್ಯವಹಾರ ಅಥವಾ ತಾಂತ್ರಿಕ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಅನುಭವ ಹೊಂದಿರುವ ವ್ಯಕ್ತಿಗಳನ್ನು ನಾವು ನೇಮಿಸಿಕೊಳ್ಳಬಹುದಾದರೂ, ವ್ಯಾಪಾರ ರಹಸ್ಯಗಳು ಮತ್ತು ಇತರರ ಸೂಕ್ಷ್ಮ ಮಾಹಿತಿಯನ್ನು ಪಡೆಯುವ ಸಾಧನವಾಗಿ ಅವರು ಕೆಲಸ ಪಡೆಯುವ ಸಾಧ್ಯತೆ ಇರುವುದರಿಂದ ನಾವು ಜನರನ್ನು ನೇಮಿಸುವುದಿಲ್ಲ. ಅಪಾಯವನ್ನು ಅರ್ಥಮಾಡಿಕೊಳ್ಳಲು ಮಾನವ ಸಂಪನ್ಮೂಲ ಅಥವಾ ಕಾನೂನು ವಿಭಾಗದೊಂದಿಗೆ ಕೆಲಸ ಮಾಡಿ ಹಾಗೂ ತಂಡದ ಸದಸ್ಯರು ತಮ್ಮ ಹಿಂದಿನ ಉದ್ಯೋಗದಾತರ ಗೌಪ್ಯ ಮಾಹಿತಿಯನ್ನು ಬಹಿರಂಗಪಡಿಸುವುದಿಲ್ಲವೆಂದು ಖಚಿತಪಡಿಸಿಕೊಳ್ಳುವ ಅಗತ್ಯ ಸುರಕ್ಷತಾ ಕ್ರಮಗಳನ್ನು ಇರಿಸಿಕೊಳ್ಳಿ.

## ತಪ್ಪು ಮಾರ್ಗ.

**ಸ್ಪರ್ಧಾತ್ಮಕವಾಗಿ ಸೂಕ್ಷ್ಮ ಮಾಹಿತಿಯ ರಕ್ಷಣೆ.** *ನೀವು, ಪ್ರತಿಸ್ಪರ್ಧಿಯೊಂದಿಗೆ ಕೆಲಸ ಮಾಡುವ ಸ್ನೇಹಿತನೊಂದಿಗೆ ರಾತ್ರಿ ಊಟಕ್ಕೆ ತೆರಳುತ್ತೀರಿ. ನೀವು ಇಬ್ಬರೂ ನಿಮ್ಮ ಮಾರಾಟದ ಗುರಿಗಳನ್ನು ತಲುಪಲು ಸಾಧ್ಯವಾಗುವಂತೆ ಅವರು ನಿಮಗೆ ಕಾರ್ಯನೀತಿಗಳನ್ನು ಹಂಚಿಕೊಳ್ಳುವ ಸಲಹೆ ನೀಡುತ್ತಾರೆ. ಸ್ನೇಹಿತರಿಗಾಗಿ ಏನು ಬೇಕಾದರೂ ಮಾಡಬಹುದು, ಸರಿಯೇ?* ಇಲ್ಲ. ನಾವು ಸ್ಪರ್ಧಾತ್ಮಕವಾಗಿ ಸೂಕ್ಷ್ಮ ಮಾಹಿತಿಯನ್ನು ರಕ್ಷಿಸುತ್ತೇವೆ ಮತ್ತು ಅನುಮತಿ ಹಾಗೂ ಸರಿಯಾದ ಸುರಕ್ಷತೆಗಳಿಲ್ಲದೆ ಅದನ್ನು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ನಾನು ಯಾವ ರೀತಿಯ ಸಂಭಾಷಣೆಗಳನ್ನು ತಪ್ಪಿಸಬೇಕು?

ನಿಮ್ಮ ಸ್ಪರ್ಧಿಗಳೊಡನೆ ನಿಮ್ಮ ಮಾತುಕತೆಯು ಕಡಿಮೆ ಇರಲಿ ಮತ್ತು ಸಾಮಾನ್ಯ ವಿಷಯಗಳನ್ನು ಅಂದರೆ ಹವಾಮಾನ, ಕ್ರೀಡೆ ಇತ್ಯಾದಿ ಮಾತನಾಡಿ. ವ್ಯವಹಾರವಲ್ಲ. ಅವರು ಬೆಲೆ, ಉತ್ಪಾದನೆ, ಮಾರ್ಕೆಟಿಂಗ್, ದಾಸ್ತಾನುಗಳು, ಉತ್ಪನ್ನ ಅಭಿವೃದ್ಧಿ, ಮಾರಾಟ ಪ್ರದೇಶಗಳು, ಗುರಿಗಳು ಅಥವಾ ಇತರ ಸ್ವಾಮ್ಯದ ಅಥವಾ ಗೌಪ್ಯ ಮಾಹಿತಿಯನ್ನು ಪ್ರಸ್ತಾಪಿಸಿದರೆ, ಆ ಕೂಡಲೇ ಸಂಭಾಷಣೆಯನ್ನು ಕೊನೆಗೊಳಿಸಿ ಮತ್ತು ಹೊರನಡೆಯಿರಿ.

## ದಿ ಗ್ಯಾರೇಜ್



# ಹಿತಾಸಕ್ತಿಯ ಸಂಘರ್ಷಗಳನ್ನು ತಪ್ಪಿಸುವುದು

## ತಲುಪಬೇಕಾದ ಗುರಿ

ಪ್ರಭಾವವನ್ನು ತಪ್ಪಿಸುವುದು (ಅಥವಾ ಅದರ ಗ್ರಹಿಕೆಯನ್ನುಕೂಡ).

## ನಾವು ಅದನ್ನು ಹೇಗೆ ಸಾಧಿಸುವುದು

ನಾವೆಲ್ಲರೂ ನಮ್ಮ ಉದ್ಯೋಗದ ಹೊರಗೆ ಆಸಕ್ತಿಗಳು ಮತ್ತು ಸಂಬಂಧಗಳನ್ನು ಹೊಂದಿದ್ದೇವೆ. ಅದನ್ನು ಎದುರಿಸೋಣ. ಆದರೆ, ಈ ವೈಯಕ್ತಿಕ ಆಸಕ್ತಿಗಳು ನಮ್ಮ ವ್ಯವಹಾರದ ನಿರ್ಧಾರಗಳ ಮೇಲೆ ಪರಿಣಾಮ ಬೀರಿದರೆ, ಅದು ಹಾನಿಕಾರಕವಾಗಬಹುದು. ಇದನ್ನು ನಾವು ಹಿತಾಸಕ್ತಿಯ ಸಂಘರ್ಷ ಎಂದು ಕರೆಯುತ್ತೇವೆ. ಹಿತಾಸಕ್ತಿಯ ಸಂಘರ್ಷವು ನಿಮ್ಮ ಖ್ಯಾತಿ ಮತ್ತು ಕಂಪನಿಗೆ ಮಾರಕವಾಗಬಹುದು.

ತಂಡವಾಗಿಯೇ ಮುನ್ನಡೆಯಲು ನಾವು ತಂಡವಾಗಿ ಕೆಲಸ ಮಾಡಬೇಕು. ಸಂಘರ್ಷಗಳನ್ನು ದೂರ ಮಾಡಲು ನಾವು ಪ್ರತಿಯೊಬ್ಬರೂ ನಮ್ಮ ಭಾಗದ ಕೆಲಸವನ್ನು ಮಾಡೋಣ ಮತ್ತು Tennecoದ ಅತ್ಯುತ್ತಮ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡೇ ಯಾವಾಗಲೂ ಕಾರ್ಯನಿರ್ವಹಿಸೋಣ. ನಾವು ವಸ್ತುನಿಷ್ಠ ಮತ್ತು ಪ್ರಭಾವರಹಿತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ಹಿತಾಸಕ್ತಿಯ ಸಂಘರ್ಷಣೆ ಎಂದರೆ ಯಾವುದು ಮತ್ತು ಅವು ಸಾಮಾನ್ಯವಾಗಿ ಹೇಗೆ ಉದ್ಭವಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದೇ ಅವುಗಳನ್ನು ತಪ್ಪಿಸುವ ಕೀಲಿ ಕೈ ಆಗಿದೆ. ನಿಮ್ಮ ನಿರ್ಧಾರವು ಪ್ರಭಾವಿತವಾಗುತ್ತಿರುವಂತೆ ಕಾಣುವ ಎಲ್ಲವನ್ನೂ ತಪ್ಪಿಸುವುದು ಉತ್ತಮ.

### ನೈತಿಕ ವರ್ತನೆಗೆ ಮಾದರಿ.

**ಸಂಘರ್ಷವನ್ನು ಗುರುತಿಸುವುದು.** *ನಿಮ್ಮ ಸೋದರ ಅಳಿಯ/ಸೊಸೆ ನಿಮ್ಮ ಸಹಾಯಕಿಯಾಗಿ ಕೆಲಸ ಮಾಡಲು ಬಯಸುತ್ತಾರೆ. ಅವರು ಅರ್ಹತೆಯನ್ನು ಹೊಂದಿದ್ದಾರೆಂದು ನಿಮಗೆ ತಿಳಿದಿದ್ದರೂ ಅದು ನಿಮ್ಮನ್ನು ಪಕ್ಷಪಾತಿಯೆಂದು ತೋರಿಸುತ್ತದೆ ಎಂದು ತಿಳಿ ಹೇಳಿ – ಇದು ತಂಡದ ದೃಷ್ಟಿಯಿಂದ ಸರಿಯಾದುದಲ್ಲ. ನೀವು ಬದಲಿಗೆ ಇತರ ವಿಭಾಗಗಳಲ್ಲಿನ ಹುದ್ದೆಗಳನ್ನು ಸೂಚಿಸುತ್ತೀರಿ. ಸರಿಯಾದ ಪ್ರತಿಕ್ರಿಯೆಯೇ?* ಹೌದು. ಸಂಭಾವ್ಯ ಸಂಘರ್ಷಣೆಗಳನ್ನು ಗುರುತಿಸುವುದು ಮುಖ್ಯ ಮತ್ತು ಸಂಬಂಧಿಗಳ ಕೆಲಸದ ಮೇಲ್ವಿಚಾರಣೆ ಮಾಡುವುದು ಮತ್ತು ಅವರೊಂದಿಗೆ ವ್ಯವಹಾರ ಮಾಡುವುದು ಈ ವರ್ಗದ ಅಡಿಯಲ್ಲಿ ಬರುತ್ತದೆ.



## ಎಚ್ಚರಿಕೆ.

**ಸಂಘರ್ಷಗಳನ್ನು ಬಹಿರಂಗಪಡಿಸುವುದು.** *ನಿಮ್ಮ ಪ್ರತಿಸ್ಪರ್ಧಿಯು ನಿಮ್ಮ ಪತ್ನಿಯು ಅವರಲ್ಲಿ ಒಂದು ಹುದ್ದೆಯನ್ನು ಒಪ್ಪಿಕೊಂಡಿದ್ದಾರೆ ಎಂದು ಇದೀಗ ಘೋಷಿಸಿದ್ದಾರೆ. ಇದು ಸಂಭ್ರಮಾಚರಣೆಯ ಸಮಯ, ಸರಿಯೇ?* ಬಹುತೇಕ ಹೌದು. ಇದು ಸಂಭಾವ್ಯ ಸಂಘರ್ಷಣೆಯಾಗಬಹುದು. ಆ ಸಂಭ್ರಮಾಚರಣೆಯ ಊಟವನ್ನುನೀವು ಪಡೆದುಕೊಳ್ಳುವ ಮೊದಲೇ ನೀವು ಕಂಪನಿಗೆ ಅವರ ಹೊಸ ಹುದ್ದೆಯನ್ನು ಬಹಿರಂಗಪಡಿಸುವುದನ್ನು ಖಚಿತಪಡಿಸಿಕೊಳ್ಳಿ.

## ತಪ್ಪು ಮಾರ್ಗ.

**ಸಂಘರ್ಷಗಳನ್ನು ಬಹಿರಂಗಪಡಿಸದೇ ಇರುವುದು.** *ನಿಮ್ಮ ವ್ಯವಸ್ಥಾಪಕರು ನಮ್ಮ ಒಬ್ಬ ಪೂರೈಕೆದಾರರ ನಿರ್ದೇಶಕ ಮಂಡಳಿಯಲ್ಲಿದ್ದಾರೆ ಎಂದು ನೀವು ತಿಳಿದುಕೊಳ್ಳುತ್ತೀರಿ. ಇದರ ಬಗ್ಗೆ ನೀವು ನಿಮ್ಮ ವ್ಯವಸ್ಥಾಪಕರನ್ನು ಕೇಳಿದರೆ, ನೀವೇನು ಚಿಂತಿಸಬೇಕಾಗಿಲ್ಲ ಎಂದು ಅವರು ಹೇಳುತ್ತಾರೆ. ನೀವು ಏನಾದರೂ ಹೇಳಬೇಕೇ?* ಹೌದು. ನೀವು ನಿಮ್ಮ ವ್ಯವಸ್ಥಾಪಕರಿಗೆ ಹಿತಾಸಕ್ತಿಯ ಸಂಘರ್ಷದ ಪತ್ರವನ್ನು ಭರ್ತಿ ಮಾಡಿ ಮಾನವ ಸಂಪನ್ಮೂಲ ವಿಭಾಗಕ್ಕೆ ನೀಡಲು ನೆನಪಿಸಬಹುದು. ನಿಯಂತ್ರಣಗಳು ಬೇಕಾಗಬಹುದು. ಉದಾಹರಣೆಗೆ, ನಿಮ್ಮ ವ್ಯವಸ್ಥಾಪಕರು ಪೂರೈಕೆದಾರರಿಗೆ ಬಿಡ್ಡಿಂಗ್, ಆಯ್ಕೆ ಅಥವಾ ಪಾವತಿ ಪ್ರಕ್ರಿಯೆಯಲ್ಲಿ ಭಾಗಿಯಾಗಬಾರದು.



## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### "ಹಿತಾಸಕ್ತಿ ಸಂಘರ್ಷ" ಹೇಗಿರುತ್ತದೆ?

ಇಲ್ಲಿ ಸಂಭವಿಸಬಹುದಾದ ಅನೇಕ ಸನ್ನಿವೇಶಗಳಿವೆ, ಆದರೆ ಅದಕ್ಕೆ ಕೆಲವು ಉದಾಹರಣೆಗಳಿವೆ:

- ಪ್ರತಿಸ್ಪರ್ಧಿಗಾಗಿ ಕೆಲಸ ಮಾಡುವುದು
- ಉಡುಗೊರೆ, ಮನರಂಜನೆ ಅಥವಾ ಸರಬರಾಜುದಾರರಿಂದ ಪ್ರಯಾಣ
- ನಮ್ಮ ವೆಂಡಾರ್ ಒಬ್ಬರೊಂದಿಗೆ ಆರ್ಥಿಕ ಹೂಡಿಕೆ
- ಸ್ನೇಹಿತ ಅಥವಾ ಪ್ರೀತಿಪಾತ್ರರೊಂದಿಗೆ ನೇರ ಅಥವಾ ಪರೋಕ್ಷವಾಗಿ ವರದಿ ಮಾಡುವಂತಹ ಸಂಬಂಧ
- "ಪಕ್ಕದಿಂದ" ಗ್ರಾಹಕರಿಗಾಗಿ ಸಲಹೆ (ಕನ್ಸಲ್ಟಿಂಗ್) ಕೆಲಸ ಮಾಡುವುದು
- ನಿಮ್ಮ ಸಂಬಂಧಿಯೊಬ್ಬರು, ಗ್ರಾಹಕರ ಅಥವಾ ಸರಬರಾಜುದಾರಿಗೆ ಕೆಲಸ ಮಾಡುತ್ತಾರೆ ಅಥವಾ ಅವರ ನಿರ್ದೇಶಕ ಮಂಡಳಿಯಲ್ಲಿದ್ದಾರೆ

## ದಿ ಗ್ಯಾರೇಜ್

# ಉಡುಗೊರೆಗಳು, ಮನರಂಜನೆ, ಮತ್ತು ಆತಿಥ್ಯವನ್ನು ವಿನಿಮಯ ಮಾಡಿಕೊಳ್ಳುವುದು

## ತಲುಪಬೇಕಾದ ಗುರಿ

ಅನುಚಿತವಾದ ಯಾವುದನ್ನೂ ನೀಡುವಂತಿಲ್ಲ ಮತ್ತು ಸ್ವೀಕರಿಸುವಂತಿಲ್ಲ.

## ನಾವು ಅದನ್ನು ಹೇಗೆ ಸಾಧಿಸುವುದು

ಸಾಂದರ್ಭಿಕ ಉಡುಗೊರೆ ಅಥವಾ ಮನರಂಜನೆ ಅಥವಾ ಆತಿಥ್ಯದ ಪ್ರಸ್ತಾಪವು ವ್ಯವಹಾರದ ಸಾಮಾನ್ಯ ರೂಪವಾಗಿದೆ. ಆದರೆ, ಕೆಲವು ಬಾರಿ ಉಡುಗೊರೆ ಅಥವಾ ಇತರ ಕೊಡುಗೆಗಳು ನಿರ್ದಿಷ್ಟ ಗಡಿ ದಾಟುತ್ತವೆ. ಕೆಳಗಿನ ರೀತಿಯ ಪ್ರಸ್ತಾಪವನ್ನು ಎಂದಿಗೂ ನೀಡಬೇಡಿ ಅಥವಾ ಸ್ವೀಕರಿಸಬೇಡಿ:

- ಪ್ರತಿಯಾಗಿ ಒಂದು ಬಾಧ್ಯತೆಯನ್ನು ರಚಿಸುತ್ತದೆ ಅಥವಾ ಸಹಾಯ ಪಡೆಯಲು ಕೊಡಲಾಗಿರುತ್ತದೆ
- ಉಡುಗೊರೆಯು ನಗದು ಅಥವಾ ಹಣದ ಕಾರ್ಡ್‌ನಂತಹ ರೂಪದಲ್ಲಿ ಬರುತ್ತದೆ
- ಇದು ಅನೇಕ ಸಂದರ್ಭಗಳಲ್ಲಿ ವಿಪರೀತವಾದಂತೆ ತೋರುತ್ತದೆ ಅಥವಾ ನೀವು ಪ್ರಭಾವಿತರಾಗಿದ್ದೀರಿ ಎಂದು ಇತರರು ಭಾವಿಸುವುಂತೆ ಮಾಡುತ್ತದೆ

ಪ್ರಸ್ತಾಪವು ಯಾವಾಗ ಸೂಕ್ತವಾಗಿದೆ ಎಂದು ತಿಳಿಯುವುದು ಕೆಲವೊಮ್ಮೆ ಕಷ್ಟವಾಗಿರುತ್ತದೆ. ಅದಕ್ಕಾಗಿಯೇ ನಾವು ಮಾರ್ಗಸೂಚಿಗಳನ್ನು ಹೊಂದಿದ್ದೇವೆ. ನೀವು ನಿಯಮಗಳನ್ನು ಪಾಲಿಸುತ್ತೀರಿ ಮತ್ತು ವಿಶೇಷ ನಿರ್ಬಂಧಗಳ ಬಗ್ಗೆ ತಿಳಿದಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ. ಉದಾಹರಣೆಗೆ, ಸರ್ಕಾರಿ ಅಧಿಕಾರಿಗೆ ***ಯಾವುದೇ*** ರೀತಿಯ ಮೌಲ್ಯಯುತವಾದದ್ದನ್ನು ನೀಡುವುದನ್ನು ಕಾನೂನುಬಾಹಿರ ಲಂಚವೆಂದು ನೋಡಬಹುದು, ಆದ್ದರಿಂದ ಇದಕ್ಕೆ ಕಾನೂನು ವಿಭಾಗದ ಅನುಮೋದನೆ ಅಗತ್ಯವಿದೆ. ಕೆಲಸಕ್ಕೆ ಸರಿಯಾದ ಸ್ಪಷ್ಟತೆ ಇಲ್ಲದಿದ್ದರೆ, ಯಾವಾಗಲೂ ಸಹಾಯವನ್ನು ಕೇಳಿ. ನೀವು ಉಡುಗೊರೆಯನ್ನು ಸ್ವೀಕರಿಸಿದರೆ, ಅದನ್ನು ವರದಿ ಮಾಡಬೇಕು.

### ನೈತಿಕ ವರ್ತನೆಗೆ ಮಾದರಿ.

“ಇಲ್ಲ” ಎಂದು ಹೇಳುವುದು. *ನೀವು ಗ್ರಾಹಕರಿಂದ ನಿಮಗಾಗಿ ಮತ್ತು ನಿಮ್ಮ ಸಂಗಾತಿಗಾಗಿ ಫಿಫಾ ಸಾಕರ್ ವಿಶ್ವಕಪ್ ಟಿಕೆಟ್ ಗಳನ್ನು ಸ್ವೀಕರಿಸುತ್ತೀರಿ. ನೀವು ಸ್ವೀಕರಿಸಲು ಸಾಧ್ಯವಿಲ್ಲ ಎಂದು ನಿಮಗೆ ತಿಳಿದಿದೆ, ಆದ್ದರಿಂದ ನೀವು ಅದನ್ನು ಹಿಂತಿರುಗಿಸುತ್ತೀರಿ ಮತ್ತು ನಮ್ಮ ನೀತಿಯನ್ನು ನಯವಾಗಿ ವಿವರಿಸುತ್ತೀರಿ. ಬುದ್ಧಿವಂತ ವರ್ತನೆಯೆಲ್ಲವೇ?* ಹೌದು. ಸೂಕ್ತ ನಿರ್ಧಾರ, ಪ್ರಾಮಾಣಿಕತೆಯೊಂದಿಗೆ ಸದಾ ಕಾರ್ಯನಿರ್ವಹಿಸಿ ಮತ್ತು ನೀವು ಅನುಚಿತವೆಂದು ನಂಬುವ ಅಥವಾ ತಿಳಿದಿರುವ ಯಾವುದೇ ಪ್ರಸ್ತಾಪವನ್ನೂ ತಿರಸ್ಕರಿಸಿ.

### ಎಚ್ಚರಿಕೆ.

ಅವರ ನೀತಿಗಳನ್ನು ಗೌರವಿಸುವುದು. *ಬರುತ್ತಿರುವ ರಜಾದಿನಗಳಲ್ಲಿ ನೀವು ಗ್ರಾಹಕರಿಗೆ $50 (3500 INR)ರ ಗಿಫ್ಟ್ ಬಾಸ್ಕೆಟ್ ಕಳುಹಿಸಲು ಬಯಸುತ್ತೀರಿ. ಇದು ಸರಿಯಿರಬೇಕಲ್ಲವೇ?* ಇದು ಸಂದರ್ಭವನ್ನು ಅವಲಂಬಿಸಿರುತ್ತದೆ. ಕೆಲವೊಮ್ಮೆ ಗ್ರಾಹಕರು ಕಟ್ಟುನಿಟ್ಟಾದ ನಿಯಮಗಳನ್ನು ಹೊಂದಿರುತ್ತಾರೆ ಮತ್ತು ಉಡುಗೊರೆಗಳನ್ನು ಒಪ್ಪುವುದಿಲ್ಲ. ನಿಮ್ಮ ಉಡುಗೊರೆಯಿಂದಾಗಿ ನಿಮ್ಮ ಗ್ರಾಹಕರು ಅನಾನುಕೂಲತೆ ಅನುಭವಿಸುವುದು ಮತ್ತು ತೊಂದರೆಯಲ್ಲಿ ಸಿಲುಕುವುದು ನಿಮಗೆ ಇಷ್ಟವಿಲ್ಲ. ಜೊತೆಗೆ ನಮ್ಮ ಒಪ್ಪಂದಗಳ ಪ್ರಕಾರ ಸಾಮಾನ್ಯವಾಗಿ ಅವರ ನಿಯಮಗಳನ್ನು ಗೌರವಿಸಬೇಕಾಗುತ್ತದೆ. ಇಂತಹ ನಿದರ್ಶನಗಳಲ್ಲಿ, ರಜಾದಿನಗಳಲ್ಲಿ ನಿಮ್ಮ ಸಂಬಂಧವನ್ನು ಗಟ್ಟಿಯಾಗಿಟ್ಟುಕೊಳ್ಳಲು, ಹಬ್ಬಗಳಲ್ಲಿ ಇ-ಮೇಲ್ ಕಳುಹಿಸುವ ರೀತಿಯ ಬೇರಾವುದಾದರೂ ಮಾರ್ಗವನ್ನು ಕಂಡುಕೊಳ್ಳಿ.

## ತಪ್ಪು ಮಾರ್ಗ.

ಸರ್ಕಾರಿ ಅಧಿಕಾರಿಗಳಿಗೆ ನೀಡುವುದು. *ನೀವು ವ್ಯಾಪಾರದ ಪ್ರದರ್ಶನದ ನಂತರ ಸರ್ಕಾರಿ ಅಧಿಕಾರಿಯತ್ತ ದೌಡಾಯಿಸುತ್ತೀರಿ. ನೀವಿಬ್ಬರೂ ಲಾಸ್ ವೇಗಾಸ್ ನಗರದ ಮೇಲಿನ ನಿಮ್ಮ ಪ್ರೀತಿಯ ಬಗ್ಗೆ ಮಾತನಾಡಲು ಪ್ರಾರಂಭಿಸುತ್ತೀರಿ ಮತ್ತು ಆ ಉತ್ಸಾಹದಲ್ಲಿ, ವಾರಾಂತ್ಯದ ಪ್ರವಾಸಕ್ಕೆ ನಮ್ಮ ಕಂಪನಿ ಅವರನ್ನು ಕಳುಹಿಸಲು ಸಿದ್ಧರಿರಬಹುದು ಎಂದು ನೀವು ಸೂಚಿಸುತ್ತೀರಿ. ಇದು, ನಮ್ಮ ಪ್ರತಿಸ್ಪರ್ಧಿಗಳಿಂದ ಭಿನ್ನವಾಗಿ ಕಾಣಲು ಸಹಾಯ ಮಾಡುತ್ತದೆ, ಸರಿಯೇ?* ಹೌದು, ಆದರೆ ಇದು ಸರಿಯಾದ ಮಾರ್ಗವಲ್ಲ. ಸರ್ಕಾರಿ ಅಧಿಕಾರಿಗಳಿಗೆ ಉಡುಗೊರೆ ಕೊಡುವುದರ ಬಗ್ಗೆ ಕಟ್ಟುನಿಟ್ಟಿನ ನಿಯಮಗಳಿವೆ, ಮತ್ತು ಇದು ಸಾಕಷ್ಟು ಅದ್ದೂರಿ ಕೊಡುಗೆಯಾಗಿದೆ. ನೀವು ಈ ಕೂಡಲೇ ಕಾನೂನು ವಿಭಾಗದ ಯಾರೊಂದಿಗಾದರೂ ಮಾತನಾಡಬೇಕು. ಇದರಿಂದಾಗಿ, ನಾವು ತಕ್ಷಣವೇ ಸರಿಪಡಿಸಲು ಕ್ರಮವನ್ನು ತೆಗೆದುಕೊಳ್ಳಬಹುದು.



## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಯಾವ ರೀತಿಯ ಉಡುಗೊರೆಗಳು ಸ್ವೀಕಾರಾರ್ಹ?

ನೀಡಲಾದ ಅಥವಾ ಸ್ವೀಕರಿಸಲಾದ ಉಡುಗೊರೆಗಳು ಅಥವಾ ಮನರಂಜನೆಯು:

- ಕಾನುನುಬದ್ಧವಾಗಿ ಸ್ವಿಕಾರಾರ್ಹವಾಗಿರಬೇಕು
- ನಿಖರವಾಗಿ ದಾಖಲಾಗಿರಬೇಕು
- ಅದು ವಿರಳವಾಗಿ ಮತ್ತು ಕಡಿಮೆ ಮೌಲ್ಯದ್ದಾಗಿರಬೇಕು
- ಸಮಂಜಸವಾದ ವ್ಯವಹಾರ ಉದ್ದೇಶವನ್ನು ಹೊಂದಿರಬೇಕು
- ಉದ್ಯಮ ಮತ್ತು ಸ್ಥಳದ ಆಧಾರದ ಮೇಲೆ ಸ್ವೀಕಾರಾರ್ಹವಾದವುಗಳಿಗೆ ಅನುಗುಣವಾಗಿರಬೇಕು
- ನೀಡುವವರು ಮತ್ತು ಸ್ವೀಕರಿಸುವವರ ನೀತಿಗಳನ್ನು ಗೌರವಿಸಬೇಕು
- Tenneco ಅನ್ನು ಎಂದಿಗೂ ಕಳಪೆಯಾಗಿ ಬಿಂಬಿಸಬಾರದು ಅಥವಾ ಮುಜುಗರಕ್ಕೆ ಈಡು ಮಾಡಬಾರದು
- ಎಂದಿಗೂ ನಗದು, ಉಡುಗೊರೆ ಕಾರ್ಡ್, ಚೆಕ್, ಸಾಲ ಅಥವಾ ಸ್ಟಾಕ್ ಆಗಿರಬಾರದು
- ನಿಮ್ಮನ್ನು ಅಥವಾ Tennecoವನ್ನು ಎಂದಿಗೂ ರಾಜಿಯಾಗುವ ಸನ್ನಿವೇಶಕ್ಕೆ ಒಳಪಡಿಸಬಾರದು

## ದಿ ಗ್ಯಾರೇಜ್

# ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ಮಾಡುವುದು

## ತಲುಪಬೇಕಾದ ಗುರಿ

ನಮ್ಮ ಉತ್ಪನ್ನಗಳು ಮತ್ತು ನಮ್ಮ ಜನರು ಪ್ರಪಂಚದಾದ್ಯಂತ ಓಡಾಟ ನಡೆಸುತ್ತಿರುವುದರಿಂದ ಗೌರವವನ್ನು ಪಡೆಯುತ್ತಿದ್ದೇವೆ.

## ನಾವು ಅದನ್ನು ಹೇಗೆ ಸಾಧಿಸುವುದು

ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹರಿಸುವುದು ಒಂದು ಉತ್ತಮ ಸವಲತ್ತು. ಇದು, ನಮ್ಮ ವ್ಯವಹಾರಕ್ಕೆ ಹಲವು ಉತ್ತೇಜಕ ಮಾರ್ಗಗಳನ್ನು ಒದಗಿಸುವುದಲ್ಲದೇ ನಮ್ಮ ಗ್ರಾಹಕರಿಗೆ ಹೊಸ ಕೊಡುಗೆಗಳನ್ನು ನೀಡುತ್ತದೆ. ಆಮದು, ರಫ್ತು ಮತ್ತು ವ್ಯಾಪಾರ ಅನುಸರಣೆ ಕಾನೂನುಗಳನ್ನು ಅನುಸರಿಸುವ ಮೂಲಕ ಅನುಕೂಲಗಳನ್ನು ಕಾಪಾಡಿಕೊಳ್ಳಲು ನಾವು ಯಾವಾಗಲೂ ಶ್ರಮಿಸುತ್ತೇವೆ.

ನಾವೆಲ್ಲರೂ ಅಗತ್ಯವಿರುವುದರಲ್ಲಿ ಗಮನಹರಿಸಿ ಮತ್ತು ನಮ್ಮ ಗ್ರಾಹಕರಿಗೆ ಉತ್ತಮವಾದದ್ದನ್ನು ಒದಗಿಸಲು ನಮ್ಮ ಭಾಗದ ಕೆಲಸವನ್ನು ಸರಿಯಾಗಿ ನಿರ್ವಹಿಸೋಣ. ಒಂದು ಕೆಟ್ಟ ನಿರ್ಧಾರ ಅಥವಾ ಒಂದು ತಪ್ಪಿನಿಂದಾಗಿ ನಾವು ಜಗತ್ತಿನಾದ್ಯಂತ ಉತ್ಪನ್ನಗಳನ್ನು ವಿತರಿಸುವ ಅವಕಾಶವನ್ನು ಕಳೆದುಕೊಳ್ಳಬಹುದು.

### ನೈತಿಕ ವರ್ತನೆಗೆ ಮಾದರಿ.

**ಅಂತಾರಾಷ್ಟ್ರೀಯ ನಿಯಮಗಳನ್ನು ಗೌರವಿಸುವುದು.** *ನೀವು ಹೊಸದೊಂದು ದೇಶಕ್ಕೆ ಮಾರಾಟ ಮಾಡಲು ಬಯಸುತ್ತೀರಿ, ಆದರೆ ಆ ದೇಶದ ಕಾನೂನುಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿರುತ್ತದೆ. ಸಹಾಯಕ್ಕಾಗಿ ನೀವು ಕಾನೂನು ವಿಭಾಗವನ್ನು ಸಂಪರ್ಕಿಸಿ. ಸರಿಯಾದ ಆಯ್ಕೆಯೇ?* ಖಂಡಿತವಾಗಿ. ವಿಶೇಷವಾಗಿ, ನೀವು ಅನೇಕ ರೀತಿಯ ನಿಯಮಗಳನ್ನು ಅನುಸರಿಸಬೇಕೆಂದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ನೀವು ವ್ಯವಹರಿಸುವುದು ಸಂಕೀರ್ಣವಾಗಬಹುದು. ನಮ್ಮ ಉತ್ಪನ್ನಗಳು, ಲೇಬಲಿಂಗ್ ಮತ್ತು ಕಾರ್ಯಾಚರಣೆಗಳು ಸರಿಯಾದ ಮಾರ್ಗದಲ್ಲಿವೆಯೇ ಎಂದು ಖಚಿತಪಡಿಸಿಕೊಳ್ಳಲು ನೀವು ನಿಮ್ಮ ಉತ್ಪನ್ನದ ಅವಶ್ಯಕತೆಗಳನ್ನು ಸಂಶೋಧಿಸಬೇಕು ಮತ್ತು ಆ ದೇಶದ ಕಾನೂನುಗಳನ್ನು ಅರ್ಥಮಾಡಿಕೊಳ್ಳಬೇಕು. ಅದೃಷ್ಟವಶಾತ್, ನಿಮ್ಮ ಸಹಾಯಕ್ಕಾಗಿ ನೀವು ಸಂಪೂರ್ಣ ಕಾನೂನು ಮತ್ತು ಸಾಂಸ್ಥಿಕ ತಂಡವನ್ನು ಹೊಂದಿದ್ದೀರಿ.

### ಎಚ್ಚರಿಕೆ.

**ರಫ್ತುಗಳನ್ನು ಸರಿಯಾಗಿ ನಿರ್ವಹಿಸುವುದು.** *ನೀವು ಹೊಸ ಉತ್ಪನ್ನವನ್ನು ರಫ್ತು ಮಾಡುತ್ತೀರಿ ಮತ್ತು ಅಗತ್ಯವಿರುವ ಎಲ್ಲ ಕಾಗದಪತ್ರದ ಕಾರ್ಯಗಳನ್ನು ಸೇರಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುತ್ತೀರಿ. ನೀವು ಪರಿಶಿಲಿಸುತ್ತೀರಿ, ಮತ್ತು ಎಲ್ಲವೂ ಇದೆ. ಸಾಗಿಸಲು ಸಿದ್ಧವೇ?* ಬಹುತೇಕ. ಪ್ರತಿಯೊಂದು ವಸ್ತುವನ್ನು ಸರಿಯಾಗಿ ವರ್ಗೀಕರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ನಿಮ್ಮ ವ್ಯಾಪಾರ ಅನುಸರಣೆ ತಂಡದೊಂದಿಗೆ ಪರಿಶೀಲಿಸಿ ಮತ್ತು ಸಾಗಣೆಯನ್ನು ಅನುಮತಿಸಲಾಗಿದೆಯೇ ಎಂದು ಖಾತ್ರಿಪಡಿಸಿಕೊಳ್ಳಲು ಎರಡು ಬಾರಿ ಪರೀಕ್ಷಿಸಿ. ಇದು ಸ್ವಲ್ಪ ಸೂಕ್ಷ್ಮ ವಿಷಯವಾಗಿರಬಹುದು ಮತ್ತು ರಫ್ತು ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವುದು, ಗಮ್ಯಸ್ಥಾನವು ಅನುಮೋದಿತವಲ್ಲದ ದೇಶವಲ್ಲ ಎಂಬುದನ್ನು ಪರಿಶೀಲಿಸುವುದು ಮತ್ತು ಉತ್ಪನ್ನವನ್ನು ತಿಳಿದುಕೊಳ್ಳುವುದು ಹಾಗೂ ಅದನ್ನು ಬಳಸುವವರು ಯಾರು ಎಂಬಂತಹ ವಿವರಗಳಿಗೆ ಗಮನ ನೀಡುವುದು ಅತ್ಯಂತ ಅವಶ್ಯ.

**ವ್ಯಾಪಾರದ ಅವಕಾಶಗಳನ್ನು ಪರೀಕ್ಷಿಸುವುದು.** *ನಾವು ಈ ಹಿಂದೆ ಎಂದೂ ಕೆಲಸ ಮಾಡದ ಹೊಸ ದೇಶದ ಕಂಪನಿಯೊಂದಿಗೆ ವ್ಯವಹರಿಸುವುದನ್ನು ನೀವು ಪರಿಗಣಿಸುತ್ತಿದ್ದೀರಿ. ಅವರು ಪ್ರತಿಷ್ಠಿತರು ಎಂದು ಖಚಿತಪಡಿಸಿಕೊಳ್ಳಲು ನೀವು ಒಂದಷ್ಟು ಸಂಶೋಧಿಸುತ್ತೀರಿ. ಮುನ್ನಡೆಯಲು ಸಿದ್ದರಿದ್ದೀರಾ?* ಸಾಕಷ್ಟು ಇಲ್ಲ. ನಮಗೆ ವ್ಯಾಪಾರ ಮಾಡಲು ಅನುಮತಿ ಕೊಡದ ಕೆಲವು ದೇಶಗಳಿವೆ ಮತ್ತು ಅವು ರಾಜಕೀಯಕ್ಕೆ ಅನುಗುಣವಾಗಿ ಬದಲಾಗುತ್ತವೆ. ನಿಷೇಧಿತ ದೇಶಗಳ ಇತ್ತೀಚಿನ ಪಟ್ಟಿಗಾಗಿ ನಮ್ಮ ನೀತಿಯನ್ನು ಪರಿಶೀಲಿಸಿ. ಇದು ಜೈಲು, ದಂಡ ಅಥವಾ ರಫ್ತು ಸಾಮರ್ಥ್ಯವನ್ನು ಕಳೆದುಕೊಳ್ಳುವುದನ್ನು ತಪ್ಪಿಸಲು ಸಹಾಯ ಮಾಡುತ್ತದೆ. ಮಾರಾಟಗಾರರು ನಮ್ಮ ಮೂಲ ಮೌಲ್ಯಗಳನ್ನು ಅನುಸರಿಸುತ್ತಿದ್ದಾರೆ, ಕಂಪನಿಯ ಮಾಹಿತಿಯನ್ನು ರಕ್ಷಿಸುತ್ತಾರೆ, ಲಂಚವನ್ನು ತಪ್ಪಿಸುತ್ತಾರೆ ಮತ್ತು ಸ್ಪರ್ಧಿಗಳೊಡನೆ ಸರಿಯಾಗಿ ಕೆಲಸ ನಿರ್ವಹಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಲು ನೀವು ನಮ್ಮ ಮಾರಾಟಗಾರರ ಸ್ಕ್ರೀನಿಂಗ್ ಪ್ರಕ್ರಿಯೆಯನ್ನು ಸಹಾ ಅನುಸರಿಸಬೇಕು.

> ನಾವು, ವ್ಯಾಪಾರಕ್ಕೆ ಅನ್ವಯವಾಗುವ ಎಲ್ಲಾ ವ್ಯಾಪಾರ ಕಾನೂನುಗಳು ಮತ್ತು ನಿಬಂಧನೆಗಳನ್ನು ಅನುಸರಿಸುತ್ತೇವೆ.



## ತಪ್ಪು ಮಾರ್ಗ.


ಬಹಿಷ್ಕಾರಗಳನ್ನು ನಿರ್ಲಕ್ಷಿಸುವುದು. *ಕೆಲವು ಉತ್ಪನ್ನಗಳು ಇರಾನ್‌ಗೆ ಹೋಗುವ ವಾಹನಗಳಲ್ಲಿ ಸಂಯೋಜಿಸಲ್ಪಡುತ್ತವೆ. ಆದ್ದರಿಂದ, ಅಂತಹ ಉತ್ಪನ್ನಗಳು ಇಸ್ರೇಲ್‌ನಿಂದ ಬರುವುದಿಲ್ಲ ಎಂದು ಪ್ರಮಾಣೀಕರಿಸುವಂತೆ ಕೇಳುವ ಇ-ಮೇಲ್ ಅನ್ನು ನೀವು ಪಡೆಯುತ್ತೀರಿ. ನಾವು ಇರಾನ್‌ಗೆ ಮಾರಾಟ ಮಾಡಲು ಸಾಧ್ಯವಿಲ್ಲವೆಂದು ನಿಮಗೆ ತಿಳಿದಿದೆ, ಏಕೆಂದರೆ, ಅದು ಬಹಿಷ್ಕೃತ ದೇಶವಾಗಿದೆ. ಆದುದರಿಂದ, ನೀವು ಆ ಆರ್ಡರ್ ತಿರಸ್ಕರಿಸಲು ನಿಮ್ಮ ಸಂದೇಶವನ್ನು ಬರೆಯುತ್ತೀರಿ ಮತ್ತು "ಸೆಂಡ್" ಬಟನ್ ಒತ್ತಲು ಸಿದ್ಧರಿದ್ದೀರಿ. ಹೋಗುವುದು ಒಳ್ಳೆಯದೇ?* ಇಲ್ಲ, ತಡೆಯಿರಿ. ನೀವು ಹೇಳಿದ್ದು ಸರಿ. ಆದರೆ, ನೀವು ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ. ನಾವು ವಿನಂತಿಯನ್ನು ಅನುಸರಿಸದಿದ್ದರೂ ಸಹ, ಬಹಿಷ್ಕಾರಕ್ಕೆ ಸಂಬಂಧಿಸಿದ ಯಾವುದೇ ವಿನಂತಿಯನ್ನು ನಾವು ಯು.ಎಸ್. ಸರ್ಕಾರಕ್ಕೆ ವರದಿ ಮಾಡಬೇಕು. ಇಸ್ರೇಲ್ ಬಗೆಗಿನ ವಿನಂತಿಯು ಬಹಿಷ್ಕಾರದ ವಿನಂತಿಯಾಗಿಯೇ ಅರ್ಹತೆ ಪಡೆದಿದೆ. ಸಹಾಯಕ್ಕಾಗಿ ತಕ್ಷಣ ಕಾನೂನು ವಿಭಾಗವನ್ನು ಸಂಪರ್ಕಿಸಿ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

**ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ಮಾಡುವಾಗ, ಅಂತರರಾಷ್ಟ್ರೀಯ ವ್ಯಾಪಾರ ತಂಡದೊಂದಿಗೆ ಈ ಕುರಿತು ಕೆಲಸ ಮಾಡಿ:**

- ಅಂತರರಾಷ್ಟ್ರೀಯ ವಹಿವಾಟುಗಳನ್ನು ಸಂಪೂರ್ಣವಾಗಿ ಮತ್ತು ನಿಖರವಾಗಿ ದಾಖಲಿಸಿಕೊಳ್ಳಿ.
- ನಮ್ಮ ಉತ್ಪನ್ನಗಳನ್ನು ರಫ್ತು ಮಾಡುವ ಅಥವಾ ಮರು ರಫ್ತು ಮಾಡುವ ಮೊದಲು ಅಗತ್ಯವಾದ ಪರವಾನಗಿಗಳನ್ನು ಪಡೆಯಿರಿ.
- ಎಲ್ಲಾ ಮೂರನೇ ಸ್ಕ್ರೀನಿಂಗ್ ವಿಧಾನದ ಮೂಲಕ ಖಚಿತಪಡಿಸಿಕೊಳ್ಳಿ.

## ದಿ ಗ್ಯಾರೇಜ್



# ನಮ್ಮ ಗ್ರಾಹಕರ ಮತ್ತು ಸಮುದಾಯಗಳ ಬಗ್ಗೆ ಕಾಳಜಿ ವಹಿಸುವುದು

ನಾವು ಏನನ್ನು ಸಾಧಿಸಿದ್ದೇವೋ ಅದೆಲ್ಲದರ ಬಗ್ಗೆ ಹೆಮ್ಮೆ ಪಡುವುದರ ಜೊತೆಗೆ ನಮ್ಮ ಗ್ರಾಹಕರಿಗೆ, ನಮ್ಮ ಕಂಪನಿಗೆ ಮತ್ತು ನಮ್ಮ ಸಮುದಾಯಕ್ಕೆ ನಾಳೆ ಎಂಬುದನ್ನು ಯಾವಾಗಲೂ ಉತ್ತಮವಾಗಿರಿಸಬೇಕು ಎಂಬ ಗುರಿಯನ್ನು ನಾವು ಹೊಂದಿದ್ದೇವೆ. ಸಮಾಜಕ್ಕೆ ತಿರುಗಿ ಕಾಣಿಕೆ ಕೊಡುವುದರ ಮೂಲಕ ಮತ್ತು ಮುಂದಿನದು ಏನು ಎಂಬುದನ್ನು ರಚಿಸುವಲ್ಲಿ ಗಮನಹರಿಸುತ್ತಾ, ನಾವು ನಾಳೆಯ ಸಮಸ್ಯೆಗಳನ್ನು ಇಂದೇ ಪರಿಹರಿಸುತ್ತೇವೆ.

## ಈ ವಿಭಾಗದಲ್ಲಿ:

- ಸುರಕ್ಷಿತ, ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವುದು
- ಪ್ರಾಮಾಣಿಕವಾಗಿ ಮಾರ್ಕೆಟಿಂಗ್ ಮಾಡುವುದು
- ಜವಾಬ್ದಾರಿಯುತವಾಗಿ ಸಂವಹನ ಮಾಡುವುದು
- ಮಾನವ ಹಕ್ಕುಗಳನ್ನು ರಕ್ಷಿಸುವುದು
- ಪರಿಸರವನ್ನು ರಕ್ಷಿಸುವುದು
- ಸಮುದಾಯಕ್ಕೆ ಹಿಂದಿರುಗಿಸುವುದು

# ಸುರಕ್ಷಿತ, ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸುವುದು

## ತಲುಪಬೇಕಾದ ಗುರಿ

ಗ್ರಾಹಕರು ಯಾವಾಗ Tennecoವನ್ನು ಆಯ್ಕೆ ಮಾಡಿಕೊಳ್ಳುತ್ತಾರೋ ಆಗ, ಗ್ರಾಹಕರಿಗೆ ಸುರಕ್ಷಿತವಾದ, ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ಉತ್ಪನ್ನದ ಗುಣಮಟ್ಟ ಮತ್ತು ಸುರಕ್ಷತೆಯ ಬಗ್ಗೆ ನಾವು ಆಳವಾಗಿ ಕಾಳಜಿವಹಿಸುತ್ತೇವೆ. ಆದ್ದರಿಂದ, ನಮ್ಮ ಉತ್ಪನ್ನಗಳು ನಮ್ಮ ಆಂತರಿಕ ಮಾನದಂಡಗಳನ್ನು ಮತ್ತು ಅವುಗಳು ಪರಿಚಯವಾದ ಸಮಯದಲ್ಲಿ ಇರುವ ಕಾನೂನುಗಳು ಮತ್ತು ನಿಬಂಧನೆಗಳ ಪ್ರಕಾರ ನಿಗದಿಪಡಿಸಿದ ಮಾನದಂಡಗಳನ್ನು ಇವು ಪೂರೈಸುತ್ತವೆಯೇ (ಅಥವಾ ಮೀರುತ್ತವೆಯೇ) ಎಂಬುದನ್ನು ನಾವು ಖಚಿತಪಡಿಸಿಕೊಳ್ಳುತ್ತೇವೆ.

ಗುಣಮಟ್ಟ ಮತ್ತು ಸುರಕ್ಷತೆಯ ಮೇಲೆ ಗಮನ ಕೇಂದ್ರೀಕರಿಸುವ ಮೂಲಕ, ಗ್ರಾಹಕರು ಇಷ್ಟಪಡುವ ಉತ್ಪನ್ನಗಳನ್ನು ಮತ್ತು ಅವರು ನಂಬಬಹುದಾದ ಹೆಸರನ್ನು ನಾವು ಒದಗಿಸುತ್ತೇವೆ.

### ನೈತಿಕ ವರ್ತನೆಗೆ ಮಾದರಿ.

**ಗುಣಮಟ್ಟ ಮತ್ತು ಸುರಕ್ಷತೆಗೆ ಒತ್ತು ನೀಡುವುದು.** *ಕೆಲವು ಉತ್ಪನ್ನಗಳನ್ನು ಸಮಯಕ್ಕೆ ಸರಿಯಾಗಿ ರವಾನಿಸಲು, ನೀವು ಪೂರ್ವ ಉತ್ಪಾದನಾ ಅನುಮೋದನಾ ಪ್ರಕ್ರಿಯೆಯನ್ನು ಬಿಟ್ಟು ಬಿಡುವಂತೆ ಯಾರಾದರೂ ಸೂಚಿಸಬಹುದು. ನೀವು ಮಾಡದೆ ಇದ್ದಲ್ಲಿ ನಿಮ್ಮ ತಂಡ ಗಡುವು ತಲುಪುವಲ್ಲಿ ಹಿಂದೆ ಬೀಳಲಿದೆ. ಏನೇ ಇದ್ದರೂ ನೀವು ಮಾತನಾಡಿ. ಸರಿಯಾದ ಆಯ್ಕೆ?* ಹೌದು. ಅಂತಿಮ ಗಡುವು ಅಥವಾ ಗುರಿ ತಲುಪಲು ನಾವು ಗುಣಮಟ್ಟದ ಜೊತೆಗೆ ರಾಜಿ ಮಾಡಿಕೊಳ್ಳುವುದಿಲ್ಲ. ಮಾತನಾಡುವ ಮೂಲಕ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು, ಅದರಿಂದ ನಮ್ಮ ಗ್ರಾಹಕರು ಮತ್ತು ನಮ್ಮ ಕಂಪನಿಯನ್ನು ರಕ್ಷಿಸಬಹುದು ಮತ್ತು ಅದು ಯಾವಾಗಲೂ ನಮ್ಮ ಪ್ರಾಮಾಣಿಕತೆಯೊಂದಿಗೆ ಕಾರ್ಯನಿರ್ವಹಿಸುವ ಬದ್ಧತೆಯನ್ನು ರಕ್ಷಿಸುತ್ತದೆ.

### ಎಚ್ಚರಿಕೆ.

**ನೀವು ಕಂಡುಕೊಂಡದ್ದನ್ನು ವರದಿ ಮಾಡುವುದು.** *ಹಿಂದಿನ ಪಾಳಿಯ ನಂತರ ಮೆಷಿನ್ ಕುರಿತಾಗಿ ಯಾವುದೇ ಪರಿಶೀಲನೆಯಾಗಿಲ್ಲ ಎಂದು ನಿಮಗೆ ತಿಳಿಯುತ್ತದೆ. ಅದು ಸರಿಯಾಗಿ ಕಾರ್ಯನಿರ್ವಹಿಸುತ್ತದೆಯೇ ಎಂದು ನೀವು ಮರು-ಪರಿಶೀಲನೆ ನಡೆಸುತ್ತೀರಿ. ಸರಿಯಾದ ನಡೆ?* ಹೌದು, ಆದರೆ ಆ ಬಗ್ಗೆ ವ್ಯವಸ್ಥಾಪಕರಿಗೆ ವರದಿ ನೀಡುವುದನ್ನು ಖಚಿತಪಡಿಸಿಕೊಳ್ಳಿ. ಉತ್ಪಾದಿಸಿದ ಉತ್ಪನ್ನಗಳು ಅಗತ್ಯವಿರುವ ನಿರ್ದಿಷ್ಟತೆಗಳಿಗೆ ಅನುಸಾರವಾಗಿ ಇವೆ ಎಂದು ಖಚಿತಪಡಿಸಿಕೊಳ್ಳುವುದು ಕಂಪನಿಯ ಎಲ್ಲರ ಕೆಲಸವೂ ಆಗಿರುತ್ತದೆ, ಮತ್ತು ನಮ್ಮ ಉತ್ಪನ್ನಗಳು ಗ್ರಾಹಕರಿಗೆ ಸುರಕ್ಷಿತವಾಗಿವೆ ಎಂದು ಖಚಿತಪಡಿಸುವುದು ಅತ್ಯಗತ್ಯ.

### ತಪ್ಪು ಮಾರ್ಗ.

**ಪ್ರಕ್ರಿಯೆಗಳನ್ನು ಬಿಟ್ಟು ಮುಂದೆ ಸಾಗುವುದು.** *ಒಂದು ಉತ್ಪನ್ನದ ಮೇಲೆ ನಾವು ಮಾಡಬೇಕಾದ ಪರೀಕ್ಷೆಯೊಂದನ್ನು ಉತ್ಪಾದನಾ ಸಾಲಿನಲ್ಲಿ ಮುಂದೆ ಮತ್ತೆ ಮರಳಿ ನಡೆಸಲಾಗುತ್ತದೆ ಎನ್ನುವುದು ನಿಮಗೆ ತಿಳಿಯುತ್ತದೆ, ಹೀಗಾಗಿ ನೀವು ವಿತರಣೆ ತ್ವರಿತಗೊಳಿಸಲು ಮೊದಲ ಪರೀಕ್ಷೆಯನ್ನು ಬಿಟ್ಟು ಬಿಡುತ್ತೀರಿ. ಜಾಣ ಆಲೋಚನೆ?* ಖಂಡಿತಾ ಅಲ್ಲ. ಅಗತ್ಯವಿರುವ ಪರೀಕ್ಷೆಯನ್ನು ಬಿಡುವುದು ಎಂದಿಗೂ ಸರಿಯಲ್ಲ. ಕೆಲಸವನ್ನು ವೇಗಗೊಳಿಸಲು ಉಪಾಯಗಳಿದ್ದರೆ, ಅವುಗಳನ್ನು ಹಂಚಿಕೊಳ್ಳಿ. ಆದರೆ ನಿಮ್ಮ ಉಪಾಯಗಳಿಗೆ ಅಂಗೀಕಾರ ಸಿಗುವವರೆಗೂ, ಯೋಜನೆಗೆ ತಕ್ಕಂತೆ ಕೆಲಸ ಮಾಡಿ. ಇಲ್ಲದೆ ಇದ್ದಲ್ಲಿ, ನೀವು ಗ್ರಾಹಕರ ಸುರಕ್ಷತೆಯನ್ನು ಅಪಾಯಕ್ಕೊಡ್ಡುವಿರಿ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಗುಣಮಟ್ಟ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಹೆಚ್ಚಿನ ಸಲಹೆಗಳು:

- ಹೊಸ ನಿಯಮಗಳನ್ನು ಜಾಗರೂಕತೆಯಿಂದ ಗಮನಿಸಿ ಮತ್ತು ಅಗತ್ಯವಿದ್ದಾಗ ಪ್ರಮಾಣೀಕರಿಸಿ.
- ಎಲ್ಲಾ ಮಾರಾಟಗಾರರು ನಮ್ಮ ಅವಶ್ಯಕತೆಗಳಿಗೆ ತಕ್ಕದಾಗಿ ಅಥವಾ ಅದಕ್ಕಿಂತ ಹೆಚ್ಚಿನದಾಗಿ ನಡೆದುಕೊಳ್ಳುತ್ತಾರೆ ಎಂದು ಖಚಿತ ಪಡಿಸಿಕೊಳ್ಳಿ
- ನಮ್ಮ ಉತ್ಪನ್ನಗಳ ಸುರಕ್ಷತೆ ಮತ್ತು ರಕ್ಷಣೆಗೆ ನಿಮ್ಮ ಗಮನಕ್ಕೆ ಬಂದ ಯಾವುದೇ ಉಲ್ಲಂಘನೆ ಅಥವಾ ಯಾವುದೇ ಬೆದರಿಕೆಗಳಿದ್ದಲ್ಲಿ ಅದನ್ನು ವರದಿ ಮಾಡಿ.

ಉತ್ಪನ್ನಗಳ ಬದಲಾವಣೆ (ಟ್ಯಾಂಪರಿಂಗ್) ಅಪಾಯಕಾರಿ ಮತ್ತು ಕಾನೂನುಬಾಹಿರವಾಗಿದೆ ಹಾಗೂ ಇದು ನಮ್ಮ ಸಂಹಿತೆಯ ಉಲ್ಲಂಘನೆಯಾಗಿದೆ. ನಾವು ಇದರ ಆಳಕ್ಕೆ ಇಳಿಯುವುದು ಮುಖ್ಯವಾಗಿದೆ.



## ದಿ ಗ್ಯಾರೇಜ್

# ಪ್ರಾಮಾಣಿಕವಾಗಿ ಮಾರ್ಕೆಟಿಂಗ್ ಮಾಡುವುದು

## ತಲುಪಬೇಕಾದ ಗುರಿ

ನಮ್ಮ ಪ್ರಖ್ಯಾತಿ ಮತ್ತು ನಮ್ಮ ಬ್ರಾಂಡ್ ನಿರ್ಮಾಣ.

## ನಾವು ಅದನ್ನು ಹೇಗೆ ಸಾಧಿಸುವುದು


ನಾವು ಎಲ್ಲವನ್ನೂ ಸಮಗ್ರತೆಯಿಂದ ಮಾಡುತ್ತೇವೆ - ಮತ್ತು ಅದರಲ್ಲಿ ನಮ್ಮ ಉತ್ಪನ್ನಗಳ ಮಾರುಕಟ್ಟೆ ಮತ್ತು ಜಾಹೀರಾತು ಕೂಡ ಸೇರಿದೆ. ಜಾಹೀರಾತಿನಲ್ಲಿ ಸಮಗ್ರತೆ ಎಂದರೆ ನಾವು ಉತ್ಪನ್ನಕ್ಕೆ ಸಂಬಂಧಿಸಿ ನಿಖರ, ಪಾರದರ್ಶಕ, ಸಮತೋಲನ ಮಾಹಿತಿಯನ್ನು ಒದಗಿಸುತ್ತೇವೆ ಎಂದರ್ಥ. ನಮ್ಮ ಉತ್ಪನ್ನಗಳಿಗೆ ಸಂಬಂಧಿಸಿದ ಎಲ್ಲಾ ಹೇಳಿಕೆಗಳೂ ನಿಜ ಮತ್ತು ವಾಸ್ತವಾಂಶಗಳಂತೆ ಇದೆ ಎಂದು ಖಚಿತಪಡಿಸಿಕೊಂಡು, ನಾವು ಗ್ರಾಹಕರ ಆತ್ಮವಿಶ್ವಾಸವನ್ನು ವೃದ್ಧಿಸುತ್ತೇವೆ ಮತ್ತು ನಮ್ಮ ಬ್ರಾಂಡ್ ಬಲವನ್ನು ಹೆಚ್ಚಿಸುತ್ತೇವೆ.

### ನೈತಿಕ ವರ್ತನೆಗೆ ಮಾದರಿ.

**ಉತ್ಪನ್ನಗಳ ಕುರಿತಾಗಿ ಕ್ಲೇಮ್ ಮಾಡುವುದು.** *ನಮ್ಮ ಹೊಸ ಉತ್ಪನ್ನವು ಸ್ಪರ್ಧೆಯಲ್ಲಿರುವ ಉತ್ಪನ್ನಗಳಿಗಿಂತ ಉತ್ತಮ ಮತ್ತು ಸ್ಪರ್ಧಿಗಳಿಗಿಂತ 20% ರಷ್ಟು ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ನೀವು ಜಾಹೀರಾತು ನೀಡಲು ಬಯಸಿದ್ದೀರಿ. ದೊಡ್ಡ ಟ್ರೇಡ್ ಶೋ ಗಿಂತ ಮೊದಲೇ ತ್ವರಿತವಾಗಿ ನೀವು ಜಾಹೀರಾತನ್ನು ಹೊರತರಬೇಕಾಗಿದ್ದರೂ ಸಹ, ನೀವು ಜಾಹೀರಾತನ್ನು ಬಿಡುಗಡೆ ಮಾಡುವ ಮೊದಲು ಸಮಯ ತೆಗೆದುಕೊಂಡು ನಮ್ಮ ಎಂಜಿನಿಯರ್‌ಗಳ ಜೊತೆಗೂಡಿ ಹೋಲಿಕೆ ಪರೀಕ್ಷೆಗಳನ್ನು ನಡೆಸುತ್ತೀರಿ. ಉತ್ತಮ ನಿರ್ಧಾರ?* ಖಂಡಿತಾ. ನಮ್ಮ ಉತ್ಪನ್ನಗಳ ಕಾರ್ಯಕ್ಷಮತೆಯ ಬಗ್ಗೆ ನಾವು ಸುಳ್ಳು ಅಥವಾ ಆಧಾರರಹಿತವಾದ ಹೇಳಿಕೆಗಳನ್ನು ಕೊಡುವುದಿಲ್ಲ. ಆಧಾರಸಹಿತ ಹೇಳಿಕೆ ನೀಡಲು ಬಹಳಷ್ಟು ಬಾರಿ ಪಾರದರ್ಶಕ ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ, ಹೀಗಾಗಿ ಕಾನೂನು ವಿಭಾಗದ ಜೊತೆಗೆ ಕೆಲಸ ಮಾಡಿ ನೀವು ಮಾಡಬೇಕಾಗಿರುವ ಆಧಾರ ಸಹಿತ ಹೇಳಿಕೆಗೆ ಅಗತ್ಯವಿರುವ ಪರೀಕ್ಷೆಗಳ ವಿಧಗಳನ್ನು ಅರ್ಥಮಾಡಿಕೊಳ್ಳಿ.

### ಎಚ್ಚರಿಕೆ.

**ನಮ್ಮ ವರ್ಚಸ್ಸನ್ನು ರಕ್ಷಿಸಿಕೊಳ್ಳುವುದು.** *ಒಬ್ಬ ಪ್ರತಿಸ್ಪರ್ಧಿ ನಮ್ಮ ಉತ್ಪನ್ನಗಳ ಬಗ್ಗೆ ಸುಳ್ಳು ಹೇಳಿಕೆ ನೀಡಿದ್ದಾರೆ. ನೀವು ಹೆಚ್ಚು ನಿಖರ, ಪಾರದರ್ಶಕ ಮತ್ತು ಸಮತೋಲಿತ ಮಾಹಿತಿ ಇರುವ ಜಾಹೀರಾತನ್ನು ಬಿಡುಗಡೆ ಮಾಡುವಂತೆ ನಿಮ್ಮ ತಂಡವನ್ನು ಕೇಳುತ್ತೀರಿ. ಸರಿಯಾದ ನಡೆ?* ಹೌದು, ಸರಿಯಾದ ಮಾಹಿತಿ ನೀಡುವ ಅತಿಮುಖ್ಯ ಸಮಯ ಇದಾಗಿದೆ. ಆದರೆ ಕಾನೂನು ವಿಭಾಗದ ಜೊತೆಗೆ ಚರ್ಚಿಸಿರುವುದನ್ನು ಖಚಿತಪಡಿಸಿಕೊಳ್ಳಿ. ನಮ್ಮ ಉತ್ಪನ್ನಗಳ ಬಗ್ಗೆ ಸುಳ್ಳು ಹೇಳಿಕೆ ನೀಡುವುದು ಅನೈತಿಕ ಮತ್ತು ಅದರ ವಿರುದ್ಧ ಹೋರಾಡಲು ನಾವು ಇನ್ನಷ್ಟು ಶ್ರಮ ಹಾಕಬೇಕಿದೆ.



## ತಪ್ಪು ಮಾರ್ಗ.

ಪರಿಶೀಲಿಸದ ಮಾಹಿತಿ ಒದಗಿಸುವುದು. *ನೀವು ಪ್ರಚಾರಕ್ಕೆ ಸಂಬಂಧಿಸಿದ ವಿವರಗಳನ್ನು ಕಲೆ ಹಾಕುತ್ತಾ ನಮ್ಮ ಉತ್ಪನ್ನವೊಂದರ ಸಂಭಾವ್ಯ ಲಾಭದ ಬಗ್ಗೆ ಪ್ರಮುಖವಾಗಿ ಹೇಳಬಯಸುತ್ತೀರಿ. ಆದರೆ ಆ ವಿವರ ನಿರ್ದಿಷ್ಟ ಸಂಶೋಧನೆಯ ಆಧಾರ ಹೊಂದಿರುವುದಿಲ್ಲ, ಆದರೆ ಒಂದು ಅಧ್ಯಯನ ನಡೆಯುತ್ತಿದೆ ಮತ್ತು ಈವರೆಗಿನ ಫಲಿತಾಂಶಗಳು ಉತ್ತಮವಾಗಿವೆ, ಹೀಗಾಗಿ ನೀವು ಅದನ್ನೂ ಸೇರಿಸಲು ಬಯಸುವಿರಿ. ಬುದ್ಧಿವಂತಿಕೆ, ಅಲ್ಲವೇ?* ಇಲ್ಲ. ನಾವು ಯಾವಾಗಲೂ ಪೂರ್ಣ ಮಾಹಿತಿಯನ್ನು ನೀಡುವ ಮೂಲಕ ನಮ್ಮ ಗ್ರಾಹಕರನ್ನು (ಮತ್ತು ನಮ್ಮ ಬ್ರ್ಯಾಂಡ್) ರಕ್ಷಿಸುತ್ತೇವೆ. ಅಧ್ಯಯನ ಮುಗಿಯುವವರೆಗೂ ಕಾಯಿರಿ ಮತ್ತು ಜಾಹೀರಾತುಗಳಲ್ಲಿ ಬಳಸುವ ಮೊದಲು ಹೇಳಿಕೆಗಳನ್ನು ಪರಿಶೀಲನೆ ಮಾಡಬಹುದು.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ನೆನಪಿಟ್ಟುಕೊಳ್ಳಲು ಬೇರೆ ಏನಾದರೂ ವಿಷಯಗಳಿವೆಯೇ?

ಕ್ಲೇಮ್‌ಗಳನ್ನು ಪರಿಶೀಲಿಸುವುದು, ಮಾರ್ಕೆಟಿಂಗ್ ವಸ್ತುಗಳನ್ನು ಪರಿಶೀಲಿಸುವುದು ಅಥವಾ ನಾವು ಉಲ್ಲೇಖಿಸಿದ ಮೂಲಗಳ ನಿಖರತೆಯನ್ನು ದೃಢೀಕರಿಸುವ ವಿಷಯ ಬಂದಾಗ, ಅವುಗಳನ್ನು ಪರೀಕ್ಷಿಸಿ, ಮತ್ತೆ ಮತ್ತೆ ಪರೀಕ್ಷಿಸಿ.

## ದಿ ಗ್ಯಾರೇಜ್



# ಜವಾಬ್ದಾರಿಯುತವಾಗಿ ಸಂವಹನ ಮಾಡುವುದು

## ತಲುಪಬೇಕಾದ ಗುರಿ

ನಮ್ಮ ಕಂಪನಿಯ ಬಗ್ಗೆ ನಿರಂತರ ಮತ್ತು ಸ್ಪಷ್ಟ ಸಂದೇಶಗಳನ್ನು ಕಳುಹಿಸುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ನಮ್ಮಲ್ಲಿ ಹಂಚಿಕೊಳ್ಳಲು ಬಹಳಷ್ಟು ಶ್ರೇಷ್ಠ ಕತೆಗಳಿವೆ. ಮರಳಿ ಕೊಡುವುದು, ಗ್ರಾಹಕರಿಗೆ ನೆರವಾಗುವುದು ಮತ್ತು ಅನ್ವೇಷಕ ಪರಿಹಾರಗಳನ್ನು ಸೃಷ್ಟಿಸುವ ಕುರಿತ ವಿಷಯಗಳು. ಅವುಗಳು ನಮ್ಮಲ್ಲಿ ಹೆಮ್ಮೆಯನ್ನು ಮೂಡಿಸುತ್ತವೆ, ಮತ್ತು ನಾವು ಜಗತ್ತಿಗೆ ಅದನ್ನು ತಿಳಿಸಲು ಬಯಸುತ್ತೇವೆ.

ಅದೇ ಕಾರಣದಿಂದ Tenneco ಪರವಾಗಿ ಸಂವಹನ ಮಾಡುವ ಕೆಲಸವನ್ನೇ ಹೊಂದಿರುವ ತಂಡದ ಸದಸ್ಯರು ನಮ್ಮಲ್ಲಿ ಇದ್ದಾರೆ. ಅವರು ನಿರಂತರವಾಗಿ, ನಿಖರ ಮತ್ತು ಪೂರ್ಣ ರೂಪದಲ್ಲಿ ಅದನ್ನು ಮಾಡುತ್ತಾರೆ.

ನಿಮ್ಮ ಪಾತ್ರವನ್ನು ನಿರ್ವಹಿಸಲು, ಅವರ ಕೆಲಸಕ್ಕೆ ನೀವು ಅವರಿಗೆ ನೆರವಾಗಬೇಕು. ಎಲ್ಲಾ ಮಾಧ್ಯಮ ಪ್ರಶ್ನೆಗಳನ್ನು ಸಂವಹನಗಳ ತಂಡಕ್ಕೆ ಕಳುಹಿಸಿ. ಯಾರಾದರೂ ನಮ್ಮ ಬ್ರಾಂಡ್ ಅನ್ನು ತಪ್ಪಾಗಿ ಮುಂದಿಡುತ್ತಿದ್ದಾರೆ ಎಂದು ನಂಬಿದಲ್ಲಿ ನೀವು ಆನ್‌ಲೈನ್‌ನಲ್ಲಿ ಏನು ಪೋಸ್ಟ್ ಮಾಡುವಿರಿ, ಮತ್ತು ಮಾತನಾಡುವಿರಿ ಎನ್ನುವ ವಿಚಾರದಲ್ಲಿ ವೈಯಕ್ತಿಕ ಜವಾಬ್ದಾರಿ ಇರಲಿ.

### ನೈತಿಕ ವರ್ತನೆಗೆ ಮಾದರಿ.

**ಎಲ್ಲಿ ಸಂಪರ್ಕಿಸಬೇಕು ಎಂದು ತಿಳಿದಿರುವುದು.** *ನೀವು ನಮ್ಮ ಉತ್ಪನ್ನಗಳಲ್ಲಿ ಒಂದರ ಬಗ್ಗೆ ದೂರು ನೀಡಿರುವ ಸೋಶಿಯಲ್ ಮೀಡಿಯಾ ಪೋಸ್ಟ್ ಒಂದನ್ನು ಕಾಣುತ್ತೀರಿ. ಪ್ರತಿಕ್ರಿಯಿಸುವ ಮೂಲಕ ತಕ್ಷಣವೇ ಅದನ್ನು ಪರಿಹರಿಸಬಹುದು ಎಂದು ನಿಮಗೆ ತಿಳಿದಿದೆ. ಆದರೆ, ನಮ್ಮ ಸಂದೇಶ ನಿರಂತರವಾಗಿ ಇರಬೇಕು ಎನ್ನುವುದನ್ನು ನೀವು ಖಚಿತಪಡಿಸಬೇಕು, ಹೀಗಾಗಿ ನೀವು ದೂರನ್ನು ನಮ್ಮ ಸಂವಹನಗಳು ಮತ್ತು ಮಾರ್ಕೆಟಿಂಗ್ ತಂಡಗಳಿಗೆ ಕಳುಹಿಸುತ್ತೀರಿ. ಉತ್ತಮ ಆಲೋಚನೆ?* ಹೌದು, ದೂರನ್ನು ಸಂಬಂಧಿಸಿದವರಿಗೆ ಕಳುಹಿಸುವುದು ಉತ್ತಮ ಹಾದಿ.

### ಎಚ್ಚರಿಕೆ.

**ಜವಾಬ್ದಾರಿಯುತವಾಗಿ ಪೋಸ್ಟ್ ಮಾಡುವುದು.** *ನಾವು ಆಗಷ್ಟೇ ಬಿಡುಗಡೆ ಮಾಡಿರುವ ಹೊಸ ಉತ್ಪನ್ನದ ಬಗ್ಗೆ ಉತ್ಸಾಹದಿಂದ ಇದ್ದೀರಿ ಮತ್ತು ಸೋಶಿಯಲ್ ಮೀಡಿಯಾದಲ್ಲಿ ಅದರ ಬಗ್ಗೆ ಪೋಸ್ಟ್ ಮಾಡಲು ನೀವು ಬಯಸಿದ್ದೀರಿ. ಅದರಲ್ಲಿ ತಪ್ಪಿಲ್ಲ ಅಲ್ಲವೆ?* ಬಹುಶಃ ಸರಿಯಲ್ಲ. ನಾವು ನಮ್ಮ ಉತ್ಪನ್ನದ ಬಗ್ಗೆ ಸತ್ಯಾಂಶವನ್ನೇ ಹೇಳಬೇಕು ಎಂದು ಸಂವಹನ ತಂಡ ಬಹಳ ಶ್ರಮ ಪಡುತ್ತಿರುವ ಕಾರಣದಿಂದ ಕಂಪನಿ ಅಂಗೀಕರಿಸಿದ ವಿಷಯವಸ್ತುಗಳನ್ನೇ ಬಳಸುವುದನ್ನು ಖಚಿತಪಡಿಸಿಕೊಳ್ಳಿ. ನೀವು "ಕಂಪನಿ ಜೊತೆಗೆ ನಿಮ್ಮ ಸಂಬಂಧದ ಬಗ್ಗೆಯೂ ತಿಳಿಸಬೇಕು", ಅದನ್ನು ಹೇಳುವುದು ಚೆನ್ನಾಗಿರುತ್ತದೆ ಮತ್ತು ನೀವು ಇಲ್ಲಿ ಕೆಲಸ ಮಾಡುತ್ತಿದ್ದೀರಿ ಎಂದು ತಿಳಿಸಿ. ನೀವು ಕಂಪನಿಯ ಪರವಾಗಿ ಮಾತನಾಡುವಾಗ ಸಂಶಯವಿದ್ದಲ್ಲಿ, ನೆರವಿಗಾಗಿ ಸಂವಹನ ತಂಡವನ್ನು ಸಂಪರ್ಕಿಸಿ.



## ತಪ್ಪು ಮಾರ್ಗ.

ಸೂಕ್ತವಲ್ಲದ ಮಾಹಿತಿ ಹರಡುವುದು. *ಹೊಸ ಉತ್ಪನ್ನ ಬಿಡುಗಡೆಯ ವದಂತಿಯ ಬಗ್ಗೆ ಮಾಧ್ಯಮ ನಿಮ್ಮನ್ನು ಸಂಪರ್ಕಿಸಿದೆ. ನೀವು ಆ ಬಗ್ಗೆ ಕೇಳಿದ್ದೀರಿ ಮತ್ತು ನಿಮಗೆ ತಿಳಿದಿರುವುದನ್ನು ಹೇಳುವುದು ಉತ್ತಮ ಎಂದುಕೊಳ್ಳುತ್ತೀರಿ. ಸರಿಯೆ?* ತಪ್ಪು. ಮಾಧ್ಯಮಗಳ ಜೊತೆಗೆ ಮಾತನಾಡುವುದನ್ನು ವೃತ್ತಿಪರರಿಗೆ ಬಿಡುವುದು ಒಳಿತು. ಮಾಹಿತಿಯನ್ನು ಹಂಚಿಕೊಳ್ಳಲು ಯಾವುದು ಸೂಕ್ತ ಸಮಯ ಮತ್ತು ಯಾವುದು ಸೂಕ್ತವಲ್ಲ ಎನ್ನುವುದು ನಮ್ಮ ಸಂವಹನ ತಂಡಕ್ಕೆ ಚೆನ್ನಾಗಿ ತಿಳಿದಿರುತ್ತದೆ. ಊಹೆಗಳು ತಪ್ಪಾಗಿರಬಹುದು ಅಥವಾ ಅವುಗಳನ್ನು ಒಳಗಿನ ಮಾಹಿತಿ ಎಂದೂ ಕೂಡ ಪರಿಗಣಿಸಲಾಗಬಹುದು.



## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಯಾವುದಾದರೂ ಸಾಮಾಜಿಕ ಮಾಧ್ಯಮ ಸಲಹೆಗಳು ಇದೆಯೇ?

- ಕಿರುಕುಳ ಅಥವಾ ತಾರತಮ್ಯ ಎನಿಸುವ ಪೋಸ್ಟ್‌ಗಳು ಯಾವಾಗಲೂ ತಪ್ಪು ಎಂಬುದನ್ನು ನೆನಪಿಡಿ.
- ಪೋಸ್ಟ್ ಮಾಡುವ ವಿಷಯದ ಜವಾಬ್ದಾರಿಯನ್ನು ನೀವೇ ತೆಗೆದುಕೊಳ್ಳಿ –ನಿಮ್ಮ ಮಾತುಗಳು ನಿಮ್ಮದೇ ಎಂದು ಜನರಿಗೆ ತಿಳಿಸಿ.
- ಸಂವಹನಗಳ ತಂಡದ ಪೂರ್ವಾನುಮತಿ ಪಡೆಯದೆ Tenneco ಲೋಗೋಗಳು ಮತ್ತು ಚಿತ್ರಗಳನ್ನು ಬದಲಾಯಿಸಬೇಡಿ.
- ಗುತ್ತಿಗೆಗಳು ಅಥವಾ ಒಪ್ಪಂದಗಳಂತಹ ಕಂಪನಿಯ ಅಧಿಕೃತ ವ್ಯವಹಾರಗಳಿಗೆ ಸಾಮಾಜಿಕ ಮಾಧ್ಯಮಗಳು ಅಥವಾ ಆ್ಯಪ್‌ಗಳನ್ನು ಯಾವಾಗಲೂ ಉಪಯೋಗಿಸಬೇಡಿ.

## ದಿ ಗ್ಯಾರೇಜ್

# ಮಾನವ ಹಕ್ಕುಗಳನ್ನು ರಕ್ಷಿಸುವುದು

## ತಲುಪಬೇಕಾದ ಗುರಿ

ಎಲ್ಲಾ ಕಡೆ ತಾರತಮ್ಯವಿಲ್ಲದ ಉದ್ಯೋಗ ನೀತಿಗಳನ್ನು ನಿಭಾಯಿಸುವ ಮೂಲಕ ನಾವು ಉದ್ಯಮ ನಡೆಸುತ್ತೇವೆ ಮತ್ತು ತಂಡವಾಗಿ ಪರಸ್ಪರರ ಬಗ್ಗೆ ಕಾಳಜಿ ವಹಿಸುತ್ತೇವೆ.

## ನಾವು ಅದನ್ನು ಹೇಗೆ ಸಾಧಿಸುವುದು

ಫ್ರಂಟ್ ಆಫೀಸ್‌ನಿಂದ ಉತ್ಪಾದನಾ ಸಾಲುಗಳವರೆಗೆ, ಎಲ್ಲಾ ಕಡೆ, ಎಲ್ಲರೊಂದಿಗೂ ಮಾನವ ಹಕ್ಕುಗಳ ರಕ್ಷಣೆಗೆ ನಾವು ಆದ್ಯತೆ ಕೊಡುತ್ತೇವೆ.

ಮಾನವ ಹಕ್ಕುಗಳ ರಕ್ಷಣೆಯಲ್ಲಿ ನಮ್ಮ ಬದ್ಧತೆಯು ಕೇವಲ ನೈತಿಕವಾಗಿ ಉದ್ಯಮ ನಿಭಾಯಿಸುವುದನ್ನು ಮೀರಿರುತ್ತದೆ - ಅದು ಜನರನ್ನು ಸಭ್ಯತೆ, ಸಮಾನತೆ, ಘನತೆ ಮತ್ತು ಗೌರವದಿಂದ ಕಾಣುವ ಬದ್ಧತೆಯಾಗಿದೆ. ನಾವು ಜೊತೆಗೂಡಿ ಕೆಲಸ ಮಾಡುವ ಕಂಪನಿಗಳೂ ಅದೇ ರೀತಿಯಲ್ಲಿ ಇರಬೇಕು ಎಂದು ನಿರೀಕ್ಷಿಸುತ್ತೇವೆ.

ಇವುಗಳಲ್ಲಿ ನಿಮ್ಮ ಪಾತ್ರವೇನು? ಅದು ಸರಳ- ನಿಯಮವನ್ನು ಪಾಲಿಸಿ, ಜಾಗೃತರಾಗಿರಿ, ಮತ್ತು ಮಾನವ ಹಕ್ಕುಗಳಿಗೆ ಉಲ್ಲಂಘನೆಯಾಗುವ ಏನಾದರೂ ಕಂಡುಬಂದಲ್ಲಿ ಮಾತನಾಡಿ. ವೃತ್ತಿಪರಿಸರದಲ್ಲಿ ಇತರರನ್ನು ಹೇಗೆ ಕಾಣಲಾಗುತ್ತದೆ ಎಂದು ನೋಡಲು ನೀವು ಮುನ್ನೆಲೆಯಲ್ಲಿ ಇರುತ್ತೀರಿ. ಸಿಬ್ಬಂದಿಗಳಿಗೆ ಮೊದಲ ಆದ್ಯತೆ ನೀಡುವ ನಮ್ಮ ಕಾರ್ಯಯೋಜನೆಯನ್ನು ಪೂರ್ಣಗೊಳಿಸಲು ಮತ್ತು ಎಲ್ಲರಿಗೂ ಯಶಸ್ವಿಯಾಗಲು ಅಗತ್ಯವಿರುವ ಸಂಪನ್ಮೂಲವಿದೆ ಎಂದು ಖಚಿತಪಡಿಸಲು ನಮಗೆ ನಿಮ್ಮ ಹಾಗೂ ನಿಮ್ಮ ಸಮಯ, ಪ್ರತಿಭೆ ಮತ್ತು ಶಕ್ತಿಯ ಅಗತ್ಯವಿದೆ.

## ನೈತಿಕ ವರ್ತನೆಗೆ ಮಾದರಿ.

**ಸುರಕ್ಷತೆಯ ಅಭ್ಯಾಸ.** *ನೀವು ವೆಂಡರ್ ಒಬ್ಬರ ಸೌಲಭ್ಯದಲ್ಲಿ ಮೆಷಿನ್ ಗಾರ್ಡ್ ಅನ್ನು ಅಸಮರ್ಪಕವಾಗಿ ಜೋಡಿಸಿರುವುದನ್ನು ನೀವು ಗುರುತಿಸುತ್ತೀರಿ ಮತ್ತು ತುರ್ತು ಹೊರ ಹೋಗುವ ದ್ವಾರಗಳಿಗೆ ಸರಪಣಿ ಬಿಗಿದಿರುವುದು ಕಾಣುತ್ತೀರಿ. ಯಾರಿಗೂ ನೋವಾಗುವುದು ನಿಮಗೆ ಬೇಕಾಗಿಲ್ಲ, ಹೀಗಾಗಿ ನೀವು ತಕ್ಷಣವೇ ಆನ್‌ಸೈಟ್ ವ್ಯವಸ್ಥಾಪಕರಿಗೆ ವಿಷಯ ತಿಳಿಸುತ್ತೀರಿ. ಜಾಣ ಆಲೋಚನೆ?* ಖಂಡಿತಾ. ಸುರಕ್ಷಿತ ಕಾರ್ಯ ಪರಿಸರದ ಹಕ್ಕು ನಮಗೆಲ್ಲರಿಗೂ ಇದೆ. ಮಾತನಾಡುವ ಮೂಲಕ ನೀವು ಮಾನವ ಹಕ್ಕುಗಳ ರಕ್ಷಣೆಯಲ್ಲಿ ನಿಮ್ಮ ಪಾತ್ರವನ್ನು ನಿಭಾಯಿಸಿದ್ದೀರಿ ಮತ್ತು ನಾವು ಜೊತೆಗೂಡಿ ಕೆಲಸ ಮಾಡುವವರಿಗೆ ಉತ್ತಮ ಅಭ್ಯಾಸ ನಿರ್ವಹಿಸಲು ಮಾದರಿಯಾಗಿದ್ದೀರಿ.

**ಶ್ರದ್ಧೆಯಿಂದ ಮಾಡುವುದು.** *ಅಪರಿಚಿತ ವಿತರಕರಿಂದ ಹಲವು ವಿಂಡ್‌ಶೀಲ್ಡ್‌ಗಳನ್ನು ಖರೀದಿಸಲು ನೀವು ಪರಿಗಣಿಸುತ್ತಿರುವಿರಿ. ಉತ್ಪನ್ನವು ಸಂಪೂರ್ಣವಾಗಿ ಗಾಜಿನಿಂದ ತಯಾರಾಗಿದೆ ಎಂದು ಅವರು ನಿಮಗೆ ತಿಳಿಸುತ್ತಾರೆ, ಆದರೆ ವಿಭಿನ್ನ ಮೆಟೀರಿಯಲ್‌ನ ರಿಫ್ಲೆಕ್ಟಿವ್ ಕೋಟಿಂಗ್ ಹಾಕಿರುವುದನ್ನು ನೀವು ಗುರುತಿಸುತ್ತೀರಿ. ಆ ಬಗ್ಗೆ ಸ್ವಲ್ಪ ಪತ್ತೆ ಮಾಡಿದ ನಂತರ, ಸಂಘರ್ಷದ ಖನಿಜವಾಗಿರುವ ಟಿನ್ (ತವರ) ಕೋಟಿಂಗ್ ಮಾಡಲಾಗಿರುವುದು ನಿಮಗೆ ತಿಳಿಯುತ್ತದೆ. ನೀವು ವಿತರಕರನ್ನು ಸಂಪರ್ಕಿಸುತ್ತೀರಿ ಮತ್ತು ಟಿನ್ ಎಲ್ಲಿಂದ ತರಲಾಗಿದೆ ಎನ್ನುವ ಬಗ್ಗೆ ಹೆಚ್ಚು ಮಾಹಿತಿ ಒದಗಿಸುವಂತೆ ನೀವು ಅವರನ್ನು ಕೇಳುತ್ತೀರಿ. ಸರಿಯಾದ ಆಯ್ಕೆ?* ಹೌದು. ನಮ್ಮ ವಿತರಣಾ ಸರಪಣಿಯಲ್ಲಿ ಯಾವುದೇ ಕೊರತೆಯಿದ್ದರೆ ಶ್ರದ್ಧೆಯಿಂದ ಕಂಡು ಹಿಡಿಯಲು ಪ್ರಯತ್ನಿಸಬೇಕು, ಟಿನ್ ಟಾಂಟಲಮ್, ಟಂಗ್‌ಸ್ಟನ್ ಮತ್ತು ಚಿನ್ನದ ವಿಷಯದಲ್ಲಿ ಜಾಗರೂಕವಾಗಿರಬೇಕು. ಇವುಗಳನ್ನು ಸಂಘರ್ಷದ ಖನಿಜಗಳೆಂದು ಕರೆಯಲಾಗುತ್ತದೆ. ಏಕೆಂದರೆ ಈ ಖನಿಜಗಳ ಗಣಿಗಾರಿಕೆಯಲ್ಲಿ ಮತ್ತು ಉತ್ಪಾದನೆಯಲ್ಲಿ ಯಾವಾಗಲೂ ಮಾನವ ಹಕ್ಕುಗಳೊಂದಿಗೆ ರಾಜಿ ಮಾಡಲಾಗುತ್ತದೆ. ವಿತರಕರ ಜೊತೆಗೆ ಮಾತನಾಡಿ, ನಮ್ಮ ನೀತಿಯನ್ನು ಪರೀಕ್ಷಿಸಿ ಮತ್ತು ಸಂಘರ್ಷದ ಖನಿಜಗಳ ತಂಡವನ್ನು ಸಂಪರ್ಕಿಸಿ ಮತ್ತು ಟಿನ್ ಅಧಿಕೃತ ಗಣಿಗಾರಿಕೆ ಇರುವ ದೇಶದಿಂದ ಬಂದಿರುವುದನ್ನು ದೃಢೀಕರಿಸಿ. ಅದು ಸಂಘರ್ಷದ ಖನಿಜವೆಂದು ತಿಳಿದಲ್ಲಿ ತಕ್ಷಣವೇ ವಿತರಕರ ಜೊತೆಗೆ ಸಂಬಂಧ ಕಡಿದುಕೊಳ್ಳಿ.

## ಎಚ್ಚರಿಕೆ.

**ತಂಡದ ಸದಸ್ಯರ ಹಕ್ಕುಗಳನ್ನು ರಕ್ಷಿಸುವುದು.** *ನೀವು ಸಂಭಾವ್ಯ ಪೂರೈಕೆದಾರರನ್ನು ಭೇಟಿ ಮಾಡುತ್ತೀರಿ ಮತ್ತು ಅವರ ಪೂರೈಕೆ ಜಾಲ ತಂಡದ ಬಹಳಷ್ಟು ಸದಸ್ಯರು ಅಪ್ರಾಪ್ತ ವಯಸ್ಸಿನವರಂತೆ ಇರುವುದನ್ನು ನೀವು ಗಮನಿಸುತ್ತೀರಿ. ನೀವು ನಿಮ್ಮ ಬಾಸ್ ಮತ್ತು ಪೂರೈಕೆ ಜಾಲ ತಂಡಕ್ಕೆ ಈ ವಿಷಯವನ್ನು ತಿಳಿಸುತ್ತೀರಿ. ಇದು ಸರಿಯಾದ ನಿರ್ಧಾರವೇ?* ಹೌದು. Tennecoದಲ್ಲಿ, ನಾವು ಸಂಭಾವ್ಯ ಮಾನವ ಹಕ್ಕುಗಳ ದುರುಪಯೋಗದ ಬಗ್ಗೆ ಗಮನ ಹರಿಸುತ್ತೇವೆ ಮತ್ತು ನಾವು ಏನಾದರೂ ಸಂದೇಹಾಸ್ಪದವಾಗಿ ಕಂಡುಬಂದರೆ ಮುಕ್ತವಾಗಿ ಮಾತನಾಡುತ್ತೇವೆ. ತನಿಖೆ ಪೂರ್ಣಗೊಳ್ಳುವವರೆಗೆ ನಿಮ್ಮ ಸಂಭಾವ್ಯ ಪೂರೈಕೆದಾರರ ಪಟ್ಟಿಯಿಂದ ಅವರನ್ನು ಕೈಬಿಡುವುದನ್ನು ಖಚಿತಪಡಿಸಿಕೊಳ್ಳಿ.

**ನ್ಯಾಯಯುತವಾಗಿ ವೇತನ ಪಡೆಯುವುದು.** *ನಿಮ್ಮ ಮಾರಾಟಗಾರರು ನಿಗದಿತ ಸಮಯಕ್ಕೆ ಪೂರೈಕೆ ಮಾಡುವ ನಿಟ್ಟಿನಲ್ಲಿ ಹಿಂದೆ ಉಳಿದಿರುತ್ತಾರೆ ಮತ್ತು ವಾರಾಂತ್ಯದಲ್ಲಿ ಕೆಲಸ ಮಾಡುವಂತೆ ತಂಡದ ಸದಸ್ಯರಿಗೆ ಸೂಚಿಸುತ್ತಾರೆ. ಮಾರಾಟಗಾರರು ಓವರ್‌ಟೈಮ್ ಅನ್ನು ಪಾವತಿಸುವುದಿಲ್ಲ, ಇದರಿಂದ ನಿಮಗೆ ವೆಚ್ಚದ ಹೊರೆ ಹೆಚ್ಚುವುದಿಲ್ಲ ಜತೆಗೆ ನಿಮ್ಮ ಬಜೆಟ್ ನಿರೀಕ್ಷೆಯನ್ನು ಪೂರೈಸಬಹುದು. ಹಾಗಾದರೆ ಅದು ಸರಿ, ಅಲ್ಲವೇ?* ಇರಬಹುದು. ತಂಡದ ಸದಸ್ಯರಿಗೆ ಗಂಟೆ ಆಧಾರಿತವಾಗಿ ವೇತನ ನೀಡಿದರೆ, ಅವರು ಓವರ್‌ಟೈಮ್‌ಗೆ ಕಾನೂನುಬದ್ಧವಾಗಿ ಅರ್ಹರಾಗಿರುತ್ತಾರೆ. ಮಾರಾಟಗಾರರು ನಿಮಗೆ ಖರ್ಚನ್ನು ವರ್ಗಾಯಿಸದಿದ್ದರೂ ಸಹ, ಆ ಓವರ್ ಟೈಮ್ ಅನ್ನು ಮಾರಾಟಗಾರರು ಪಾವತಿಸಬೇಕು. ತಮ್ಮ ತಂಡದ ಸದಸ್ಯರನ್ನು ಕೆಟ್ಟದಾಗಿ ನಡೆಸಿಕೊಳ್ಳುವ ಕಂಪನಿಗಳೊಂದಿಗೆ ಕೆಲಸ ಮಾಡಲು ನಾವು ಬಯಸುವುದಿಲ್ಲ. ನಿಮ್ಮ ವ್ಯವಸ್ಥಾಪಕರ ಜೊತೆ ಮಾತನಾಡಿ ಮತ್ತು ಬೇರೆ ಯಾವುದೇ ಸ್ಥಳಗಳಲ್ಲಿ ಈ ಮಾರಾಟಗಾರರ ಜತೆ ವ್ಯವಹಾರ ಮಾಡಲಾಗುತ್ತಿದೆಯೇ ಎಂದು ಚರ್ಚಿಸಿ. ಇನ್ನಷ್ಟು ಕ್ರಮ ಅಗತ್ಯವಾಗಬಹುದು.

## ತಪ್ಪು ಮಾರ್ಗ.

**ಕೆಟ್ಟ ವರ್ತನೆಯನ್ನು ಕಡೆಗಣಿಸುವುದು.** *ಮಹಿಳೆಯರು ಮತ್ತು ಅಲ್ಪಸಂಖ್ಯಾತರ ವಿರುದ್ಧ ನಮ್ಮ ಒಬ್ಬ ಮಾರಾಟಗಾರರು ತಾರತಮ್ಯ ಮಾಡುತ್ತಿರುವ ವಿಷಯವನ್ನು ಸಾಮಾಜಿಕ ಜಾಲತಾಣಗಳಲ್ಲಿ ನೀವು ನೋಡುತ್ತೀರಿ. ಆದರೆ, ಇದು Tennecoಗೆ ಸಂಬಂಧಿಸಿಲ್ಲವಾದ್ದರಿಂದ, ನೀವು ಅದನ್ನು ಕಡೆಗಣಿಸುತ್ತೀರಿ. ಇದರಲ್ಲಿ ಏನಾದರೂ ಸಮಸ್ಯೆ ಇದೆಯೇ?* ಹೌದು. ನಮ್ಮ ಮಾರಾಟಗಾರರು ನಮ್ಮನ್ನು ಪ್ರತಿನಿಧಿಸುತ್ತಾರೆ. ನಾವು ಅವರನ್ನು ನಮ್ಮ ವ್ಯಾಪಾರ ಪಾಲುದಾರರಾಗಿ ಆಯ್ಕೆ ಮಾಡುತ್ತೇವೆ, ಮತ್ತು ಅವರು ಅನೈತಿಕವಾಗಿ ವರ್ತಿಸಿದರೆ, ಅವರೊಂದಿಗಿನ ನಮ್ಮ ಸಂಬಂಧದ ಹಿನ್ನೆಲೆಯಲ್ಲಿ ಅವರ ಕೆಟ್ಟ ವರ್ತನೆಯನ್ನೂ ನಾವು ಬೆಂಬಲಿಸಿದಂತಾಗುತ್ತದೆ. ನಾವು ಹಾಗೆ ಮಾಡುವುದಿಲ್ಲ. ನಾವು ಯಾವಾಗಲೂ ಪ್ರಾಮಾಣಿಕತೆಯೊಂದಿಗೆ ಕೆಲಸ ಮಾಡುತ್ತೇವೆ. ಒಂದು ವೇಳೆ ಅನುಚಿತ ಅಥವಾ ಕಾನೂನುಬಾಹಿರವಾದುದರ ಬಗ್ಗೆ ಒಂದು ಸಣ್ಣ ಸುಳಿವು ಸಿಕ್ಕರೂ ತಕ್ಷಣ ಮಾತನಾಡಿ, ಇದರಿಂದ ಸೂಕ್ತ ವ್ಯಕ್ತಿಗಳು ಸಂಬಂಧವನ್ನು ಮರುಮೌಲ್ಯಮಾಪನ ಮಾಡಲು ಸಾಧ್ಯವಾಗುತ್ತದೆ.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಇತರ ವ್ಯಕ್ತಿಗಳೊಡನೆ ಕೆಲಸ ಮಾಡುವಾಗ ನಾನು ಏನನ್ನು ಗಮನಿಸಬೇಕು?

ನಾವು ನಮ್ಮೊಂದಿಗೆ, ನಮಗಾಗಿ ಮತ್ತು ನಮ್ಮ ಪರವಾಗಿ ಕೆಲಸ ಮಾಡುವ ಪ್ರತಿಯೊಬ್ಬರಿಂದಲೂ ಕೆಳಗಿನ ವಿಷಯಗಳನ್ನು ನಿರೀಕ್ಷಿಸುತ್ತೇವೆ:

- ವೈವಿಧ್ಯತೆ ಮತ್ತು ಸೇರ್ಪಡೆಗಳನ್ನು ಉತ್ತೇಜಿಸುವುದು.
- ಸೂಕ್ತವಾದ ವೇತನವನ್ನು ನೀಡುವುದು.
- ಸುರಕ್ಷಿತ ಕೆಲಸದ ಪರಿಸ್ಥಿತಿಗಳನ್ನು ಖಚಿತಪಡಿಸಿಕೊಳ್ಳುವುದು.
- ಎಲ್ಲರನ್ನೂ ಸಮಾನವಾಗಿ ಕಾಣುವುದು.
- ಕಾರ್ಮಿಕರನ್ನು ದೈಹಿಕ ಶಿಕ್ಷೆ ಮತ್ತು ಬಲವಂತದ ದುಡಿಮೆಯಿಂದ ರಕ್ಷಿಸುವುದು.
- ಬಾಲ ಕಾರ್ಮಿಕರು ಮತ್ತು ಮಾನವ ಕಳ್ಳಸಾಗಣೆ ವಿರುದ್ಧ ಹೋರಾಡುವುದು.
- ನಮ್ಮ ಮೂಲ ಮೌಲ್ಯಗಳು ಮತ್ತು ಕಾನೂನನ್ನು ಗೌರವಿಸುವುದು –ಹಣ ಉಳಿಸಲು ಎಂದಿಗೂ ರಾಜಿ ಮಾಡಿಕೊಳ್ಳದಿರುವುದು.

## ದಿ ಗ್ಯಾರೇಜ್

ಪೂರೈಕೆದಾರರ ನೀತಿ ಸಂಹಿತೆ
ಮಾನವ ಹಕ್ಕುಗಳ ಹೇಳಿಕೆ

# ಪರಿಸರವನ್ನು ರಕ್ಷಿಸುವುದು

## ತಲುಪಬೇಕಾದ ಗುರಿ

ನಾವು "ಏನು" ಮಾಡುತ್ತೇವೆಯೋ ಆ ಯಶಸ್ಸಿಗೆ ನಾವು "ಹೇಗೆ" ಮಾಡುತ್ತೇವೆ ಎಂಬುದನ್ನು ಅರ್ಥಮಾಡಿಕೊಳ್ಳುವುದೂ ಅಷ್ಟೇ ನಿರ್ಣಾಯಕವಾಗಿರುತ್ತದೆ.


## ನಾವು ಅದನ್ನು ಹೇಗೆ ಸಾಧಿಸುವುದು

ನಾಳೆಯನ್ನು ಉತ್ತಮಗೊಳಿಸಲು ನಾವು ಬದ್ಧರಾಗಿದ್ದೇವೆ. ಇದರರ್ಥ ನಾವು ಭೂಮಿಯನ್ನು ರಕ್ಷಿಸುತ್ತೇವೆ, ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುತ್ತೇವೆ ಮತ್ತು ಮಾಲಿನ್ಯವನ್ನು ತಡೆಗಟ್ಟುತ್ತೇವೆ.

ಕಾರ್ಯವಿಧಾನವನ್ನು ಸುಧಾರಿಸಲು, ವಸ್ತುಗಳನ್ನು ಮರುಬಳಕೆ ಮಾಡಲು ಮತ್ತು ನಮ್ಮ ಉತ್ಪನ್ನಗಳು ಹಾಗೂ ಸೇವೆಗಳನ್ನು ಖರೀದಿಸುವಾಗ ಗ್ರಾಹಕರಿಗೆ ಹೆಚ್ಚು ಸುಸ್ಥಿರ ಆಯ್ಕೆಗಳನ್ನು ನೀಡಲು ನೆರವಾಗಲು ಸದಾ ಮಾರ್ಗಗಳನ್ನು ಹುಡುಕುವ ಮೂಲಕ ನಾವು ನಮ್ಮ ಕೊಡುಗೆಯನ್ನು ನೀಡುತ್ತೇವೆ.

### ನೈತಿಕ ವರ್ತನೆಗೆ ಮಾದರಿ.

**ನಿಮ್ಮ ಹೆಜ್ಜೆಗುರುತನ್ನು ಕಡಿಮೆ ಮಾಡುವುದು.** *ಘಟಕದಲ್ಲಿ ನಮ್ಮ ಇಂಧನ ಬಳಕೆಯಲ್ಲಿ ಶೇ 40% ರಷ್ಟನ್ನು ಕಡಿಮೆ ಮಾಡಲು ಒಂದು ಮಾರ್ಗವನ್ನು ನೀವು ಗುರುತಿಸುತ್ತೀರಿ. ಅದು ನಿಮ್ಮ ಕೆಲಸದ ಜವಾಬ್ದಾರಿಯ ಭಾಗವಲ್ಲ, ಆದರೂ ನೀವು ಅದನ್ನು ನಿಮ್ಮ ಬಾಸ್ ಬಳಿ ಪ್ರಸ್ತಾಪಿಸುತ್ತೀರಿ. ಇದು ಒಳ್ಳೆಯ ಉಪಾಯವೇ?* ಖಂಡಿತವಾಗಿಯೂ! ನಾವು ನಮ್ಮನ್ನು ಪೋಷಿಸುವ ಭೂಮಿಯ ಬಗ್ಗೆ ಸದಾ ಕಾಳಜಿ ವಹಿಸಲು ನಾವು ಪ್ರಯತ್ನಿಸುತ್ತಿದ್ದೇವೆ. ನಾವು ಯಾವಾಗಲೂ ಪ್ರಾಮಾಣಿಕತೆಯೊಂದಿಗೆ ಕೆಲಸ ಮಾಡುತ್ತೇವೆ. ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಲು ಅಥವಾ ತ್ಯಾಜ್ಯ ಅಥವಾ ತ್ಯಾಜ್ಯ ಹೊರಸೂಸುವಿಕೆಗಳನ್ನು ಕಡಿಮೆ ಮಾಡಲು ನೀವು ಮಾರ್ಗವನ್ನು ಕಂಡುಹಿಡಿದರೆ ಅದರ ಬಗ್ಗೆ ಮಾತನಾಡಿ.



### ಎಚ್ಚರಿಕೆ.

**ಸಣ್ಣ ಪುಟ್ಟ ವಿಷಯಗಳನ್ನು ಗಮನಿಸುವುದು.** *ಇತ್ತೀಚೆಗೆ ಲೈನ್ ಬದಲಾವಣೆಯಿಂದಾಗಿ ಗುಣಮಟ್ಟವೇನೋ ಹೆಚ್ಚಾಗಿದೆ, ಆದರೆ, ತ್ಯಾಜ್ಯವೂ 200% ರಷ್ಟು ಹೆಚ್ಚಾಗಿದೆ. ಅದರಲ್ಲಿ ಏನಾದರೂ ಸಮಸ್ಯೆ ಇದೆಯೇ?* ಕಾಲಕ್ರಮೇಣ, ಹೌದು. ಘಟಕದಲ್ಲಿರುವ ಸೂಕ್ತ ವ್ಯಕ್ತಿಗಳಿಗೆ ಈ ವಿಷಯ ತಿಳಿಸಿ, ಇದರಿಂದ ಅವರು ತ್ಯಾಜ್ಯದ ಪ್ರಮಾಣವು ಏಕೆ ಹೆಚ್ಚಿದೆ ಮತ್ತು ಅದನ್ನು ಕಡಿಮೆ ಮಾಡಲು ಮಾರ್ಗಗಳಾವುವು ಎಂಬುದರತ್ತ ಗಮನ ಹರಿಸಲು ಸಾಧ್ಯವಾಗುತ್ತದೆ.

ನಮ್ಮ ಪೂರೈಕೆಯ ಸರಣಿಯಲ್ಲಿನ ಎಲ್ಲಾ ಉತ್ಪನ್ನಗಳಿಗೆ ನಾವು ಪರಿಸರದ ಮಾನದಂಡಗಳನ್ನು ಪೂರೈಸುತ್ತೇವೆ ಅಥವಾ ಅದನ್ನು ಮೀರಿ ನಿಲ್ಲುತ್ತೇವೆ.



## ತಪ್ಪು ಮಾರ್ಗ.

*ಸಂಭಾವ್ಯ ಅಪಾಯಗಳನ್ನು ಕಡೆಗಣಿಸುವುದು. ನಮ್ಮ ಶೇಖರಣೆ ಸಂಗ್ರಹಾಗಾರವೊಂದರಿಂದ ಹಾನಿಕಾರಕ ದ್ರವ ಸೋರಿಕೆಯಾಗುವುದನ್ನು ನೀವು ಗಮನಿಸುವಿರಿ. ಏನಾದರೂ ಹೇಳುವ ಬದಲು, ನೀವು ಅದರ ಬದಲಿಗೆ ಮತ್ತೊಂದು ಸಂಗ್ರಹಾಗಾರವನ್ನು ಬಳಸುವಿರಿ. ಇದು ಸರಿಯಾದ ಆಯ್ಕೆಯೇ?* ಇಲ್ಲ. ನೀವು ಮಾತನಾಡಬೇಕಿತ್ತು. ಹೀಗೆ ಮಾಡಿದ್ದರೆ ಸೋರಿಕೆ ಮತ್ತು ಅದರಿಂದ ಪರಿಸರಕ್ಕೆ ಆಗಬಹುದಾದ ಹಾನಿಯನ್ನು ತಡೆಯಬಹುದಾಗಿತ್ತು.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಲು ಸಲಹೆಗಳು:

- ಜಲ ಸಂಪನ್ಮೂಲಗಳನ್ನು ರಕ್ಷಿಸಿ.
- ತ್ಯಾಜ್ಯವನ್ನು ಕಡಿಮೆ ಮಾಡಿ.
- ಶಕ್ತಿ (ಎನರ್ಜಿ) ಯನ್ನು ಸಂರಕ್ಷಿಸಿ.
- ಪ್ಯಾಕೇಜಿಂಗ್ ಕಡಿಮೆ ಮಾಡಿ.
- ಜವಾಬ್ದಾರಿಯುತವಾಗಿ ಕೆಲಸ ಮಾಡಿ.

## ದಿ ಗ್ಯಾರೇಜ್

# ಸಮುದಾಯಕ್ಕೆ ಹಿಂದಿರುಗಿಸುವುದು

## ತಲುಪಬೇಕಾದ ಗುರಿ

ನಮ್ಮ ಸುತ್ತಲಿನ ಸಮುದಾಯಗಳ ಮೇಲೆ ಸಕಾರಾತ್ಮಕ ಪ್ರಭಾವ ಬೀರುವುದು.

## ನಾವು ಅದನ್ನು ಹೇಗೆ ಸಾಧಿಸುವುದು

ನಮ್ಮಲ್ಲಿ ಪ್ರತಿಯೊಬ್ಬರಿಗೂ ಬದಲಾವಣೆ ತರುವ ಸಾಮರ್ಥ್ಯವಿದೆ. ಅದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಲು ಮತ್ತು ನಿಮಗೆ ಅರ್ಥಪೂರ್ಣ ಎನಿಸಿದ ರೀತಿಯಲ್ಲಿ ಸಮುದಾಯಕ್ಕೆ ಪ್ರತಿಯಾಗಿ ಕೊಡುಗೆ ನೀಡಲು ನಿಮಗೆ ನಮ್ಮ ಪ್ರೋತ್ಸಾಹ ಸದಾ ಇರುತ್ತದೆ.

ಅಲ್ಲದೆ, ನಮ್ಮ ಸಮಯ, ಪ್ರತಿಭೆ ಮತ್ತು ಸಂಪನ್ಮೂಲಗಳನ್ನು ಒಟ್ಟಿಗೆ ಸೇರಿಸಿದಾಗ, ಒಂದು ಕಂಪನಿಯಾಗಿ ನಾವು ಇನ್ನೂ ಮುಂದುವರಿಯಬಹುದು ಎಂಬುದನ್ನು ನೆನಪಿಡಿ. ದೇಣಿಗೆ ಸಂಗ್ರಹ ಮತ್ತು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸುವ ಮೂಲಕ ನಾವು ವಾಸಿಸುವ ಸಮುದಾಯಗಳಲ್ಲಿ ಬದಲಾವಣೆ ತರಬಹುದು ಮತ್ತು ಉತ್ತಮವಾದುದಕ್ಕಾಗಿ ಕೆಲಸ ಮಾಡಬಹುದು.

### ನೈತಿಕ ವರ್ತನೆಗೆ ಮಾದರಿ.

ವೇಗವರ್ಧಕರಾಗಿರಿ. *ವೈವಿಧ್ಯತೆಯ ಉಪಕ್ರಮಗಳನ್ನು ಬೆಂಬಲಿಸುವ ಸ್ಥಳೀಯ ಸಮುದಾಯದ ಸಂಘಟನೆಯೊಂದಕ್ಕಾಗಿ ದೇಣಿಗೆ ಸಂಗ್ರಹಿಸಲು ನೀವು ಬಯಸುತ್ತೀರಿ, ಆದ್ದರಿಂದ ನೀವು ದೇಣಿಗೆ ಸಂಗ್ರಹ ಮತ್ತು ಸ್ವಯಂಸೇವಕರ ದಿನವನ್ನು ಆಯೋಜಿಸಲು ನಿಮ್ಮ ವ್ಯವಸ್ಥಾಪಕರೊಂದಿಗೆ ಚರ್ಚಿಸುತ್ತೀರಿ. ಸರಿಯಾದ ಆಯ್ಕೆಯೇ?* ಖಂಡಿತವಾಗಿ. ನಾವು ಎಲ್ಲರನ್ನೂ ಒಳಗೊಳ್ಳುವಿಕೆ ಮತ್ತು ವೈವಿಧ್ಯತೆಯನ್ನು ಉತ್ತೇಜಿಸುತ್ತೇವೆ ಮತ್ತು ಇದನ್ನು ಮಾಡಲು ಇದೊಂದು ಮಾರ್ಗವಾಗಿದೆ. ನೀವು ಕೆಲಸದ ಹೊರಗೆ ಸ್ವಯಂ ಸೇವಕರಾಗಿದ್ದರೆ, ನಿಮ್ಮ ಭಾಗವಹಿಸುವಿಕೆಯು ನಿಮ್ಮ ಕೆಲಸದ ಮೇಲೆ ನಕಾರಾತ್ಮಕ ಪರಿಣಾಮ ಬೀರುವುದಿಲ್ಲ ಅಥವಾ ಸಂಘರ್ಷವನ್ನು ಉಂಟುಮಾಡುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ. ನಿಮ್ಮ ವ್ಯವಸ್ಥಾಪಕರ ಜೊತೆ ಮೊದಲು ಮಾತನಾಡುವುದು ಉತ್ತಮ ವಿಧಾನವಾಗಿರಬಹುದು.



## ಎಚ್ಚರಿಕೆ.

**ಮೊದಲು ಕೇಳುವುದು.** *ಒಬ್ಬ ಗ್ರಾಹಕ ತಾನು ಬೆಂಬಲಿಸುವ ಒಂದು ಉದ್ದೇಶಕ್ಕಾಗಿ ದೇಣಿಗೆಯನ್ನು ಕೇಳುತ್ತಾನೆ. ನೀವು ಸಮುದಾಯವನ್ನು ಬೆಂಬಲಿಸಲು ಮತ್ತು ಗ್ರಾಹಕರೊಂದಿಗೆ ನಿಮ್ಮ ಸಂಬಂಧವನ್ನು ಸುಧಾರಿಸಲು ಬಯಸುತ್ತೀರಿ. ಅದು ಸರಿಯೆ?* ಬಹುಶಃ ಇರಬಹುದು. ಈ ವಿಚಾರದಲ್ಲಿ ಸೂಕ್ತ ನಿರ್ಧಾರಕ್ಕಾಗಿ ವ್ಯವಸ್ಥಾಪಕರೊಬ್ಬರು ಅಥವಾ ಮಾನವ ಸಂಪನ್ಮೂಲ ವಿಭಾಗದ ಯಾರೊಂದಿಗಾದರೂ ಮಾತನಾಡಿ. ನಮ್ಮ ಸಮುದಾಯಗಳನ್ನು ಬೆಂಬಲಿಸಲು ನಾವು ಬಯಸುತ್ತಿರಬಹುದಾದರೂ, ದೇಣಿಗೆಯ ಅಗತ್ಯವು ನ್ಯಾಯಸಮ್ಮತವಾಗಿದೆ ಮತ್ತು ನಮ್ಮ ಪ್ರಾಮಾಣಿಕತೆಗೆ ಬದ್ಧವಾಗಿರುವುದಕ್ಕೆ ಹೊಂದಾಣಿಕೆಯಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಆ ಕುರಿತು ಅಧ್ಯಯನ ನಡೆಸಬೇಕು. ಇದನ್ನು ನಂಬುವುದು ಕಷ್ಟವಾದರೂ  ಕೆಲವೊಮ್ಮೆ ದೇಣಿಗೆಯನ್ನು ಕಿಕ್‌ಬ್ಯಾಕ್ ಅಥವಾ ಲಂಚ ನೀಡಲು ಬಳಸಲಾಗುತ್ತದೆ.

## ತಪ್ಪು ಮಾರ್ಗ.

**ವೈಯಕ್ತಿಕ ದೇಣಿಗೆಯೊಂದಿಗೆ ವ್ಯವಹಾರವನ್ನು ಬೆರೆಸುವುದು.** *ನೀವು ವೈಯಕ್ತಿಕ ದತ್ತಿ ಚಟುವಟಿಕೆಯಲ್ಲಿ ಭಾಗಿಯಾಗಿದ್ದೀರಿ ಮತ್ತು ನಮ್ಮ ಕೆಲವು ಪೂರೈಕೆದಾರರಿಂದ ಕೊಡುಗೆ ಕೇಳಲು Tennecoದ ಲೆಟರ್‌ಹೆಡ್ ಅನ್ನು ಬಳಸಲು ಬಯಸುತ್ತೀರಿ. ಇದು ಸರಿಯೇ?* ಇಲ್ಲ. Tenneco ಲೆಟರ್‌ಹೆಡ್ ಬಳಸುವ ಮುನ್ನ ನೀವು ಅನುಮೋದನೆ ಪಡೆಯಬೇಕು. ಸಂಭಾವ್ಯ ಹಿತಾಸಕ್ತಿಯ ಸಂಘರ್ಷವನ್ನು ತಪ್ಪಿಸಲು- ಕನಿಷ್ಠ ಮೇಲ್ನೋಟಕ್ಕೆ ಅಂತಹ ಹಿತಾಸಕ್ತಿಯ ಸಂಘರ್ಷ ಕಾಣುವುದನ್ನು ತಪ್ಪಿಸಲು ನಮ್ಮ ಸಂವಹನ ತಂಡದೊಂದಿಗೆ ಚರ್ಚಿಸಿ, ವೈಯಕ್ತಿಕ ದತ್ತಿ (ಚಾರಿಟಿ) ಚಟುವಟಿಕೆಗಳಿಗೆ ಪೂರೈಕೆದಾರರನ್ನು Tenneco ಹೇಗೆ ತೊಡಗಿಸಿಕೊಳ್ಳುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಿ. ಪೂರೈಕೆದಾರರೊಂದಿಗಿನ ನಮ್ಮ ಸಂಬಂಧಗಳು ಕೇವಲ ವ್ಯಾಪಾರದ ಮೇಲೆ ಆಧಾರಿತವಾಗಿರಬೇಕು.

## ಮುಂದಾಳತ್ವ ವಹಿಸಿ (ನಿಮ್ಮ ಪರವಾನಗಿಯನ್ನು ಉಳಿಸಿಕೊಳ್ಳಲು ಸಲಹೆಗಳು)

### ಸಮಾಜಕ್ಕೆ ಒಳ್ಳೆಯದನ್ನು ಹಿಂತಿರುಗಿಸಲು ಸಲಹೆಗಳು:

ನಮ್ಮ ತಂಡದ ಹಲವು ಸದಸ್ಯರು ವೈಯಕ್ತಿಕ ದೇಣಿಗೆಗಳ ಬಗ್ಗೆ ಹೊಂದಿರುವ ಬದ್ಧತೆ ಮತ್ತು ನಾವು ತಂಡವಾಗಿ ಮಾಡಿದ ಕೆಲವು ಬದ್ಧತೆಗಳ ಬಗ್ಗೆ ನಮಗೆ ಹೆಮ್ಮೆ ಇದೆ.

- ದೇಣಿಗೆಗಳನ್ನು ಬೆಂಬಲಿಸಲು ಕಂಪನಿಯ ಇತರ ಅವಕಾಶಗಳನ್ನು ಮೌಲ್ಯಮಾಪನ ಮಾಡಲು, ಸಂವಹನಗಳು ಅಥವಾ ಮಾನವ ಸಂಪನ್ಮೂಲ ತಂಡಗಳನ್ನು ಸಂಪರ್ಕಿಸಿ.

## ದಿ ಗ್ಯಾರೇಜ್

# ನಿಮ್ಮ ಪರವಾನಗಿಯನ್ನು ಪಡೆದುಕೊಳ್ಳುವುದು

ಅದು ಅಲ್ಲಿದೆ - ***Tenneco**ದಲ್ಲಿ ಕಾರ್ಯನಿರ್ವಹಿಸಲು ಪರವಾನಗಿಯನ್ನು* ಪಡೆಯಲು ಸಂಗ್ರಹಿಸಬೇಕಾದ ಮಾಹಿತಿ. ನಮ್ಮ ಸಂಹಿತೆಯನ್ನು ಓದಲು ಸಮಯ ನೀಡಿದ್ದಕ್ಕಾಗಿ ಮತ್ತು ನಮ್ಮ ಯಶಸ್ಸಿನ ಮುಂದುವರಿಕೆಗೆ ನೀವು ಮಾಡುವ ಎಲ್ಲ ಕೆಲಸಗಳಿಗಾಗಿ ಧನ್ಯವಾದಗಳು. ನಿಮ್ಮ ಬಳಿ ಹೊಸ ಆಲೋಚನೆಗಳು, ಪ್ರಶ್ನೆಗಳು ಮತ್ತು ಕಾಳಜಿಗಳು ಇದ್ದಾಗ ಮಾತನಾಡಿದ್ದಕ್ಕಾಗಿ ಧನ್ಯವಾದಗಳು.

Tennecoದಲ್ಲಿ ಸುದೀರ್ಘ ಪ್ರಯಾಣಕ್ಕಾಗಿ ನಮ್ಮ ಸಂಹಿತೆಯನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಇದು ನಮ್ಮ ಉದ್ದೇಶ ಮತ್ತು ಮೂಲ ಮೌಲ್ಯಗಳಿಗೆ ನೀರುಣಿಸುತ್ತದೆ ಮತ್ತು ನಮ್ಮ ಅಂತಿಮ ಗಮ್ಯಸ್ಥಾನಕ್ಕೆ ತಲುಪಲು ದಾರಿ ಸೂಚಿಸುತ್ತದೆ: ಪ್ರಾಮಾಣಿಕತೆಯಿಂದ ನಮ್ಮ ವ್ಯಾಪಾರವನ್ನು ನಿರ್ವಹಿಸುವುದು.

ನೀವು ಸಿದ್ಧರಿದ್ದರೆ, ಅಂದರೆ ಓದಿ, ಅರ್ಥಮಾಡಿಕೊಂಡಿದ್ದೀರಿ ಮತ್ತು ಸಂಹಿತೆಯನ್ನು ಪಾಲಿಸುವಿರಿ ಎಂದಾದರೆ ಕೆಳಗೆ ನಿಮ್ಮ ಹೆಸರಿನೊಂದಿಗೆ ಸಹಿ ಮಾಡಿ:

ಹಸ್ತಾಕ್ಷರ: ________________________________________

ದಿನಾಂಕ: ________________________________________

ನೀವು ಈಗ ***Tenneco**ದಲ್ಲಿ ಕಾರ್ಯನಿರ್ವಹಿಸಲು ಪರವಾನಗಿ* ಹೊಂದಿದ್ದೀರಿ. ದಯವಿಟ್ಟು ಈ ಸಹಿ ಮಾಡಿದ ಪುಟವನ್ನು ನಿಮ್ಮ ಎಚ್‌ಆರ್ ಪ್ರತಿನಿಧಿಗೆ ತಲುಪಿಸಿ.




ವ್ಯಾಲೆಟ್ ಕಾರ್ಡ್ ಅನ್ನು ಮುದ್ರಿಸಿ, ಗಾತ್ರಕ್ಕೆ ಕತ್ತರಿಸಿ ಮತ್ತು ಚುಕ್ಕೆಗಳ ಸಾಲನ್ನು ಮಡಿಚಿ.